॥ ಶ್ರೀ ಗುರು ಬಸವ ಲಿಂಗಾಯನಮಃ ॥



# ಲಿಂಗಾಯತ ದರ್ಶನ

## ಮಾಸಿಕ

**ಸಂಪುಟ : ೬** **ಸಪ್ಟಂಬರ್ ೨೦೧೯** **ಸಂಚಿಕೆ : ೯**


ಮಾರ್ಗದರ್ಶನ

**ಪೂಜ್ಯಶ್ರೀ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು**

ರುದ್ರಾಕ್ಷಿಮಠ, ನಾಗನೂರು-ಬೆಳಗಾವಿ

ತೋಂಟದಾರ್ಯ ಸಂಸ್ಥಾನಮಠ, ಗದಗ-ಡಂಬಳ

**ಸಂಪಾದಕ**

**ಡಾ॥ ಎನ್. ಜಿ. ಮಹಾದೇವಪ್ಪ**

**ಸಹ ಸಂಪಾದಕ**

**ಡಾ॥ ರಾಮಕೃಷ್ಣ ಮರಾಠೆ**

**ಸಂಪಾದಕ ಮಂಡಳಿ**

ಡಾ॥ ಗುರುಲಿಂಗ ಕಾಪಸೆ — ಡಾ॥ ಸಿ. ಕೆ. ನಾವಲಗಿ

ಶ್ರೀ ಆರ್. ಪಿ. ಅಪರಾಜ — ಡಾ॥ ವಿ. ಎಸ್. ಮಾಳಿ

ಡಾ॥ ಬಸವರಾಜ ಜಗಜಂಪಿ — ಶ್ರೀ ಬಿ. ಬಿ. ಹೊಸಮನಿ

ಡಾ. ಎಂ. ಎಸ್. ಹುಲ್ಲೋಳಿ — ಶ್ರೀಮತಿ ನೀಲಗಂಗಾ ಚರಂತಿಮಠ



**ಪ್ರಕಾಶಕರು**

ಕಾರ್ಯದರ್ಶಿ ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ

**ವಚನ ಅಧ್ಯಯನ ಕೇಂದ್ರ**

ನಾಗನೂರು ಶ್ರೀ ರುದ್ರಾಕ್ಷಿಮಠ, ಶಿವಬಸವನಗರ

ಬೆಳಗಾವಿ-೫೯೦೦೧೦

**ದೂ:೦೮೩೧-೨೪೦೬೧೫೬** ***email:basavaguru@rediffmail.com***

***Web: www.rudrakshimath.in***

**ಚಂದಾವಿವರ**

| | | |
|---|---|---|
| ಮಹಾಪೋಷಕರು | ರೂ. | ೧೦,೦೦೦=೦೦ |
| ಪೋಷಕರು | ರೂ. | ೫೦೦೦=೦೦ |
| ಆಜೀವ | ರೂ. | ೩೦೦೦=೦೦(೨೦ ವರ್ಷ) |
| ಆರು ವರ್ಷದ | ರೂ. | ೧೦೦೦=೦೦ |
| ಒಂದುವರ್ಷದ | ರೂ. | ೨೦೦=೦೦ |
| ಬಿಡಿ ಪ್ರತಿ | ರೂ. | ೨೦=೦೦ |

ಚಂದಾಹಣವನ್ನು ನಗದು ಅಥವಾ **'ವಚನ ಅಧ್ಯಯನ ಕೇಂದ್ರ'** ಹೆಸರಿನಲ್ಲಿ ಕ್ರಾಸ್ ಮಾಡಿದ ಡಿ.ಡಿ/ಚೆಕ್‌ಮುಖಾಂತರ**"ನಿರ್ದೇಶಕರು, ವಚನ ಅಧ್ಯಯನ ಕೇಂದ್ರ ನಾಗನೂರು ರುದ್ರಾಕ್ಷಿಮಠ, ಶಿವಬಸವ ನಗರ, ಬೆಳಗಾವಿ-೫೯೦ ೦೧೦"** ಈ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ.


**ಅಂತರಂಗದೊಳಗೆ.....**


* ಸಂಪಾದಕೀಯ ೨

* ವಚನಾರ್ಥ-ಚಿಂತನ ೪
  - **ಡಾ. ಸಿದ್ಧರಾಮ ಸ್ವಾಮಿಗಳು**

* ಸ್ಮರಣೀಯ ಬಿ. ವ್ಹಿ. ಮಲ್ಲಾಪುರ ೬
  - **ಬಾಳಣ್ಣ ಶೀಗೀಹಳ್ಳಿ**

* ಬಸವಣ್ಣನಿಂದ ಬದುಕಿತ್ತೀ ಲೋಕವೆಲ್ಲ ೧೦
  - **ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು**

* ಉಡಿಯ ಲಿಂಗವ ಬಿಟ್ಟು ಗುಡಿಯ ಲಿಂಗಕ್ಕೆ ಶರಣೆಂದವರಿಗೇನೆಂಬೆ?... ೧೨
  - **ವೆಂಕಟೇಶ ಕೆ. ಜನಾದ್ರಿ**

* ಪ್ರಾಪಂಚಿಕ ಬದುಕಿನಲ್ಲಿ ಸಾಧನೆಗೈದ ಮೋಳಿಗೆ ಮಹಾದೇವಿ ೧೬
  - **ಶ್ರೀಧರ ಗೌಡರ**

* ಉರಿಲಿಂಗ ಪೆದ್ದಿ ೧೮
  - **ಶ್ರೀ ಶ್ರೀಶೈಲ ಪ. ಕಳಸದ**

* ಇಷ್ಟಲಿಂಗ ೨೨
  - **ಶ್ರೀ ಆರ್. ಪಿ. ಅಪರಾಜ**

* ಶರಣರು ಮತ್ತು ಆಹಾರ ಸಂಸ್ಕೃತಿ ೨೫
  - **ಎ. ಕೆ. ಜಯವೀರ**

* ಪುಸ್ತಕ ಪರಿಚಯ ೨೯
  - **ಡಾ. ಎಂ. ಎಸ್. ಹುಲ್ಲೋಳಿ**


ಇಲ್ಲಿಯ ಲೇಖನಗಳ ಅಭಿಪ್ರಾಯಗಳು ಲೇಖಕರವೇ ಹೊರತು ಪತ್ರಿಕೆಯ ಅಭಿಪ್ರಾಯಗಳಲ್ಲ. **-ಸಂ**

ಸಂಪಾದಕೀಯ

# ಕಾಡಿದ ಮಳೆ, ಕಾಡುವ ಚರಿತ್ರೆ

**ಒರತೆಗಳ ಕಂಡಿಂತು ಕೆಲರೀ ಬಾವಿಯ ತೋಡೆಂಬರು**
**ಸುರಿವ ಮಳೆ ಸುರಿಯದಿದ್ದಡೆ**
**ಅವರೇತರಲ್ಲಿ ನೀಡುವರಯ್ಯಾ ! ರಾಮನಾಥ**
**ಸುತ್ತಿ ಹರಿವ ನದಿ ಸಾಗರವೆಲ್ಲಾ ನಿಮ್ಮ ದಾನ**

ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದ, ನದಿಗಳಿಗೆ ಬಂದ ಮಹಾಪೂರದಿಂದ, ನೀರುಪಾಲಾದ ಜನ ಜೀವನ–ಪಶು ಪಕ್ಷಿಗಳ ಭೀಕರ ಪರಿಸ್ಥಿತಿಯಿಂದ ನಾವಿನ್ನೂ ಸುಧಾರಿಸಿಕೊಂಡಿಲ್ಲ. ನದಿಗಳಿಗೆ ಬಂದ ಮಹಾಪೂರ ಇಳಿದರೂ ಅದು ಉಂಟುಮಾಡಿದ ತಲ್ಲಣಗಳಿಂದ ಬದುಕು ಇನ್ನೂ ಸಹಜ ಸ್ಥಿತಿಗೆ ಮರಳಿಲ್ಲ. ಉತ್ತರ ಕರ್ನಾಟಕ, ದಕ್ಷಿಣ ಮಹಾರಾಷ್ಟ್ರ, ಉತ್ತರಾಖಂಡ, ಪಂಜಾಬ, ಹಿಮಾಚಲ ಪ್ರದೇಶಗಳ ಕೆಲವು ಭಾಗಗಳಲ್ಲಿ ಬಿದ್ದ ಮಳೆ, ಧುಮ್ಮಿಕ್ಕಿದ ನೀರು, ಜಾರಿ ಬಿದ್ದ ಗುಡ್ಡಗಳ ಆ ದೃಶ್ಯಗಳನ್ನು ನೆನಪಿಸಿಕೊಂಡರೆ ನಿಜಕ್ಕೂ ನಡುಕ ಹುಟ್ಟುತ್ತದೆ.

**'ಬಂತು ಶ್ರಾವಣಾ ಕುಣಿದ್ಹಾಂಗ ರಾವಣ, ಗುಡ್ಡ ಗುಡ್ಡ ಸ್ಥಾವರಲಿಂಗ ಅವುಕ ಅಭ್ಯಂಗ'** ಎನ್ನುವ ದ. ರಾ. ಬೇಂದ್ರೆಯವರ ಕವನ ಸಾಲು ಈ ಸಲದ ಮಳೆಗೆ ಸರಿಯಾದ ರೂಪಕವೆನಿಸಿತು. ಬಯಲಾಟಗಳಲ್ಲಿ ಕುಣಿಯುವ ರಾವಣನನ ಕುಣಿತಕ್ಕಿಂತಲೂ ಭಯಂಕರವಾಗಿತ್ತು ಈ ಮಳೆಯ ಆರ್ಭಟ. **'ಹುಯ್ಯೋ ಹುಯ್ಯೋ ಮಳೆರಾಯ ಹೂವಿನ ತೋಟಕೆ ನೀರಿಲ್ಲ'** ಎಂದು ಹಾಡುತ್ತಿದ್ದವರು ಗುರ್ಜಿ ಹೊತ್ತು **'ಸುಣ್ಣಾ ಕುಡತೀನಿ ಸುರಿಯಲೆ ಮಳೆಯೆ, ಕಾಚಾ ಕುಡತೀನಿ ಕಾರಲೆ ಮಳೆಯೆ'** ಎಂದು ಮಳೆಯನ್ನು ಕರೆಯುತ್ತಿದ್ದ ಹುಡುಗರೆ ಈ ಸಲದ ಮಳೆಗೆ ಹಿಡಿ ಶಾಪ ಹಾಕಿದರು. ಮಳೆ ಬೇಕು, ಅದು ಜೀವ ಜಲ. ಅದು ಬರಲೇಬೇಕು. ಆದರೆ ಈ ರೌದ್ರಾವತಾರದಲ್ಲಿ ಬರುವುದು ಸರಿಯಲ್ಲ ಎಂದು ಜನ ಆಡಿಕೊಳ್ಳುವಂತಾಯಿತು ಇಂಥ ಅತಿವೃಷ್ಟಿ. ಹಸಿ ಬರಗಾಲ, ನಮ್ಮ ಹಿರಿಯರೂ ಅನುಭವಿಸಿದ್ದುಂಟು. ಆದರೆ ಇಷ್ಟು ಹಾನಿಯಾಗಿರಲಿಲ್ಲ ಇದಕ್ಕೆ ಕಾರಣ ನೀರಿಗೆ ದಾರಿ ಬಿಡಲಾರದ ಹಾಗೆ; ಇತ್ತೀಚಿನ ಮನುಷ್ಯ ಭೂಮಿಯನ್ನು ಆವರಿಸಿಕೊಳ್ಳುತ್ತಿದ್ದಾನೆ. ನದಿ ದಡದ ರೈತರು ನದಿಯ ಪಾತ್ರವನ್ನು ಕಿರಿದು ಮಾಡಿ ಸಾಗುವಳಿಗೆ ಭೂಮಿ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ನದಿಯ ಆಳ ಕಡಿಮೆ ಆಗಿ, ಅದರ ಅಗಲ ಕಡಿಮೆಯಾಗುತ್ತ ನಡೆದಿದೆ. ಹಿಂದಿನ ಕಾಲದಲ್ಲಿ ಊರೂರಿಗೆ ಇದ್ದ ನೈಸರ್ಗಿಕ ಕೆರೆಗಳನ್ನು ಇವತ್ತಿನ ಜನರು ಸಾಗುವಳಿಯ ಭೂಮಿಯನ್ನಾಗಿ ಮಾಡಿಕೊಂಡದ್ದು ಇಂಥ ದುರಂತಗಳಿಗೆ ಕಾರಣವೆಂಬುದು ತಿಳಿದ ವಿಷಯವೆ. ನಿಸರ್ಗದಿಂದ ಸಂಭವಿಸುವ ಈ ತರಹದ ತೊಂದರೆಗೆ ಮನುಷ್ಯನೂ ಕಾರಣವೆಂಬುದಕ್ಕೆ ಇವು ಒಂದೆರಡು ಉದಾಹರಣೆಗಳಷ್ಟೆ. ಭೂಮಿಯನ್ನು ಅತಿಯಾಗಿ ಆಕ್ರಮಿಸುವ ಮನುಷ್ಯ ತಾನೂ ಅದರ ಒಂದು ಭಾಗವೆಂಬುದನ್ನು ಅರಿಯಬೇಕು. ನಿಸರ್ಗದ ಯೋಗಕ್ಷೇಮ ಕಾಪಾಡುವುದರಲ್ಲಿಯೇ ತನ್ನ ಯೋಗಕ್ಷೇಮವಿದೆ ಯೆಂಬುದನ್ನು ಅರಿತು ನಡೆಯಬೇಕು.

* * *

**ವೇದ ಆಗಮವೇಕೆ? ವಾದ ಓಗುಗಳೇಕೆ?**
**ನಾದ ಬಿಂದುಗಳ ಭ್ರಮೆಯೇಕೆ? ಶರಣರ**
**ಹಾದಿ ಹಿಡಿದವನೆ ಸರ್ವಜ್ಞ**

ನೋಯುವ ಹಲ್ಲಿನತ್ತ ನಾಲಿಗೆ ಮತ್ತೆ ಮತ್ತೆ ಹೊರಳುವಂತೆ ಸಮಕಾಲೀನ ಸಮಾಜದ ಸಮಸ್ಯೆಗಳು ಉಲ್ಬಣಿಸಿದಾಗಲೆಲ್ಲ ಮತ್ತೆ ಮತ್ತೆ ನೆನಪಾಗುವವರು ಕಲ್ಯಾಣದ ಶಿವಶರಣರು, ಬುದ್ಧ, ಮಹಾವೀರ, ಮಹಮ್ಮದ ಪೈಗಂಬರ, ಏಸುಕ್ರಿಸ್ತ, ಮಹಾತ್ಮ ಗಾಂಧೀಜಿಯವರು. ಹೃದಯವಂತರಿಗೆ ಇವರು ಯಾವಾಗಲೂ ಕಾಡುತ್ತಲೇ ಇರುತ್ತಾರೆ. ಅದಮ್ಯವಾದ ಮನುಷ್ಯ ಪ್ರೀತಿ ಇರುವವರಿಗೆ ಮಾತ್ರ ಈ ರೀತಿ ಕಾಡುವ ಶಕ್ತಿ ಇರುತ್ತದೆ. ಕಾಡುವುದು

ಎಂದರೆ ಉತ್ತಮ ಬದುಕಿಗಾಗಿ ಪ್ರೇರೇಪಿಸುವುದು. ಇವರು ಯಾಕೆ ಕಾಡುತ್ತಾರೆ? ಎಂಬುದನ್ನು ಸ್ವಲ್ಪ ಧ್ಯಾನಿಸಿ ನೋಡಬೇಕು. ವೇಗದ ಬದುಕಿನಲ್ಲಿ ಓಡುತ್ತಿರುವ ನಾವು ಸ್ವಲ್ಪ ಹೊತ್ತು ವಿರಮಿಸಬೇಕು. ಮೌನಕ್ಕೆ ಶರಣಾಗಿ ಅಂತರಂಗದ ಜೊತೆಗೆ ಮಾತನಾಡಬೇಕು. ನಾವು ಎಲ್ಲಿದ್ದೇವೆ? ಹೇಗಿದ್ದೇವೆ? ಎಲ್ಲಿಗೆ ಹೋಗಬೇಕಾಗಿದೆ? ನಮ್ಮ ನಡೆ ನುಡಿಗಳು ಹೇಗಿವೆ? ಲಿಂಗತಾರತಮ್ಯದ ಬಗೆಗೆ ನಮ್ಮ ನಿಲುವು ಏನು? ಬಡವ-ಬಲ್ಲಿದವರ ಬಗೆಗೆ ನಮ್ಮ ಭಾವನೆಗಳೇನು? ಬ್ರಾಹ್ಮಣ-ಶೂದ್ರರ ಬಗೆಗೆ ನಮ್ಮ ಆಚರಣೆಗಳೇನು? ನಾವು ಪೂಜಿಸುವ ದೇವರು ಎಂಥವರು? ನಮ್ಮ ಪೂಜೆಯ ವಿಧಾನಗಳು ಹೇಗಿವೆ? ನಮ್ಮ ದುಡಿಮೆ ಎಂತಹುದು? ನಮ್ಮ ಗಳಿಕೆ ಎಷ್ಟು? ಹೀಗೆಯೇ ನಮ್ಮಷ್ಟಕ್ಕೇ ನಾವೇ ನಮಗೆ ಪ್ರಶ್ನೆ ಮಾಡುತ್ತಿರಬೇಕು. ಒಳದನಿ ಪ್ರಾಮಾಣಿಕವಾಗಿರುತ್ತದೆ, ಅದು ಉತ್ತರಿಸುತ್ತ ಹೋಗುತ್ತದೆ. ಅದೇ ಕಾಲಕ್ಕೆ ಬಸವಾದಿ ಶಿವಶರಣರನ್ನು ಜ್ಞಾಪಿಸಿಕೊಳ್ಳಬೇಕು. ಅವರು ಹೇಳಿದ್ದೇನು? ನಡೆದು ತೋರಿಸಿದ್ದೇನು? ಅವರ ವ್ಯಕ್ತಿತ್ವ, ಬದುಕಿದ ರೀತಿ, ನಡೆಸಿದ ಚರ್ಚೆ, ವಚನಗಳು-ಇವನ್ನೆಲ್ಲ ಒಂದಿಷ್ಟು ಹೊತ್ತು ಧ್ಯಾನಿಸಬೇಕು. ಆಗ ನಮಗೆ ಅರಿವಿಗೆ ಬರುವುದು. ಎಂಥ ಸಮಾನತೆಯ ಆಶಯ ಅವರದು? ಅವನ್ನು ನನಸು ಮಾಡಲು ಕಲ್ಯಾಣದಲ್ಲಿ ಕೈಕೊಂಡ ಚಟುವಟಿಕೆಗಳು ಎಂಥವು? ಅನುಭವ ಮಂಟಪ-ಅರಿವಿನ ಮನೆ-ಮಹಾಮನೆ ಎಂಥ ಸುಂದರ ಪರಿಕಲ್ಪನೆಗಳು? ಮನುಷ್ಯ ತನ್ನೊಂದಿಗೆ, ತನ್ನ ಸಮಾಜದೊಂದಿಗೆ, ತನ್ನ ಸುತ್ತಣ ಪರಿಸರದೊಂದಿಗೆ ಹೇಗೆ ಬದುಕಬೇಕು? ಎಂಬುದಕ್ಕೆ ಅವರ ಬದುಕೇ ನಮ್ಮ ಬೆನ್ನ ಹಿಂದಿನ ಬೆಳಕು. ಅಂಥ ಬೆಳಕನ್ನು ನಾವೇಕೆ ಕಣ್ಣಿಟ್ಟು ನೋಡಬಾರದು? ಅವರ ವಚನ ಧ್ವನಿಯನ್ನು ಕಿವಿಗೊಟ್ಟು ಕೇಳಬಾರದು? ಹಾಗೆ ನೋಡಿದರೆ, ಕೇಳಿದರೆ ನಮ್ಮೊಳಗಿನ ಕತ್ತಲೆ ಬೆಳಕಿನ ಸಂಘರ್ಷ ಪ್ರಾರಂಭವಾಗುತ್ತದೆ.

ಎಂಟುನೂರು ವರುಷಗಳ ಹಿಂದೆ ಇದ್ದ ಸಮಾಜ ಎಂತಹದ್ದು? ಇಂದಿನ ಸಮಾಜ ಎಂತಹದ್ದು? ಎಷ್ಟೊಂದು ಬದಲಾಗಿದೆ? ನಮಗಿಂದು ಅವರು ಪ್ರಸ್ತುತರಾಗುವರೇ? ಎಂಬ ಸಂದೇಹ ಬೇಡ. ಸಕಲ ಜೀವಿಗಳ ಲೇಸಿಗಾಗಿ ಅವರು ನಡೆಸಿದ ಚಿಂತನೆಗಳು ರೂಪಿಸಿದ ಯೋಜನೆಗಳು ಯಾವ ಕಾಲಕ್ಕೂ ಅನ್ವಯಿಸುವಂತಹವು. ನಮ್ಮ ಇವತ್ತಿನ ಬಹುತೇಕ ಸಮಸ್ಯೆಗಳಿಗೆ ಶರಣರಲ್ಲಿ ಉತ್ತರಗಳಿವೆ. ದಯವೇ ಧರ್ಮದ ಮೂಲ, ಸತ್ಯ ನುಡಿದರೆ ಸ್ವರ್ಗ, ಕಾಯಕವೇ ಕೈಲಾಸ ಇವು ಕಾಲಬಾಹಿರ ಮೌಲ್ಯಗಳಲ್ಲ. ಅದಕ್ಕೆಂದೆ 'ಮತ್ತೆ ಕಲ್ಯಾಣ' ಎಂಬ ಪರಿಕಲ್ಪನೆ ಒಂದು ಶಕ್ತಿಯಾಗಿ ಸಂಚಲನವನ್ನುಂಟುಮಾಡಲು ಮುಂದಾಗಿದೆ. ಇದರಿಂದ ನಮ್ಮನ್ನು ನಾವು ತಿದ್ದಿಕೊಂಡು ನಮ್ಮ ಸಮಾಜವನ್ನು ಸಮೃದ್ಧಗೊಳಿಸಲು ತೊಡಗಿಸಿಕೊಳ್ಳುವುದು ಎಂದಿಗಿಂತಲೂ ಇಂದಿನ ಅಗತ್ಯವಾಗಿದೆ.

ನಮ್ಮ ನಿತ್ಯದ ಜಂಜಾಟಗಳಲ್ಲಿ, ಕೋಪ ತಾಪದ ಪ್ರಸಂಗಗಳಲ್ಲಿ ಅಕ್ಕನ ಮಾತು 'ಸ್ತುತಿ ನಿಂದೆಗಳು ಬಂದರೆ, ಕೋಪವ ತಾಳದೆ ಸಮಾಧಾನಿಯಾಗಿರಬೇಕು' ಎಂಬುದು ನಮ್ಮ ಒತ್ತಡದ ಬದುಕಿಗೆ ಯಾಕೆ ಔಷಧಿಯಾಗಬಾರದು? ಬಹುತೇಕ ಜನ ನಾವು ಲೋಕಚಿಂತಕರಾಗಿ ಹೊರಗಣ ಬದುಕಿನ ಮೇಲೆ ಕಣ್ಣು ನೆಟ್ಟಿದ್ದೇವೆ. ಲೋಕಸಮಾಚಾರ ಕೇಳಲು ಕಿವಿ ಚಾಚಿದ್ದೇವೆ. ಈ ಸಂದರ್ಭದಲ್ಲಿ ಬಸವಣ್ಣನವರು ಹೇಳುವುದನ್ನು ಕೇಳಬೇಕು.

**ಲೋಕದ ಡೊಂಕು ನೀವೇಕೆ ತಿದ್ದುವಿರಿ**
**ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ**
**ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ**
**ನೆರೆಮನೆಯವರ ದುಃಖಕ್ಕೆ ಅಳುವವರ ಮೆಚ್ಚ ನಮ್ಮ**
**ಕೂಡಲಸಂಗಮದೇವಾ**

ವ್ಯಕ್ತಿಯ ಅಂತರಂಗದ ಶುದ್ಧಿಯಾಗದೆ ಸಮಾಜ ಸುಧಾರಣೆ ಸಾಧ್ಯವಿಲ್ಲ. ಮನದ ಆಶೆ ನಿಯಂತ್ರಿಸಿ ಮನಸಿನ ಸಮಾಧಾನ, ತನುವಿನ ವಿಕಾರ ಗೆದ್ದು ತನುವಿನ ಸಮಾಧಾನ ಸಾಧಿಸಿದರೆ ವ್ಯಕ್ತಿಯ ಅಂತರಂಗ ಶುದ್ಧಿಯಾಗುವದು. ಆಮೇಲೆ ಅದು ಬಹಿರಂಗಕ್ಕೂ ವ್ಯಾಪಿಸಿ ಬದುಕನ್ನು ಹಸನು ಮಾಡುವುದು.

ನೆರೆಸಂತ್ರಸ್ತರ ನೋವಿಗೆ ಮಿಡಿಯುತ್ತ ಈ ಸಂಚಿಕೆ ಹಲವು ಅರ್ಥಪೂರ್ಣ ಲೇಖನಗಳನ್ನು ತಮ್ಮ ಚಿಂತನೆಗೆ ಒದಗಿಸುತ್ತದೆ. ನಿಮ್ಮ ಸಹಕಾರವಿರಲಿ

■■

# ವಚನಾರ್ಥ–ಚಿಂತನ

● ಡಾ. ಸಿದ್ಧರಾಮ ಸ್ವಾಮಿಗಳು

**ಗುರುಲಿಂಗ ಜಂಗಮಕ್ಕೆ ಆಧಾರ ಬಸವಣ್ಣ**
**ಪಾದೋದಕ ಪ್ರಸಾದಕ್ಕೆ ಆಧಾರ ಬಸವಣ್ಣ**
**ಸರ್ವಾಪತ್ತಿಗಾಧಾರ ಬಸವಣ್ಣ**
**ಸ್ವರ್ಗ ಮರ್ತ್ಯಪಾತಾಳಕ್ಕೆ ಬಸವಣ್ಣನ**
**ಚೈತನ್ಯವಲ್ಲದಿಲ್ಲ**
**ಆ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ**
**ಎನುತಿರ್ದಾತನಂಬಿಗರ ಚೌಡಯ್ಯ.**

ಶರಣರಾದ ಅಂಬಿಗರ ಚೌಡಯ್ಯನವರು ಧೀರಗಣಾಚಾರಿಗಳು; ನ್ಯಾಯ ನಿಷ್ಠುರಿಯೆನಿಸಿದವರು; ಹಾಗೆಯೇ ಸತ್ಯದ ಪ್ರತಿಪಾದಕರು. ತತ್ಕಾಲೀನ ಸಮಾಜದ ಕೆಳಸ್ತರದಿಂದ ಬಂದಿರುವ ಚೌಡಯ್ಯನವರು ಸಮಾಜದ ಅಂಕುಡೊಂಕುಗಳನ್ನು ತೀರ ಕಠೋರ ಶಬ್ದಗಳಿಂದ ಖಂಡಿಸಿದ ರೀತಿ ಇಂದಿಗೂ ಪ್ರಸ್ತುತವೆನಿಸುತ್ತದೆ. ಲಿಂಗಾಯತ ಧರ್ಮದ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದಗಳಿಗೆಲ್ಲ ಬಸವಣ್ಣನವರೇ ಆಧಾರ (ಕರ್ತೃ)–ವೆಂದು ಹೇಳಿ ಪ್ರಸ್ತುತ ವಚನದಲ್ಲಿ ಅವರನ್ನು ಚೌಡಯ್ಯನವರು ಹೃತ್ಪೂರ್ವಕವಾಗಿ ಅಭಿವಂದಿಸಿದ್ದಾರೆ.

'ಲಿಂಗಾಯತ' ಎಂಬುದು ಜಾತಿಯಲ್ಲ. ಜಾತಿ, ಮತ, ಪಂಥಗಳ ಭೇದವಿಲ್ಲದೆ ಸಮಸ್ತ ಮಾನವ ಜನಾಂಗದ ಹಿತ ಸಾಧಿಸಬಯಸಿದ ಮಾನವಧರ್ಮ. ಜೈನ, ಬೌದ್ಧ ಧರ್ಮಗಳಂತೆ ವೇದ ಆಗಮ ಶಾಸ್ತ್ರಗಳ ಕರ್ಮಕಾಂಡವನ್ನು ಪ್ರತಿಭಟಿಸಿದ ಸ್ವತಂತ್ರಧರ್ಮ. ಈ ಧರ್ಮಕ್ಕೆ ಆಧಾರವೆನಿಸಿದವರು ಸರ್ವಸಮಾನತೆಯ ಹರಿಕಾರರೆನಿಸಿದ ಮಹಾಮಾನವತಾವಾದಿ ಬಸವಣ್ಣನವರು. ಅಂತೆಯೇ ಇದು ಬಸವಧರ್ಮವೆಂಬ ಪರ್ಯಾಯ ಅಭಿಧಾನಕ್ಕೂ ಪಾತ್ರವಾಗಿದೆ. ಕ್ರೈಸ್ತಧರ್ಮಕ್ಕೆ ಏಸುಕ್ರಿಸ್ತ, ಬೌದ್ಧಧರ್ಮಕ್ಕೆ ಭಗವಾನ್ ಬುದ್ಧ, ಇಸ್ಲಾಂ ಧರ್ಮಕ್ಕೆ ಮಹಮ್ಮದ ಪೈಗಂಬರರು ಕರ್ತೃಗಳಾಗಿರುವಂತೆ ಲಿಂಗಾಯತ (ಬಸವ) ಧರ್ಮದ ಸ್ಥಾಪಕರು ಬಸವಣ್ಣನವರೆಂಬುವಲ್ಲಿ ಎರಡುಮಾತಿಲ್ಲ. ಶರಣ ಅಂಬಿಗರ ಚೌಡಯ್ಯನವರಂಥ ಬಸವಕಾಲೀನ ಶರಣರು, ಸರ್ವಜ್ಞನಂತಹ ಬಸವೋತ್ತರ ಕಾಲದ ವಿಚಾರವಾದಿಗಳು ಈ ಮಾತನ್ನು ಸ್ಪಷ್ಟಡಿಸಿದ್ದಾರೆ. ಲಿಂಗಾಯತ ಧರ್ಮವೆಂಬುದು ನಾಲ್ಕೈದು ಜನ ಬಂಡವಾಳಶಾಹಿಗಳು ಕೂಡಿ ಕಟ್ಟಿದ ಇಂದಿನ ಸಹಕಾರಿ ಸಂಸ್ಥೆಯಲ್ಲ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ಬಸವಣ್ಣನವರು ತಮ್ಮ ಘನವಾದ ವ್ಯಕ್ತಿತ್ವದಿಂದ ವಿಶ್ವವ್ಯಾಪಕವಾಗಿ ಬೆಳೆದು ನಿಂತವರು. ಸಕಲಜೀವಾತ್ಮರಿಗೆ ಲೇಸನೆ ಬಯಸಿ ಮಾನವತೆಯ ಮಂದಾರವೆನಿಸಿದ ಅವರನ್ನು ಯಾವುದೇ ಒಂದು ಧರ್ಮಕ್ಕೆ ಸೀಮಿತಗೊಳಿಸುವುದು ಸರಿಯಾದ ಕ್ರಮವಲ್ಲದಿದ್ದರೂ ಲಿಂಗಾಯತ ಧರ್ಮಕ್ಕೆ ಅವರೇ ಧರ್ಮಗುರು ಎಂದು ಹೇಳದೇ ವಿಧಿಯಿಲ್ಲ. ಏಕೆಂದರೆ ಲಿಂಗಾಯತಕ್ಕೆ ಆದಿ ಮತ್ತು ಆಧಾರವಾದುದು ಲಿಂಗ. ಅದು ಮಾತು ಮನಸ್ಸುಗಳನ್ನು ಮೀರಿದ, ಕಂಗಳಿಗೆ ಅಗೋಚರವಾದ, ನಿರಾಕಾರ–ನಿರವಯ ಸ್ವರೂಪವಾದ ಪರಶಿವ ಚೈತನ್ಯ. ಈ ನಿರಾಕಾರ ಪರಶಿವಲಿಂಗವನ್ನು ಅರುಹಿನ ಕುರುಹಾಗಿ ಕರಸ್ಥಲಕ್ಕೆ ತಂದುಕೊಟ್ಟವರೇ ಬಸವಣ್ಣನವರು. ಆದ್ದರಿಂದಲೇ 'ಆದಿ ಬಸವಣ್ಣ ಅನಾದಿ ಲಿಂಗವೆಂಬುದು ಸುಳ್ಳು, ಬಸವಣ್ಣನಿಂದ ಲಿಂಗವಾದ ಕಾರಣ 'ಅನಾದಿ ಶರಣ ಆದಿ ಲಿಂಗವೆಂಬೆ' ಎಂದು ತೋಂಟದ ಸಿದ್ಧಲಿಂಗ ಶಿವಯೋಗಿಗಳು ಪಡಿನುಡಿದಿದ್ದಾರೆ. ಆದಿ ಎಂದರೆ ಮೂಲ. ಅನಾದಿ ಎಂದರೆ ಮೂಲವಿಲ್ಲದ್ದು. ಲಿಂಗ (ಮಹಾಲಿಂಗ) ಆದಿಯಾದರೆ ಜ್ಞಾನಚಿತ್ತು ಅನಾದಿಯಾದುದು...ನಿರ್ಮಲ ಮಹಾಜ್ಞಾನಚಿತ್ತೆ ಬಸವಣ್ಣ ನೋಡಾ ಎಂದು ಸಿದ್ಧಲಿಂಗಶಿವಯೋಗಿಗಳೇ ಇನ್ನೊಂದೆಡೆ ಸ್ಪಷ್ಟಪಡಿಸಿದ್ದಾರೆ.

ಹರನಿಂದಧಿಕನಾದವನು ಗುರು. ಅವನು

ನಾಗನೂರು ಶ್ರೀ ರುದ್ರಾಕ್ಷಿಮಠ, ಬೆಳಗಾವಿ

ಪರಶಿವನ ಸಾಕಾರ ರೂಪ. ಜಗತ್ತಿನ ಎಲ್ಲ ಧರ್ಮಗಳಲ್ಲಿ ಗುರುವಿಗೆ ಅಗ್ರಸ್ಥಾನ. ಲಿಂಗಾಯತ ಧರ್ಮದ ಮೊದಲ ಗುರು, ಪ್ರಥಮಾಚಾರಿ, ಪೂರ್ವಾಚಾರ್ಯ ಎಂದೆನಿಸಿದವರೇ ಬಸವಣ್ಣನವರು. "ಹರನೆ ತಾ ಗುರುವಾಗಿ ಮರ್ತ್ಯಲೋಕಕೆ ಬಂದು, ಪರತರ ಲಿಂಗವ ಕರಕೆ ತಂದುಕೊಟ್ಟ ಆದಿ ಗುರು ಬಸವ ಸರ್ವಜ್ಞ" ಎಂಬ ಸರ್ವಜ್ಞ ಕವಿಯ ವಚನ ಈ ಮಾತಿಗೆ ನಿದರ್ಶನವೆಂಬಂತಿದೆ. ಹೀಗೆ ಲಿಂಗಾಯತ ಧರ್ಮದ ಸ್ಥಾಪಕ, ಧರ್ಮಗುರು ಎನಿಸಿದ ಬಸವಣ್ಣನವರು ಲಿಂಗಾಯತರಿಗೆಲ್ಲ ಆರಾಧ್ಯರು (ಪೂಜ್ಯನೀಯರು). ಲಿಂಗಾಯತ ಧರ್ಮದ ಆರಾಧ್ಯರೆನಿಸಿದ ಲಿಂಗಜಂಗಮರಿಗೆ ಆಧಾರಸ್ವರೂಪರು. ಏಕೆಂದರೆ ನಿರಾಕಾರ ಪರಶಿವ ಚೈತನ್ಯವು ಸಾಕಾರವಾಗಿ ಇಷ್ಟಲಿಂಗರೂಪದಲ್ಲಿ ಕರಸ್ಥಲಕ್ಕೆ ಬಂದುದೇ ಬಸವಣ್ಣನವರಿಂದ. ಆ ಪೂರ್ವದಲ್ಲಿ ಲಿಂಗವು ಸ್ಥಾವರ ಲಿಂಗವಾಗಿತ್ತು. ಅದು ಗುಡಿಗುಂಡಾರಗಳಲ್ಲಿ ಪ್ರತಿಷ್ಠಾಪಿತವಾಗಿತ್ತು. ಹೀಗೆ ಪ್ರತಿಷ್ಠಾಪಿಸಲ್ಪಟ್ಟ ಲಿಂಗದ ಪೂರ್ವಾಶ್ರಯವನ್ನು ಕಳೆದು ಅದು ಪ್ರಾಣಲಿಂಗ, ನಿನ್ನೊಳಗಿರುವ ಅರಿವು, ಆ ಅರಿವಿನ ಕುರುಹೇ ಇಷ್ಟಲಿಂಗವೆಂದು ತೋರಿದವರು, ಅರುಹಿನ ಕುರುಹ ಹಿಡಿದು, ಆ ಕುರುಹನಳಿದು ಮಹಾಬಯಲಿನಲ್ಲಿ ಬಯಲಾಗುವುದನ್ನು ಕಲಿಸಿದವರು ಬಸವಣ್ಣನವರು. ಹಾಗೆಯೇ ಜಂಗಮವೆಂದರೆ ಭಸ್ಮ, ರುದ್ರಾಕ್ಷಿ ಧರಿಸಿ ಹೊಟ್ಟೆ ಪಾಡಿಗಾಗಿ ಊರೂರು ಅಲೆಯುವ ಲಾಂಛನಧಾರಿ ಎಂಬ ಭಾವವನ್ನು ಅತಿಗಳೆದು ಲಿಂಗದ ನಿಜದರಿವೇ ಜಂಗಮವೆಂದರುಹಿದವರೂ ಬಸವಣ್ಣನವರು. ಈ ದೃಷ್ಟಿಯಿಂದ ಲಿಂಗಜಂಗಮಕ್ಕೆ ಅವರೇ ಆಧಾರ. ಮಹಾಕವಿ ಚಾಮರಸನೂ ಕೂಡ "ಬಸವ ಮಾಡಿದಡಾಯ್ತು ಗುರುನೆಲೆ, ಬಸವ ಮಾಡಿದಡಾಯ್ತು ಲಿಂಗವು, ಬಸವ ಮಾಡಿದಡಾಯ್ತು ಜಂಗಮ ಅರಿವ ಮಹಿಮಂಗೆ" ಎಂದು ಹೇಳಿರುವುದು ಗಮನಾರ್ಹವಾಗಿದೆ.

ಲಿಂಗಾಯತ ಧರ್ಮೀಯರ ಪೂಜಾಫಲಗಳೆನಿಸಿದ ಪಾದೋದಕ ಪ್ರಸಾದಗಳಿಗೂ ಆಧಾರ ಬಸವಣ್ಣನವರು ಎಂದು ಹೇಳಿರುವುದಕ್ಕೆ ಕಾರಣವೆಂದರೆ ಜಂಗಮದ ಪರಿಶುದ್ಧ ಪಾದತೀರ್ಥ ಹಾಗು ಜಂಗಮ ಮುಖದಿಂದ ಹೊರಹೊಮ್ಮುವ ಪ್ರಸಾದವೂ ಬಸವಣ್ಣನವರಿಂದಲೇ ಬಂದುದು. ಜಂಗಮದ ಜ್ಞಾನಪ್ರಸಾದವೆ ನಮ್ಮ ಸರ್ವಾಂಗವನ್ನು ಪರಿಶುದ್ಧಗೊಳಿಸುವ, ಮನಸ್ಸನ್ನು ಪ್ರಸನ್ನಗೊಳಿಸುವ ಪರಮಪ್ರಸಾದವೆಂದು ಅರುಹಿದವರು ಬಸವಣ್ಣನವರು. ಆ ಪೂರ್ವದಲ್ಲಿ ಅದು ಪದಾರ್ಥವೆನಿಸಿತ್ತು. ಪಾದೋದಕದಿಂದ ಪದಾರ್ಥದ ಪೂರ್ವಾಶ್ರಯವನ್ನು ಕಳೆದು ಸಂಸ್ಕಾರದ ಮೂಲಕ ಪ್ರಸಾದವಾಗಿಸುವ ಕ್ರಮವನ್ನು ತಿಳಿಸಿಕೊಟ್ಟ ಅವರು ಶರಣತಿಂಥಿಣಿಯಲ್ಲಿ "ಪ್ರಸಾದಾಚಾರಿ" ಎಂಬ ಅಗ್ಗಳಿಕೆಗೆ ಪಾತ್ರರಾದವರು.

ಇದೂ ಅಲ್ಲದೆ ಪ್ರಕೃತಿಸಹಜವಾದ ಆಪತ್ತು, ವಿಪತ್ತುಗಳಿಂದ ನಮ್ಮನ್ನು ಸಂರಕ್ಷಿಸುವವರು, ಪರಮ ಪುರುಷಾರ್ಥವಾದ ಲಿಂಗಾಂಗ ಸಾಮರಸ್ಯ ಸುಖವನ್ನು ಅರುಹಿ ಲೋಕದ ಮಾನವರು ಭವದುಃಖದಿಂದ ಮುಕ್ತರಾಗುವ ಪರಿಯನ್ನು ತಿಳಿಸಿದವರು ಬಸವಣ್ಣನವರು. ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ ಎಂದುಸುರಿ ಸ್ವರ್ಗ ಮರ್ತ್ಯ ಪಾತಾಳಕ್ಕೆ ಹೊಸ ವ್ಯಾಖ್ಯಾನ ಬರೆದು ಚೈತನ್ಯ ತುಂಬಿದ ಪಾವನ ಮೂರ್ತಿ ಎಂದೆನಿಸಿದವರು ಬಸವಣ್ಣನವರು. ಮರ್ತ್ಯಲೋಕದ ಅಸತ್ಯ, ಅನ್ಯಾಯ, ಅನಾಚಾರ, ಅಸಮಾನತೆಯ ಕೊಳೆಯನ್ನು ತೊಳೆದು ಮರ್ತ್ಯಲೋಕವನ್ನೇ ಶಿವಲೋಕವಾಗಿಸಿದ, ಭುವನ ಕಲ್ಯಾಣವನ್ನು ಶಿವನ ಕಲ್ಯಾಣವಾಗಿಸಿದ ಪುಣ್ಯಪುರುಷರು. ಸಮಾನತೆ, ಸತ್ಯಶುದ್ಧಕಾಯಕ, ದಾಸೋಹ, ಶಿವಯೋಗಗಳಿಂದ ಮಾತ್ರ ಸಮಾಜದಲ್ಲಿ ಶಾಂತಿ ಮತ್ತು ಸಂತೃಪ್ತಿಗಳು ನೆಲೆಗೊಳ್ಳಲು ಸಾಧ್ಯವೆಂಬ, ಸಮಾಜ ಕಲ್ಯಾಣವೇ ಮುಖ್ಯವಾಗಿರುವ ಲಿಂಗಾಯತ ತತ್ತ್ವಜ್ಞಾನವನ್ನು ಬೋಧಿಸಿ ಜಾಗತಿಕ ದಾರ್ಶನಿಕರಲ್ಲಿ ಅಗ್ರಸ್ಥಾನ ಪಡೆದ ಬಸವಣ್ಣನವರ ಶ್ರೀಪಾದಕ್ಕೆ ನಮೋ ನಮೋ ಎಂದು ಹೇಳುತ್ತ ಅವರ ಮಹಾಘನ ಸ್ವರೂಪವನ್ನು ಸ್ತುತಿಸಿದ ಶರಣ ಅಂಬಿಗರ ಚೌಡಯ್ಯನವರ ಈ ರೀತಿ ನಮ್ಮೆಲ್ಲರಲ್ಲಿ ಐತಿಹಾಸಿಕ ಪ್ರಜ್ಞೆಯನ್ನು ಜಾಗ್ರತಗೊಳಿಸುವಲ್ಲಿ, ಬಸವಣ್ಣನವರೇ ನಮ್ಮ ಧರ್ಮಗುರು ಎಂದು ಒಪ್ಪಿಕೊಳ್ಳುವಲ್ಲಿ ಸಹಕಾರಿಯಾಗಿದೆ.

■■

# ಸ್ಮರಣೀಯ
# ಬಿ. ವ್ಹಿ. ಮಲ್ಲಾಪುರ

• ಬಾಳಣ್ಣ ಸೀಗೀಹಳ್ಳಿ

*ಡಾ. ಬಿ. ವ್ಹಿ. ಮಲ್ಲಾಪುರ ಅವರು ಕನ್ನಡ ಸಾರಸ್ವತ ಲೋಕದ ಬಹುದೊಡ್ಡ ವಿದ್ವಾಂಸರು. ಅತ್ಯಂತ ಸರಳ ಹಾಗು ಸಾತ್ವಿಕ ಬದುಕನ್ನು ತಮ್ಮದಾಗಿಸಿಕೊಂಡಿದ್ದ ಮತ್ತು ಆದರ್ಶ ಪ್ರಾಧ್ಯಾಪಕರೆಂದೇ ಹೆಸರುವಾಸಿಯಾಗಿದ್ದ ಅವರು ದಿನಾಂಕ ೧೯-೮-೨೦೧೯ ರಂದು ಲಿಂಗೈಕ್ಯರಾದುದು ನಮ್ಮ ನಾಡಿಗೆ ತುಂಬಲಾಗದ ನಷ್ಟವೇ ಸರಿ. ಲಿಂಗೈಕ್ಯರ ಸ್ಮರಣೆಯಲ್ಲಿ ಪ್ರಸ್ತುತ ಲೇಖನ.*

ಡಾ. ಬಸವಲಿಂಗಯ್ಯ ಮಲ್ಲಾಪುರ ವಿದ್ಯಾರ್ಥಿ ದಿಸೆಯಿಂದಲೇ ಬದುಕನ್ನು ಸವಾಲಾಗಿ ಸ್ವೀಕರಿಸಿದವರು. ಇಡೀ ಬದುಕಿನ ಕ್ಷಣ ಕ್ಷಣಗಳನ್ನು ಸಾರ್ಥಕಪಡಿಸಿಕೊಳ್ಳಲು ಹಂಬಲಿಸಿದವರು. ಅಳುನುಂಗಿ ನಗುತ್ತಲೇ ಬದುಕಿದವರು. ತೋರಿಕೆಯ ಜೀವನಶೈಲಿಯಾಗಲಿ, ಆಡಂಬರ, ಕೃತ್ರಿಮತೆಯಾಗಲಿ ಇವರ ಹತ್ತಿರ ಸಹ ಸುಳಿಯುವದು ಸಾಧ್ಯವಿಲ್ಲ. ಕೊಂಕು, ವಕ್ರತೆಗಳಿಲ್ಲದ ಸರಳಜೀವನ ಇವರಿಗೆ ಪ್ರಿಯವಾದದ್ದು. ಅದು ಇವರಿಗೆ ಕುಟುಂಬದ ಸಂಸ್ಕಾರ ಬಲದಿಂದ ಅಯಾಚಿತವಾಗಿ ದಕ್ಕಿದೆ. ಮನಸಾಕ್ಷಿಯ ಎಚ್ಚರದಲ್ಲಿ ಒಪ್ಪಿಕೊಂಡ ಕೆಲಸಗಳನ್ನು ದೈವಶ್ರದ್ಧೆಯಿಂದ, ನಿಗದಿತ ಕಾಲಾವಧಿಯೊಳಗೆ ಮಾಡಿ ಮುಗಿಸುವ ಶಿಸ್ತು ಇವರದು. ಇದರಿಂದಾಗಿ ನಿವೃತ್ತಿಯ ನಂತರವೂ ಮನಸ್ಸಿನ ಪ್ರಸನ್ನತೆ ಮಾಸಿಲ್ಲ; ಉತ್ಸಾಹ, ಕ್ರಿಯಾಶೀಲತೆ ಕುಗ್ಗಿಲ್ಲ.

ಗ್ರಾಮೀಣ ಪ್ರದೇಶದಲ್ಲಿ ಹುಡುಗನೊಬ್ಬನ ಮನಸ್ಸು ಅಲ್ಲಿಯ ಅಶಿಕ್ಷಿತ ವಾತಾವರಣದಿಂದಾಗಿ ಶಿಕ್ಷಣದತ್ತ ಹೊರಳುವುದೇ ಅಪರೂಪ. ಪೂರ್ವಜನ್ಮದ ಪುಣ್ಯವೆಂಬಂತೆ ಅಕಸ್ಮಾತ್ ಅತ್ತ ಹೊರಳಿದರೂ ಆರ್ಥಿಕ ಮುಗ್ಗಟ್ಟೋ ಪಾಲಕರ ಉದಾಸಿನವೋ ಕಾರಣವಾಗಿ ಆ ಎಳೆಯರ ಉತ್ಸಾಹ, ಆಸಕ್ತಿಗಳೆರಡೂ ಕಮರಿಹೋಗುವ ಸಾಧ್ಯತೆಯೇ ಹೆಚ್ಚು. ಮಲ್ಲಾಪುರ ಹುಟ್ಟಿದ್ದು, ಬೆಳೆದದ್ದು ಇಂಥ ನಿರುತ್ಸಾಹದಾಯಕ ವಾತಾವರಣದಲ್ಲೇ. ಆದರೆ, ಗ್ರಾಮಾಂತರ ಜೀವನದ ಅಶೈಕ್ಷಣಿಕ ಪರಿಸರದ ಎಲ್ಲ ಬಲಹೀನತೆಗಳನ್ನೇ ಒಂದು ಶಕ್ತಿಯಾಗಿ ಬಳಸಿಕೊಂಡು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡವರು. ಸಂದರ್ಭದ ಅನಿವಾರ್ಯತೆಗಳು ಇವರಲ್ಲಿದ್ದ ಸಹಜ ಶ್ರಮಸಂಸ್ಕೃತಿಯನ್ನು ಮತ್ತಿಷ್ಟು ಉಜ್ಜಿ ಉತ್ತೇಜಿಸಿದವು.

ಸ್ವಾತಂತ್ರ್ಯಪೂರ್ವ ಸನ್ನಿವೇಶದಲ್ಲಿ ಸಾಲಾರಜಂಗನ ಜಹಗೀರೆನಿಸಿದ್ದ ಯಲಬುರ್ಗಿ ತಾಲೂಕನ್ನೊಳಗೊಂಡಿದ್ದ ಆಗಿನ ಕೊಪ್ಪಳ ಜಿಲ್ಲೆ ಹೈದರಾಬಾದ ನಿಜಾಮನ ಸಂಸ್ಥಾನವಾಗಿತ್ತು. ಇಂಥ ಮೊಗಲಾಯಿಯ ಉರ್ದೂಮಯ ವಾತಾವರಣದಲ್ಲಿ ಶಿಕ್ಷಣ ಪಡೆದು ಮುಂದೆ ಬರುವುದೆಂದರೆ ಅದೃಷ್ಟ ಪರೀಕ್ಷೆ ಎಂದೇ ಭಾವಿಸಲಾಗುತ್ತಿತ್ತು. ಈ ಪ್ರತಿಕೂಲಗಳನ್ನು ಒಡೆದುಹಾಕುತ್ತ ಗೆದ್ದು ಬಂದವರು ಇವರು. ಹುಟ್ಟಿದ್ದು ರೋಣ ತಾಲೂಕಿನ ಇಟಗಿ ಗ್ರಾಮದಲ್ಲಿ (ಸಪ್ಟೆಂಬರ ೧೪, ೧೯೩೧) ೫ನೇ ಕ್ಲಾಸಿನವರೆಗೆ ಮಾತ್ರ ಇಲ್ಲಿ ಓದಲು ಅವಕಾಶವಿದ್ದುದರಿಂದ ಮುಂದಿನ ಓದಿಗಾಗಿ ಊರು ಬಿಡುವುದು ಅನಿವಾರ್ಯವಾಗಿ ೬ನೇ ಈಯತ್ತೆಯಿಂದ ಕಲಬುರಗಿಗೆ ಬಂದು ನೆಲೆನಿಂತರು, ಮಠದ ಪ್ರಸಾದ ವಾರಾನ್ನ, ವಿದ್ಯಾರ್ಥಿವೇತನ, ಟ್ಯೂಶನ್ ಹೇಳಿದ ಅಷ್ಟಿಷ್ಟು ಪುಡಿಕಾಸಿನ ಆಸರೆಯಲ್ಲಿ ಕನ್ನಡವನ್ನು ಓದಿದರು, ಅದೂ ಐಚ್ಛಿಕ ವಿಷಯವಾಗಿ ಕೇವಲ ೭ನೇ ಈಯತ್ತೆಯವರೆಗೆ ಮಾತ್ರ. ಇಂಟರ್ ಮೀಡಿಯೆಟ್‌ನವರೆಗೆ ಇವರು ಸಾಯನ್ಸ್ ವಿದ್ಯಾರ್ಥಿಯಾಗಿದ್ದರು. ಹಾಯ್‌ಸ್ಕೂಲಿನಲ್ಲಿ ಇವರ ಪ್ರೀತಿಯ ವಿಷಯ ಗಣಿತವಾಗಿತ್ತು. ಆದರೆ ಮಾತೃಭಾಷೆಯ ಮೇಲೆ ಅಭಿಮಾನ ಇವರನ್ನು ಸುಮ್ಮನಿರಗೊಡಲಿಲ್ಲ. ಅದನ್ನು ಈಡೇರಿಸಿಕೊಳ್ಳಲು ಕನ್ನಡ ಸಾಹಿತ್ಯ ಪರಿಷತ್ತು ನಡೆಸುತ್ತಿದ್ದ ಕಾವ ಮತ್ತು ಜಾಣ ಪರೀಕ್ಷೆಗಳನ್ನು ಕಟ್ಟಿ ಆ ಹಂಬಲವನ್ನು ಪೂರೈಸಿಕೊಂಡರು. ಜೊತೆ ಜೊತೆಗೆ ಭಾಷಣ, ಲೇಖನ, ಹಾಡಿನ ಸ್ಪರ್ಧೆಗಳಲ್ಲೂ ಭಾಗವಹಿಸಿ ಬಹುಮಾನ ಪಡೆಯುವ ಅವಕಾಶಗಳನ್ನೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಇವೆಲ್ಲವುಗಳಿಂದಾಗಿ ಇವರಲ್ಲಿ ಅಧ್ಯಯನಶೀಲ ಪ್ರವೃತ್ತಿ ಸ್ವಾಭಾವಿಕವಾಗಿಯೇ ಬೆಳೆಯುತ್ತ ಬಂತು.

ಶ್ರೀನಗರ, ಧಾರವಾಡ-೫೮೦೦೦೩ ಮೊ-೯೪೪೮೧೭೪೯೬೬

ಆಗ ಕಲಬುರಗಿಯಲ್ಲಿ ಡಿಗ್ರಿ ಕಾಲೇಜು ಇರಲಿಲ್ಲವಾದ್ದರಿಂದ ಇಂಟರ್ ಮುಗಿಯುತ್ತಿದ್ದಂತೆ ಹೆಚ್ಚಿನ ವ್ಯಾಸಂಗಕ್ಕಾಗಿ ಹೈದರಾಬಾದಿಗೆ ಹೋಗುವ ಪ್ರಶ್ನೆ ಎದುರಾಯಿತು. ಅಷ್ಟೊತ್ತಿಗೆ ಕಲಬುರಗಿಯ ಶರಣಬಸವೇಶ್ವರ ಹಾಯ್‌ಸ್ಕೂಲಿನಲ್ಲಿ ಡ್ರಾಯಿಂಗ್ ಟೀಚರ್ ಆಗಿ ಸೇವೆ ಸಲ್ಲಿಸುತ್ತಿದ್ದ ಅಣ್ಣನ ಆಸರೆ ಸಿಕ್ಕು ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯದ ಆರ್ಟ್ಸ್ ಕಾಲೇಜಿನಲ್ಲಿ ಪದವಿ ಶಿಕ್ಷಣವನ್ನು ಮುಂದುವರೆಸಲು ಸಾಧ್ಯವಾಯಿತು. ಅಲ್ಲಿ ಕನ್ನಡವನ್ನು ಪ್ರಧಾನ ವಿಷಯವಾಗಿ ಆರಿಸಿಕೊಂಡು ಇಡೀ ವಿಶ್ವವಿದ್ಯಾಲಯಕ್ಕೆ ಕನ್ನಡದಲ್ಲಿ ಪ್ರಥಮರಾಗಿ, ಪ್ರಥಮ ಶ್ರೇಣಿಯಲ್ಲಿ (೧೯೫೩) ಪಾಸಾಗಿ ಗಮನ ಸೆಳೆದರು. ಪರಿಣಾಮವಾಗಿ ತಹಶೀಲದಾರ ಹುದ್ದೆಗೆ ಆರ್ಡರ್ ಬಂದು ಮನೆಬಾಗಿಲು ತಟ್ಟಿತು. ಆದರೆ ಇವರೊಳಗಿನ ಶಿಕ್ಷಕ ಆ ಅಮಲ್ದಾರ ಹುದ್ದೆಯನ್ನು ಒಪ್ಪಿಕೊಳ್ಳಲು ಬಿಡಲಿಲ್ಲ. ಕಲಬುರಗಿಯ ಶರಣಬಸವೇಶ್ವರ ಹಾಯ್‌ಸ್ಕೂಲಿನಲ್ಲಿ ಶಿಕ್ಷಕರಾಗುವ ಮೂಲಕ ತಮ್ಮ ಬಯಕೆಯನ್ನು ಕೈಗೂಡಿಸಿದರು. ಆರಿಸಿಕೊಂಡಿರುವ ವೃತ್ತಿ ಇನ್ನಿಷ್ಟು ಅಕ್ಯಾಡೆಮಿಕ್ ಆಗಿರಬೇಕೆಂಬ ಇರಾದೆಯಿಂದ ಇವರು (೧೯೫೫–೫೬) ಬಿ. ಎಡ್. ಪದವಿ ಸಂಪಾದಿಸಿದರು. ಮುಂದೆ (೧೯೫೮–೬೦) ಎಂ. ಎ. ಪದವಿಯನ್ನು ಅದೇ ಉಸ್ಮಾನಿಯ ವಿಶ್ವವಿದ್ಯಾಲಯದಿಂದ, ಅದೂ ಪ್ರೊ. ಡಿ. ಕೆ. ಭೀಮಸೇನರಾಯರ ಪ್ರೀತಿಯ ಶಿಷ್ಯರಾಗಿ, ಪ್ರಥಮ ಶ್ರೇಣಿಯಲ್ಲಿ ಪ್ರಥಮರಾಗಿ ಸಂಪಾದಿಸಿದರು. ಆಮೇಲೂ ಕೂಡ ಒಂದು ವರ್ಷ ಪ್ರಸ್ತುತ ಹಾಯ್‌ಸ್ಕೂಲಿನಲ್ಲಿಯೇ ಶಿಕ್ಷಕರಾಗಿಯೇ ಮುಂದುವರೆದು ನಂತರ (ಜೂನ್ ೧೫, ೧೯೬೧) ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ನೇಮಕಗೊಂಡರು.

ಇಲ್ಲಿಂದ ಮುಂದೆ ಧಾರವಾಡದ ಸಾಹಿತ್ಯಿಕ, ಸಾಂಸ್ಕೃತಿಕ ವಾತಾವರಣ, ಕಾಲೇಜಿನ ಗ್ರಂಥಾಲಯದ ಸಂಪತ್ತು, ಡಾ. ಎಂ. ಎಂ. ಕಲಬುರ್ಗಿಯವರ ಒಡನಾಟ, ಮನಸ್ಸಿಗೆ ಮುದನೀಡುವ ಕಾಲೇಜಿನ ವಿದ್ಯಾರ್ಥಿಗಳ ವಿನಯಭರಿತ ಸೃಜನಶೀಲ ಚಟುವಟಿಕೆಗಳು ಮಲ್ಲಾಪುರರಲ್ಲಿ ಹುದುಗಿದ್ದ ಸಂಶೋಧನೆ, ವಿಮರ್ಶೆ, ಅಧ್ಯಯನ, ಅಧ್ಯಾಪನ, ಆಸಕ್ತಿಗಳನ್ನು ಉದ್ದೀಪನಗೊಳಿಸಿ ಅವು ಇನ್ನಿಷ್ಟು ಹರಿತವೂ ತೀವ್ರವೂ ತಲಸ್ಪರ್ಶಿಯೂ ಆಗುವಂತೆ ಪ್ರೇರೇಪಿಸಿದವು. **'ಧಾರವಾಡದ ಶೈಕ್ಷಣಿಕ ಪರಿಸರ, ಇಲ್ಲಿ ಅಧ್ಯಯನಕ್ಕಿರುವ ಅನುಕೂಲತೆಗಳು, ವಿಚಾರಗಳನ್ನು ಪರಸ್ಪರ ಹಂಚಿಕೊಳ್ಳಲು ಸಿಕ್ಕುವ ವಿದ್ವಾಂಸರ ಮತ್ತು ಅಕ್ಯಾಡೆಮಿಕ್ ಆಸ್ಥೆಯ ಮಿತ್ರವೃಂದ, ಇವೆಲ್ಲ ನನ್ನ ಬರವಣಿಗೆಗೆ ಪ್ರೇರಣೆಯೊದಗಿಸಿದವು. ಜೊತೆಗೆ ಹಲವಾರು ಅವಕಾಶಗಳು ನನಗೆ ದೊರೆತವು. ಅದರಿಂದಾಗಿ ಹೆಚ್ಚು ಲೇಖನಗಳನ್ನು ಬರೆಯುವುದು ನನ್ನಿಂದ ಸಾಧ್ಯವಾಯಿತು.** (ಸುಧಾರ್ಣವ ಸಂಪುಟ ೧, ಅರಿಕೆ, VIII). ಇವರೊಬ್ಬ ಶ್ರೇಷ್ಠಮಟ್ಟದ ಪ್ರಾಧ್ಯಾಪಕರೆಂಬುದು ಜನಜನಿತವಾಯಿತು. ಅಷ್ಟರಲ್ಲಿ ಇವರನ್ನು (೧೯೭೧) ಗುಲಬರ್ಗಾ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗಕ್ಕೆ ಉಪನ್ಯಾಸಕರೆಂದು ನೇಮಿಸಲಾಯಿತು. ಮೇಲ್ನೋಟಕ್ಕೆ ಈ ಹುದ್ದೆಯಿಂದ ಇವರ ಪ್ರತಿಷ್ಠೆ ಹೆಚ್ಚಿತಾದರೂ ಇದೇ ವರ್ಷ ಡಾ. ಆರ್. ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ನಯಸೇನ' ಅವರ ಕೃತಿಗಳು ಎಂಬ ವಿಷಯ ಕುರಿತು ಪಿಹೆಚ್. ಡಿ. ಗೆ ರಜಿಸ್ಟ್ರೇಶನ ಮಾಡಿಸಿದ್ದರಿಂದ ಅಲ್ಲಿ ಸಂಶೋಧನೆಯ ಕಾರ್ಯವನ್ನು ಕೈಗೆತ್ತಿಕೊಳ್ಳಲು ಇದೇ ಪ್ರತಿಕೂಲವಾಯಿತು. ಆದರೆ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠಕ್ಕೆ ಉಪನ್ಯಾಸಕರಾಗಿ (೧೯೭೫) ಧಾರವಾಡಕ್ಕೆ ತಿರುಗಿ ಬಂದ ಅಲ್ಪಾವಧಿಯಲ್ಲೇ ನಿಂತುಬಿಟ್ಟಿದ್ದ ತಮ್ಮ ಸಂಶೋಧನೆಯನ್ನು ಪೂರ್ತಿಗೊಳಿಸಿ ಡಾಕ್ಟರೇಟ್ ಪಡೆದರು. ಇದರಿಂದ ಸಂಶೋಧನೆಯ ಶಿಸ್ತು, ಅಭಿರುಚಿಗಳು ಒಂದು ಹವ್ಯಾಸವಾಗಿ ಇವರನ್ನು ಆವರಿಸಿದವು. ತಮ್ಮ ಸೇವಾವಧಿಯ ಕೊನೆಯ ೫, ೬ ವರ್ಷ ಪ್ರವಾಚಕರಾಗಿ ದುಡಿದು (೧೯೯೧) ನಿವೃತ್ತಿ ಹೊಂದಿದ ಇವರು ಸುಮಾರು ೩೮ ವರ್ಷಗಳ ಕಾಲ ಸಮರ್ಥ ಶಿಕ್ಷಕರೆಂದು ಸೇವೆ ಸಲ್ಲಿಸಿ ವಿದ್ಯಾರ್ಥಿಗಳ ಮನಸ್ಸನ್ನು ಸೂರೆಗೊಂಡಿದ್ದಾರೆ.

ಪ್ರಸ್ತುತ ಪ್ರೊಜೆಕ್ಟನ್ನಿಗೆ ಕಾರಣೀಭೂತರಾಗಿರುವ ಮಲ್ಲಾಪುರ ಅವರು ತಮ್ಮ ವೃತ್ತಿಜೀವನದ ಇಷ್ಟೆಲ್ಲ ತಳ್ಳಾಟದ ಮಧ್ಯೆಯೂ ಸಾಹಿತ್ಯ, ಸಂಶೋಧನೆ, ಸಂಸ್ಕೃತಿ, ವಿಮರ್ಶೆ, ಶಾಸ್ತ್ರ ವಿಷಯಗಳಲ್ಲಿ ಅಖಂಡ ಪ್ರೀತಿಯನ್ನು ಬೆಳೆಸಿಕೊಂಡು ಬಂದಿರುವುದರಿಂದ ಮತ್ತು ಆಯಾ ಕ್ಷೇತ್ರಗಳಲ್ಲಿ ಗಣನೀಯ ಕೃಷಿ ಮಾಡುತ್ತ ಅನನ್ಯತೆಯನ್ನು ಪ್ರಕಟಿಸಿರುವುದರಿಂದ ಸಮಕಾಲೀನ ಸಂದರ್ಭದ ಮಹತ್ವದ ವಿದ್ವಾಂಸರೆನಿಸಿದ್ದಾರೆ.

ಇವರ ಸಾಹಿತ್ಯ ಕೃಷಿವಲಯದ ಮೇಲೆ ಕಣ್ಣಾಡಿಸುತ್ತ ಹೋದರೆ ಇವರ ಬಹುಮುಖ ಪ್ರತಿಭೆಯ ನೆಲೆಗಳೂ ಅದರೊಳಗಿನ ಒಳನೋಟಗಳೂ ಚಕಿತಗೊಳಿಸುತ್ತವೆ. ಈಗಾಗಲೇ ಬೇರೆ ಬೇರೆ ಪ್ರಕಾಶನ ಸಂಸ್ಥೆಗಳಿಂದ ಇವರ ಹಲವಾರು ಕೃತಿಗಳು ಪ್ರಕಟವಾಗಿವೆ. ಕೆಲವು ನಡುಗನ್ನಡ ಕಾವ್ಯಗಳನ್ನು, ವಚನ ಸಾಹಿತ್ಯವನ್ನು, ಆಧುನಿಕ ಸಣ್ಣ ಕತೆಗಳನ್ನು ಸಂಪಾದಿಸಿದ್ದಾರೆ, ಜೀವನ ಚರಿತ್ರೆಗಳನ್ನು ವ್ಯಕ್ತಿ ಚಿತ್ರಗಳನ್ನು ರಚಿಸಿದ್ದಾರೆ, ಕವಿಕಾವ್ಯಗಳನ್ನು ವಿಮರ್ಶಿಸಿದ್ದಾರೆ. ಕನ್ನಡ ನಾಡಿನ ಬಹುತೇಕ ವಿದ್ವತ್‌ಪತ್ರಿಕೆಗಳಲ್ಲಿ ಇವರ ನೂರಾರು ಲೇಖನಗಳು ಪ್ರಕಟವಾಗಿವೆ. ಹತ್ತಾರು ವಿಚಾರ ಸಂಕಿರಣ, ವಿದ್ವತ್ ಗೋಷ್ಠಿಗಳ ಅಧ್ಯಕ್ಷತೆ ವಹಿಸಿದ್ದಾರೆ. ಪ್ರಬಂಧಗಳನ್ನು

ಮಂಡಿಸಿದ್ದಾರೆ. ಧಾರವಾಡ ಜಿಲ್ಲೆಯ ರೋಣದಲ್ಲಿ ಮೇ ೭, ೮, ೧೯೯೪ ರಂದು ಜರುಗಿದ ನಾಲ್ಕನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯಿಂದ ಗೌರವಿಸಲ್ಪಟ್ಟಿದ್ದಾರೆ. ಇದೇ ಸಂದರ್ಭದಲ್ಲಿ ಉತ್ತಮ ಸಂಶೋಧಕ ಮತ್ತು ಬೋಧಕ ಎಂಬ ಪ್ರಶಸ್ತಿಯಿಂದ ಶೋಭಿತರಾಗಿದ್ದಾರೆ. ಅಲ್ಲದೆ, ಹುಬ್ಬಳ್ಳಿ ಮೂರುಸಾವಿರಮಠದ ಗ್ರಂಥ ಪುರಸ್ಕಾರ ಪ್ರಶಸ್ತಿ, ಹಾಲಕೆರಿ ಅನ್ನದಾನೇಶ್ವರ ಸಂಸ್ಥಾನಮಠದ ಪ್ರಶಸ್ತಿಗಳಿಂದಲೂ ಇವರು ಸನ್ಮಾನಿತರಾಗಿದ್ದಾರೆ.

ಕಳೆದ ಮೂವತ್ತೈದು, ಮೂವತ್ತಾರು ವರ್ಷಗಳಿಂದ ಬರವಣಿಗೆಯಲ್ಲಿ ತೊಡಗಿಕೊಂಡಿರುವ ಇನ್ನೂ ನೂರಾರು ಲೇಖನಗಳು ಬೇರೆ ಬೇರೆ ಸಂದರ್ಭ ಗ್ರಂಥಗಳಲ್ಲಿ, ಪತ್ರಿಕೆಗಳಲ್ಲಿ, ನಿಯತಕಾಲಿಕೆಗಳಲ್ಲಿ ಚೆದುರಿ ಹೋಗಿರುವುದನ್ನು ಗಮನಿಸಿದ ಡಾ. ಎಂ. ಎಂ. ಕಲಬುರ್ಗಿಯವರು ಅವುಗಳಲ್ಲಿನ ಮಹತ್ವದ ೬೦ ಲೇಖನಗಳನ್ನು ಆಯ್ದುಕೊಡಲು ಮಲ್ಲಾಪುರ ಅವರನ್ನು ಆಗ್ರಹಿಸಿ ಅವುಗಳನ್ನು ಸುಧಾರ್ಣವ ಹೆಸರಿನ ಎರಡು ಸಂಪುಟಗಳಲ್ಲಿ ಲಿಂಗಾಯತ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ ಇವರ ಆಶ್ರಯದಲ್ಲಿ ಪ್ರಕಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಮೂಲಕ ಮಲ್ಲಾಪುರ ಅವರ ಚಿಂತನ ಮಾದರಿಗಳು ಒಂದೆಡೆಗೆ ಸಿಗುವಂತಾಗಿದ್ದು, ಇವರನ್ನು ಇನ್ನಷ್ಟು ಹೆಚ್ಚು ನಿಖರವಾಗಿ ಪರಿಚಯಿಸಿಕೊಳ್ಳಲು ಸಾಧ್ಯವಾದಂತಾಗಿದೆ.

ಪ್ರಸ್ತುತ ಸುಧಾರ್ಣವ ಸಂಪುಟಗಳಲ್ಲಿ ಮೊದಲ ಸಂಪುಟದಲ್ಲಿ ಒಟ್ಟು ೪೦ ಲೇಖನಗಳು ಸಂಕಲಿತವಾಗಿದ್ದು, ಇವುಗಳನ್ನು ವಸ್ತು ಆಶಯಗಳಿಗನುಸಾರವಾಗಿ ಸಂಶೋಧನೆ, ವಿಮರ್ಶೆ, ಸಾಹಿತ್ಯ ಚರಿತ್ರೆ, ಶಾಸ್ತ್ರ ಮತ್ತು ಇತರ ಎಂದು ವರ್ಗೀಕರಿಸಲಾಗಿದೆ. ಈ ವರ್ಗೀಕರಣದಲ್ಲಿ ಸಂಶೋಧನ ವಿಭಾಗದಲ್ಲಿ ೧೧, ವಿಮರ್ಶೆಯಲ್ಲಿ ೧೩, ಸಾಹಿತ್ಯ ಚರಿತ್ರೆ, ಶಾಸ್ತ್ರದಲ್ಲಿ ೮ ಹಾಗು ಇತರ ವಿಭಾಗದಲ್ಲಿ ೭ ಲೇಖನಗಳು ಹಂಚಿಹೋಗಿವೆ. ಈ ಎಲ್ಲ ಲೇಖನಗಳಲ್ಲೂ ಅಭ್ಯಾಸಪೂರ್ಣ ಚಿಂತನವಿದೆ. ವಿಷಯದ ಆಳಕ್ಕಿಳಿದು ನೋಡುವ ಶ್ರಮವಿದೆ. ಸಂದಿಗ್ಧತೆಗಳನ್ನು ನಿವಾರಿಸಿಕೊಳ್ಳುವ ಹಟವಿದೆ. ಹೊಸ ಅರಿವಿನ ಬೆಳಕು ಮೂಡಿಸುವ ಹಂಬಲವಿದೆ. ಸತ್ಯಶೋಧನೆಯ ಪ್ರಾಮಾಣಿಕತೆಯಿದೆ. ಮೊದಲಿನ ಚಿಂತನ ಧಾರೆಗಳನ್ನು ಸಪ್ರಮಾಣವಾಗಿ ವಿಶ್ಲೇಷಿಸಿ, ಹೊಸ ದರ್ಶನಗಳನ್ನು ಮಂಡಿಸುವ ಸದುವಿನಯವಿದೆ. ತಮ್ಮ ಪರಿಶೋಧನೆಗಳನ್ನು ಪುನಃ ಪುನಃ ಪರೀಕ್ಷಿಸಿ ನೋಡುವ ತಾಳ್ಮೆಯಿದೆ. ಈ ಎಲ್ಲ ಗುಣಾತ್ಮಕತೆಗಳಿಗೂ ಈ ಪರಿಮಿತ ಲೇಖನದಲ್ಲಿ ನಿದರ್ಶನಗಳನ್ನು ಕೊಡುವುದು ಸಾಧ್ಯವಿಲ್ಲದಿರುವುದರಿಂದ ಇವರ ಸಂಶೋಧನ ಶಕ್ತಿಯನ್ನು ಗುರುತಿಸುವ ಪ್ರಯತ್ನ ಮಾತ್ರ ಇಲ್ಲಿದೆ.

ಸಂಶೋಧನೆಯ ಮುಖ್ಯ ತತ್ವಗಳೆನಿಸಿದ ಆಕರ ಶೋಧನೆ, ಶೋಧಿತ ಸಾಮಗ್ರಿಯ ವಿಶ್ಲೇಷಣೆ ಮತ್ತು ವ್ಯಾಖ್ಯಾನ ಈ ಮೂರು ಹಂತಗಳಲ್ಲಿಯೂ ಮಲ್ಲಾಪುರ ಅವರು ಅತ್ಯಂತ ಎಚ್ಚರದಿಂದ ಕಾರ್ಯನಿರ್ವಹಿಸಿದ್ದು ಅವರ ಎಲ್ಲ ಲೇಖನಗಳಿಂದ ಸ್ಪಷ್ಟವಾಗುತ್ತದೆ. ಇಲ್ಲಿಯ ಪ್ರತಿಯೊಂದು ವಿಷಯಕ್ಕೂ ಸಂಬಂಧಪಟ್ಟ ಆಕರಶೋಧದ ಶ್ರಮ ತುಂಬ ಮಹತ್ತರವಾದುದು. ಒಂದು ಸಂಗತಿಯ ಸುತ್ತಮುತ್ತ ಏನೇನು ಆಧಾರ ಸಾಮಗ್ರಿ, ವಿಚಾರಸಾಮಗ್ರಿ, ವಾದ, ಪ್ರತಿವಾದಗಳು ಹರಡಿಕೊಂಡಿವೆ ಎಂಬುದನ್ನು ಕುತೂಹಲಭರಿತ ತನ್ಮಯತೆಯಿಂದ ಹುಡುಕುವ, ದಾಖಲಿಸುವ, ಸಂಗ್ರಹಿಸುವ, ಸಂಗ್ರಹಿತ ದಾಖಲೆಗಳನ್ನು ಸಂರಕ್ಷಿಸಿಕೊಳ್ಳುವ ಗಗನ ವಿಜ್ಞಾನಿಯಂತಹ ವಿಶಾಲ, ತೀಕ್ಷ್ಣ, ತಾಳ್ಮೆಯ ದೃಷ್ಟಿಯನ್ನು ಸಂಶೋಧಕನೂ ಪಡೆದಿರುವದು ಅವಶ್ಯವಾಗಿದೆ. ಇವರಿಗೆ ಮಾತ್ರ ಸಂಶೋಧನೆ ಒಲಿಯುವುದು. ಇನ್ನು, ಶೋಧಿತ ಸಾಮಗ್ರಿಯನ್ನು ಯಾವುದೇ ಪೂರ್ವಗ್ರಹಗಳಿಲ್ಲದೆ ಖಚಿತವಾದ ಆಧಾರಗಳೊಂದಿಗೆ ವಿಶ್ಲೇಷಿಸಿ ಕ್ರಮಬದ್ಧವಾಗಿ ಸಂಯೋಜಿಸಿಕೊಳ್ಳುವುದು. ಇದಾದ ಮೇಲೆಯೇ ಸ್ವಂತದ ತೀರ್ಮಾನಗಳೊಂದಿಗೆ ವ್ಯಾಖ್ಯಾನಿಸುವುದು. ಇವೆಲ್ಲವೂ ಒಬ್ಬ ಸಂಶೋಧಕನಲ್ಲಿರಬೇಕಾದ ಅರ್ಹತೆಗಳು. ಡಾ. ಮಲ್ಲಾಪುರರು ಇಂಥ ಸಂಶೋಧನೆಯ ಶಿಸ್ತು ಮೈಗೂಡಿಸಿಕೊಂಡಿರುವುದು ಒಡೆದುಕಾಣುವ ಸಂಗತಿಯಾಗಿದೆ.

ಪ್ರಸ್ತುತ ಸುಧಾರ್ಣವ ಹೆಸರಿನ ಇವರ ಎರಡನೆಯ ಸಂಪುಟ ಕೂಡ ಇಡಿಯಾಗಿ ಲಿಂಗಾಯತ ಕೃತಿಗಳ ವಿಮರ್ಶಾ ಲೇಖನಗಳನ್ನೊಳಗೊಂಡಿದೆ. ಇಲ್ಲಿಯ ಇಪ್ಪತ್ತು ಲೇಖನಗಳು ಮಲ್ಲಾಪುರ ಅವರ ವಿಚಾರ ಶೋಧದ ಪ್ರತೀಕಗಳಾಗಿವೆ. ಉದಾಹರಣೆಗೆ, 'ಚೆನ್ನಬಸವಣ್ಣನವರ ಪದಮಂತ್ರಗೋಪ್ಯ ಸಾಹಿತ್ಯ ಮತ್ತು ಉದ್ಧರಣೆ ಸಾಹಿತ್ಯ' ಎಂಬ ಮೊದಲ ಲೇಖನ ಅನುಭಾವ ನೆಲೆಯು ಮಂತ್ರದೀಕ್ಷೆಯಂತಹ ಕ್ರಿಯಾವಿಧಾನವನ್ನು ಅಷ್ಟೇ ಸೂಕ್ಷ್ಮವಾದ ಪರಿಭಾಷೆಯಲ್ಲಿ ಹಿಡಿದಿಡುವ ರೀತಿ ಅನಾದೃಶ್ಯವಾದುದು. ಮೂಲ ಸ್ವರೂಪದಲ್ಲೇ ಅದನ್ನು ನೋಡುವುದು ನ್ಯಾಸಮ್ಮತವೆಂದು ಭಾವಿಸಿ ಲೇಖಕರ ಮಾತುಗಳನ್ನೇ ಇಲ್ಲಿ ಉದ್ಧರಿಸಲಾಗಿದೆ.

'ಭಾರತೀಯ ಬಹುತೇಕ ಎಲ್ಲ ದರ್ಶನಗಳಲ್ಲಿ ಮಂತ್ರಕ್ಕೆ ಮಹತ್ವವಿರುವುದು ಕಂಡುಬರುತ್ತದೆ. ಕೆಲವು ದರ್ಶನಗಳಲ್ಲಿ ಮಂತ್ರಕ್ಕೆ ಹೆಚ್ಚಿನ ಸ್ಥಾನ ಕೊಟ್ಟರೆ, ಇನ್ನು ಕೆಲವು ದರ್ಶನದಲ್ಲಿ ಸ್ವಲ್ಪ ಕಡಿಮೆ ಸ್ಥಾನವನ್ನು ಕೊಡಲಾಗಿದೆ. ಲಿಂಗಾಯತದಲ್ಲಿಯೂ ಮಂತ್ರಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಲಿಂಗಾಯತದ ಚರಮಧ್ಯೇಯವಾದ ಲಿಂಗಾಂಗ ಸಾಮರಸ್ಯವನ್ನು ಸಾಧಿಸಲು ಹೊರಟ ಸಾಧಕನಿಗೆ ಮೊಟ್ಟ ಮೊದಲು ಗುರುವಿನಿಂದ

ದೀಕ್ಷೆ ಕೊಡಿಸಲಾಗುತ್ತದೆ. ಆ ಸಂದರ್ಭದಲ್ಲಿ ಗುರು, ಶಿಷ್ಯನ, ಅಂಗತ್ರಯಗಳಲ್ಲಿ ಲಿಂಗತ್ರಯಗಳನ್ನು ಮೂರು ದೀಕ್ಷೆಗಳ ಮೂಲಕ ಸ್ಥಾಪ್ಯಗೊಳಿಸುತ್ತಾನೆ. ಆ ಮೂರು ದೀಕ್ಷೆಗಳಲ್ಲಿ ಮಂತ್ರದೀಕ್ಷೆಯೂ ಒಂದು. ಶಿಷ್ಯನ ಯೋಗಾಂಗದಲ್ಲಿ ವೇದಾದೀಕ್ಷೆಯಿಂದ ಭಾವಲಿಂಗವನ್ನು, ತ್ಯಾಗಾಂಗದಲ್ಲಿ ಕ್ರಿಯಾದೀಕ್ಷೆಯಿಂದ ಇಷ್ಟಲಿಂಗವನ್ನು ಗುರು ಸ್ಥಾಪ್ಯಗೊಳಿಸಿದರೆ, ಭೋಗಾಂಗದಲ್ಲಿ ಮಂತ್ರದೀಕ್ಷೆಯಿಂದ ಪ್ರಾಣಲಿಂಗವನ್ನು ಸಂಯೋಜಿಸುತ್ತಾನೆ. ಬಾಹ್ಯದಲ್ಲಿ ಭಿನ್ನವಾಗಿದ್ದ ಅಂಗಲಿಂಗಗಳ ಭೇದ ಪ್ರಾಣಸ್ಥಲದಲ್ಲಿ ಸಮನ್ವಯಗೊಳ್ಳಲು ಮಂತ್ರದೀಕ್ಷೆ ಎಂದರೆ ಮಂತ್ರಸಾಕ್ಷಾತ್ಕಾರದ ಆವಶ್ಯಕತೆ ಇರುವುದನ್ನು ಇದು ಸ್ಪಷ್ಟಪಡಿಸುತ್ತದೆ. ತನುವಿನ ಮಾಂಸಪಿಂಡತ್ವವಳಿದು ಮಂತ್ರಮಯವಾಗಲು ಮತ್ತು ತನುವಿನಲ್ಲಿ ತತ್ವಶುದ್ಧಿ ಹಾಗು ಭೂತಶುದ್ಧಿಗಳು ಸಾಧ್ಯವಾಗಿ ಅದು ಅಂಗವೆನಿಸಿ ಲಿಂಗದ ಜೊತೆ ಬೆರೆಯಲು ಮಂತ್ರದೀಕ್ಷೆ ಅತ್ಯವಶ್ಯಕವೆಂದು ವೀರಶೈವ ಧರ್ಮ ಹೇಳುತ್ತದೆ.

ಇದೇ ರೀತಿ, ಲೇಖಕರ ಚಿಂತನ ಕ್ರಮವನ್ನು ಮನದಟ್ಟು ಮಾಡಿಸುವ ಈ ಸಂಪುಟದ ಮತ್ತೊಂದು ಲೇಖನ 'ಶೂನ್ಯ ಸಂಪಾದನೆಗಳು: ಒಂದು ಒಳನೋಟ' ಎಂಬುದು. ಇಲ್ಲಿ ಶೂನ್ಯಸಂಪಾದನೆಗಳ ರಚನೆಯ ಅಗತ್ಯ ಯಾಕೆ ತಲೆದೋರಿರಬಹುದೆಂಬ ಊಹೆಯನ್ನು ಮುಂದಿಟ್ಟುಕೊಂಡು ಬೆಳೆಯುವ ಈ ಲೇಖನ ಶೂನ್ಯಸಂಪಾದನೆಗಳ ವಿಚಾರವಾಗಿ ಸಾಕಷ್ಟು ವಿವರವಾದ ಪರಾಮರ್ಶೆಯನ್ನು ನಡೆಸುತ್ತ ಸಾಗಿಬಂದು ಒಂದು ಘಟ್ಟದಲ್ಲಿ ತುಂಬಾ ಮಹತ್ವದ ವಿಚಾರವೊಂದನ್ನು ಪ್ರತಿಪಾದಿಸುತ್ತದೆ. ಶರಣ ಸಮಾಜಕ್ಕೆ ತತ್ಪೂರ್ವದ ಲಿಂಗದೀಕ್ಷಾಕ್ರಮದ ಬಗ್ಗೆ ಸಮ್ಮತಿ ಇರಲಿಲ್ಲ. ಹೀಗಾಗಿ ಶೂನ್ಯಸಂಪಾದನೆಗಳಲ್ಲಿ ಮೊದಲು ಅನಿಮಿಷಗುರು ಪ್ರಭುದೇವನಿಗೆ ಸಂಕಲ್ಪಮಾತ್ರ ಲಿಂಗದೀಕ್ಷೆ ನೀಡುವ ಪ್ರಸಂಗ, ಎರಡನೆಯ ಘಟ್ಟದಲ್ಲಿ ಬಸವಣ್ಣನವರು ಚೆನ್ನಬಸವಣ್ಣನಿಗೆ ದೃಷ್ಟಿಪಾತದಿಂದ ಲಿಂಗದೀಕ್ಷೆ ನೀಡುವ ಸಂದರ್ಭ, ಇನ್ನು ಸಿದ್ಧರಾಮನಿಗೆ ಚೆನ್ನಬಸವಣ್ಣ ಬೋಧಿಸುವ ವೇದಾಮಂತ್ರ ಮತ್ತು ಕ್ರಿಯಾದೀಕ್ಷಾ ಸಮನ್ವಿತ ಇಷ್ಟಲಿಂಗ ದೀಕ್ಷಾಕ್ರಮ, ಹೀಗೆ ಮೂರು ಬೇರೆ ಬೇರೆ ಸಂದರ್ಭದ ಇಷ್ಟಲಿಂಗದೀಕ್ಷಾ ವಿಧಾನವನ್ನು ಗುರುತಿಸಿ, ವಿದ್ವಾಂಸರ ಚಿಂತನೆಗೆ ಹೊಸ ಸ್ಪರ್ಶ ನೀಡುತ್ತಾರೆ ಡಾ. ಮಲ್ಲಾಪುರ.

ಹೀಗೆ, ಇವರು ಏನೇ ಬರೆದರೂ ಅದನ್ನು ಗಂಭೀರವಾಗಿ ಪರಿಗಣಿಸುವ ಮೂಲಕ ವಿದ್ವತ್‌ಪ್ರಪಂಚವನ್ನು ಬೆರಗುಗೊಳಿಸುತ್ತಾರೆ. ಆದರೆ, ಈವರೆಗೆ ಸದ್ದಿಲ್ಲದೆಯೇ ಬಹಳಷ್ಟು ಬರೆದಿರುವ ಇವರ ಬರವಣಿಗೆಗೆ ಸುಧಾರ್ಣವ ಸಂಪುಟಗಳ ಮೂಲಕ ಒಂದು ಇಡಿಯಾದ ಸ್ವರೂಪ ಪ್ರಾಪ್ತವಾಗಿದ್ದು, ಮಹತ್ವದ ಸಂಶೋಧಕರ ಸಾಲಿಗೆ ಸೇರುತ್ತಾರೆ. ಈ ದೃಷ್ಟಿಯಿಂದ ಇವರ ಸುಮಾರು ೫೦ ರಷ್ಟು ಇನ್ನೂ ಅಪ್ರಕಟಿತವಾಗಿ ಉಳಿದಿರುವ ಲೇಖನಗಳು ಆದಷ್ಟು ಶೀಘ್ರ ಕೃತಿರೂಪದಲ್ಲಿ ಪ್ರಕಟಿತವಾಗುವ ಅಗತ್ಯವಿದೆ. ಅಲ್ಲದೆ, ಈಗಾಗಲೇ ಪ್ರಕಟಿತವಾಗಿರುವ ಈ ಕೆಳಗಿನ ಕೃತಿಗಳ ಸಂಪಾದಿತ ಕೃತಿಗಳ ಪಟ್ಟಿ ಮತ್ತು ವೈವಿಧ್ಯಪೂರ್ಣವಾದ ವಿಷಯಗಳ ಆಸಕ್ತಿ ಇವರ ಆಳವಾದ ಅಧ್ಯಯನಶೀಲತೆಗೆ ಹಾಗು ಚಿಂತನಕ್ರಮಕ್ಕೆ ನಿದರ್ಶನಗಳಾಗಿವೆ.

**ಕೃತಿಸೂಚಿ**

೧) ರಾಘವಾಂಕನ ಪಾತ್ರಗಳಲ್ಲಿ ತತ್ವನಿಷ್ಠೆ
೨) ಅರವತ್ತೂರು ಪುರಾತನರು
೩) ಶರಣ ಸರೋಜ
೪) ವೀರಶೈವ ತತ್ವಾರ್ಥ ವಿವೇಚನೆ
೫) ಗುರುನಾನಕ ಜೀವನ ಚರಿತ್ರೆ
೬) ಪುರಾಣಿಕ ಬುದ್ಧಯ್ಯನವರು
೭) ಎಸ್. ಎಸ್. ಮಳೀಮಠರು
೮) ಶಿವಧರ್ಮ ಪ್ರದೀಪ
೯) ಹರಿಹರ ಕವಿಕಾವ್ಯ ವಿಮರ್ಶೆ
೧೦) ವೀರಶೈವ ಷಟ್ಪದಿ ಕೃತಿಗಳು
೧೧) ನಯಸೇನ ಅವರ ಕೃತಿಗಳು (ಪಿಹೆಚ್. ಡಿ. ಪ್ರಬಂಧ)
೧೨) ಸುಧಾರ್ಣವ ಸಂಪುಟ ೧
೧೩) ಸುಧಾರ್ಣವ ಸಂಪುಟ ೨

**ಸಂಪಾದಿತ**

೧) ಧರ್ಮಾಮೃತ ಸಂಗ್ರಹ
೨) ಸಣ್ಣ ಕತೆಗಳು
೩) ಚಂದ್ರಹಾಸ ಚರಿತೆ (ಪಠ್ಯ)
೪) ಹರಿಹರನ ರಗಳೆಗಳು
೫) ಚೆನ್ನಬಸವಣ್ಣನವರ ನೂರೊಂದು ವಚನಗಳು
೬) ಬುದ್ಧಯ್ಯಸ್ವಾಮಿ ಪುರಾಣಿಕ ಸಂಕಲಿಸಿದ ಸ್ವರವಚನಗಳು
೭) ಅಲ್ಲಮ ಪ್ರಭುದೇವರ ವಚನ ಸಂಪುಟ
೮) ಚೆನ್ನಬಸವಣ್ಣನವರ ವಚನ ಸಂಪುಟ

■■

# ಬಸವಣ್ಣನಿಂದ ಬದುಕಿತ್ತೀ ಲೋಕವೆಲ್ಲ

• ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು

ಜಾತೀಯತೆಯು ತಾಂಡವವಾಡುತಿತ್ತು. ಅಸ್ಪೃಶ್ಯತೆ ಮುಗಿಲು ಮುಟ್ಟಿತ್ತು. ಸಮಾಜದಲ್ಲಿ ಉಸಿರುಗಟ್ಟುವ ಸ್ಥಿತಿ ನಿರ್ಮಾಣವಾಗಿತ್ತು. ಅಸ್ಪೃಶ್ಯರು ಊರೊಳಗೆ ಬರಬೇಕಾದರೆ 'ಸಂಬೋಳಿ' ಎಂದು ಕೂಗುತ್ತಾ ಬರಬೇಕಾಗಿತ್ತು. ಟೊಂಕಕ್ಕೆ ಕಸಬರಿಗೆ, ಕೊರಳಲ್ಲಿ ಮುಚ್ಚಳ ಕಟ್ಟಿಕೊಳ್ಳಬೇಕಾಗಿತ್ತು. ಅಸ್ಪೃಶ್ಯರು ಇಟ್ಟ ಹೆಜ್ಜೆಯನ್ನು ಹಿಂದೆ ಕಸಬರಿಗೆ ಸ್ವಚ್ಛ ಮಾಡುತ್ತ ಬರಬೇಕು. ಉಗುಳು ಬಂದರೆ ತನ್ನ ಕೊರಳಿನಲ್ಲಿರುವ ಮುಚ್ಚಳದಲ್ಲಿಯೇ ಉಗುಳಬೇಕು. ಪಶುವಿಗಿಂತಲೂ ಕೀಳಾದ ಪರಿಸ್ಥಿತಿ. ಶೋಷಣೆ, ಬಹುದೇವೋಪಾಸನೆ, ಮೂಢಾಚಾರ, ಕಂದಾಚಾರಗಳು, ಅರ್ಥವಿಲ್ಲದ ವ್ಯರ್ಥಸಂಪ್ರದಾಯಗಳು ಜನಮಾನಸದಲ್ಲಿ ಸಂಪೂರ್ಣವಾಗಿ ಆವರಿಸಿದ್ದವು. ರಾಜರು–ಪುರೋಹಿತರು ಮಾಡಿದ್ದೆ ಧರ್ಮ, ಅವರು ಹೇಳಿದ್ದೆ ಕಾನೂನು, ತುಟಿಪಿಟಕ್ಕೆನ್ನದೇ ಪಾಲಿಸಬೇಕಾಗಿತ್ತು. ಅಜ್ಞಾನದ ಅಂಧಕಾರದಲ್ಲಿ ಮುಳುಗಿದ್ದ ಪ್ರಜೆಗಳು ಸ್ವಾತಂತ್ರ್ಯ ಕಳೆದುಕೊಂಡುಬಿಟ್ಟಿದ್ದರು. ವಿಮೋಚನಾ ಸಾಮರ್ಥ್ಯ ಹೋಗಿ ಬಿಟ್ಟಿತ್ತು.

**"ದೊರೆ ಮತ್ತು ಪುರೋಹಿತ**
**ಕೂಡಿದಾಗ ಹುಟ್ಟಿತ್ತು ಮತ**
**ಮೊದಲ ಠಕ್ಕ ಮೊದಲ ಬೆಪ್ಪ**
**ಕೂಡಿದಾಗ ಮೂಡಿತ್ತು ಮತ**
**ಯಾವುದನೃತ? ಯಾವುದು ಋತ?**
**ಅಂತೂ ನಡೆಯಿತದ್ಭುತ"**

–ಕುವೆಂಪು

ಇಂಥ ಪ್ರಸಂಗದಲ್ಲಿ ಬಸವಣ್ಣನವರು ವೈದ್ಯರಾಗಿ ರೋಗಿಗೆ ಪರೀಕ್ಷೆ ಮಾಡಿ ರೋಗ ಕಂಡುಹಿಡಿದು ಶಸ್ತ್ರಚಿಕಿತ್ಸೆ ಮಾಡಿ ಔಷಧ ಕೊಟ್ಟು ಸರಿಪಡಿಸುವಂತೆ ಸಮಾಜದಲ್ಲಿ ವ್ಯಾಪಿಸಿದ ವಿವಿಧ ರಂಗದಲ್ಲಿ ಶಸ್ತ್ರ ಚಿಕಿತ್ಸೆ ಮಾಡಿದರು. ಬದಲಾವಣೆ ತಂದರು, ಕ್ರಾಂತಿ ಮಾಡಿದರು.

ಮೊದಲು ಧಾರ್ಮಿಕ ರಂಗದಲ್ಲಿ ವ್ಯಾಪಿಸಿದ ಮೂಢಾಚಾರ, ಬಹುದೇವೋಪಾಸನೆ ಖಂಡಿಸಿದರು. ಅಷ್ಟೇ ಅಲ್ಲ ನೀನೇ ದೇವರು, ನಿನ್ನೊಳಗೆ ದೇವರು ಇದ್ದಾನೆ. ನೂರಾರು ಸಾವಿರಾರು ದೇವರುಗಳು ತುಂಡರಿಸಿ ಏಕದೇವೋಪಾಸನೆ ತಂದರು. "ಉಳ್ಳವರು ಶಿವಾಲಯ ಮಾಡುವರು ನಾನೇನು ಮಾಡಲಿ ಬಡವನಯ್ಯ. ಎನ್ನ ಕಾಲೇ ಕಂಬ ದೇಹವೇ ದೇವಾಲಯ, ಶಿರವೇ ಹೊನ್ನಕಳಸ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂದು ಸಾರಿ ಆಚರಣೆಯಲ್ಲಿ ತಂದರು.

ತನ್ನಾಶ್ರಯದ ರತಿ ಸುಖವನು ತಾನುಂಬ ಊಟವನು ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ? ಜನಮನದ ಹೃದಯಾಂತರಾಳದಲ್ಲಿ ಅರಿವಿನ ಪ್ರಜ್ಞೆಯನ್ನು ಮೂಡಿಸಿ, ನಿನ್ನ ಅಂತರಂಗದ ಅರಿವಿನ ಕುರುಹು ಇಷ್ಟಲಿಂಗ. ಇಷ್ಟಲಿಂಗದಿಂದ ನಿನ್ನ ಉದ್ಧಾರ ನೀ ಮಾಡಿಕೊ ಇನ್ನೊಬ್ಬರ ಬೆಳಕಿನಲ್ಲಿ ನೀ ನಡೆಯಬೇಕಿಲ್ಲ. ನಿನ್ನ ಬೆಳಕಿನಲ್ಲಿ ನೀ ನಡೆ ಎಂದು ಧಾರ್ಮಿಕ ಕ್ರಾಂತಿ ಮಾಡಿದರು.

ಅಪ್ಪ ಬೊಪ್ಪ ಎಂದು ಅಪ್ಪಿಕೊಂಡರು; ಒಪ್ಪಿಕೊಂಡರು. "ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ, ಮಾದಾರ ಚೆನ್ನಯ್ಯ" ಎಂದು ಶರಣರ ಹೃದಯದಲ್ಲಿಯೇ ಕೂಡಲಸಂಗಮನನ್ನು ಕಂಡರು. ಅಷ್ಟೇ ಅಲ್ಲ "ಓ ಕೂಡಲಸಂಗಮದೇವಾ ನಿಮ್ಮಿಂದ ಅಧಿಕ ನಮ್ಮ ಮಾದಾರ ಚೆನ್ನಯ್ಯ" ಓ ದೇವರೇ ನೀನು ದೊಡ್ಡವ ನಿಜ. ಆದರೆ ನಿನಗಿಂತ ದೊಡ್ಡವ ನಮ್ಮ ಮಾದಾರ ಚೆನ್ನಯ್ಯ ಎಂದು ಹೇಳಿದ ಮಹಾತ್ಮರು ವಿಶ್ವಗುರು ಬಸವಣ್ಣನವರು.

**"ಚೆನ್ನಯ್ಯನ ಮನೆಯ ದಾಸನ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು, ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ ಸಂಗವ ಮಾಡಿದರು ಇವರಿಬ್ಬರಿಗೆ ಹುಟ್ಟಿದ ಮಗ ನಾನು ಕೂಡಲಸಂಗಮದೇವಾ ಸಾಕ್ಷಿಯಾಗಿ"**

ಎಂದು ಹೇಳಿ ಮಾತೃವಾತ್ಸಲ್ಯ ಪ್ರಕಟಿಸಿ ತಮ್ಮ ಅಂತರಂಗದಲ್ಲಿ ಅಡಗಿಸಿಕೊಳ್ಳುತ್ತಾರೆ.

**ಹಿರೇಮಠ ಸಂಸ್ಥಾನ, ಭಾಲ್ಕಿ**

ಅಸ್ಪೃಶ್ಯನಾದ ಉರಿಲಿಂಗಪೆದ್ದಿಯನ್ನು ಕಳ್ಳತನ ಬಿಡಿಸಿ ಭಕ್ತನನ್ನು ಮಾಡಿ ಜಂಗಮ ಸ್ಥಲಕ್ಕೇರಿಸಿ ಒಂದು ಮಠದ ಪೀಠಾಧಿಪತಿಯನ್ನಾಗಿ ಮಾಡಿ ವಿಶ್ವದಾಖಲೆ ನಿರ್ಮಾಣ ಮಾಡಿ ಸಾಮಾಜಿಕ ಕ್ರಾಂತಿ ಮಾಡಿದರು.

ರಾಜಶಾಹಿಯನ್ನು ಧಿಕ್ಕರಿಸಿ ಪ್ರಜಾಪ್ರಭುತ್ವ ಮೌಲ್ಯಗಳನ್ನು ನೀಡಿದರು. ವಿಶ್ವಸಂಸ್ಥೆಯು ಪಾಲಿಸುವ ನಿಯಮ ರೂಪಿಸಿದರು. ಮಾನವ ಹಕ್ಕುಗಳನ್ನು ಕೊಡಿಸಿದರು. ಅನುಭವಮಂಟಪ ಸ್ಥಾಪಿಸಿ ಅದನ್ನು ಆಚರಣೆಯಲ್ಲಿ ತಂದರು. "ಆನೀ ಬಿಜ್ಜಳನಿಗಂಜುವೆನೆ? ಬಿಜ್ಜಳನ ಭಂಡಾರವೆನಗೇಕಯ್ಯ", "ಆನೆಯನೇರಿಕೊಂಡು ಹೋದಿರೆ ನೀವು; ಕುದುರೆಯನೇರಿ ಕೊಂಡು ಹೋದಿರೆ ನೀವು; ಸತ್ಯದ ನಿಲವನರಿಯದೆ ಹೋದಿರಲ್ಲ" ಎನ್ನುತ್ತಾರೆ. ಕಾಯಕ–ದಾಸೋಹ ಸೂತ್ರ ನೀಡಿ, ಕಾಯಕ ಹೇಗೆ ಗಳಿಸಬೇಕು ಎಂದು ಕಲಿಸಿದರೆ, ದಾಸೋಹ ಹೇಗೆ ಬಳಸಬೇಕು ಎಂಬುದನ್ನು ಅರುಹುತ್ತದೆ. ಪ್ರಜಾಧರ್ಮವನ್ನು ಕೊಟ್ಟು ಪ್ರಜಾಪ್ರಭುತ್ವವನ್ನು ಮೊಟ್ಟಮೊದಲು ಸ್ಥಾಪಿಸಿ ವಿಶ್ವಸಂವಿಧಾನ ಶಿಲ್ಪಿಗಳಾಗಿ ಬಸವಣ್ಣನವರು ರಾಜಕೀಯ ಕ್ರಾಂತಿ ಮಾಡಿದರು.

ವಯಸ್ಕರ ಶಿಕ್ಷಣ ಎಂದು ಇಂದು ಹೇಳುತ್ತೇವೆ. ಆದರೆ ಬಸವಣ್ಣನವರು ಅಂದಿನ ಕಾಲದಲ್ಲಿ ಶಿಕ್ಷಣದ ಮಹತ್ವ ಅರಿತು, ತುರುಗಾಹಿ ರಾಮಣ್ಣ, ನುಲಿಯ ಚಂದಯ್ಯ, ಸೂಳೆಯ ಸಂಕವ್ವೆಯವರಂತಹ ನೂರಾರು ಶರಣ ಶರಣೆಯರು ಕನ್ನಡ ಕಲಿತು ಕನ್ನಡದಲ್ಲಿಯೇ ವಚನಗಳನ್ನು ಬರೆದು ಶಿಕ್ಷಣದ ಕ್ರಾಂತಿ ಮಾಡಿದರು. ಸಾವಿರ ಸಾವಿರ ಶರಣ–ಶರಣೆಯರು ವಚನಗಳ ರಾಶಿರಾಶಿ ನಿರ್ಮಾಣ ಮಾಡಿದರು. ಸಾಹಿತ್ಯ ಬರೆಯಬೇಕು ಎಂದಲ್ಲ. ಜನ ಬದುಕಬೇಕೆಂಬ ಇಚ್ಛೆಯಿಂದ ಅನುಭವಮಂಟಪದಲ್ಲಿ ಪ್ರಭುವಿನ ಜೊತೆ ಸಂವಾದ ಮಾಡುವ ಶಕ್ತಿ ಹೊಂದಿದ್ದರು. ಎಂದ ಮೇಲೆ ಬಸವಣ್ಣನವರು ಮಾಡಿದ ಶೈಕ್ಷಣಿಕ ಕ್ರಾಂತಿ, ಸಾಹಿತ್ಯ ಕ್ರಾಂತಿ ಎಂಥ ಅದ್ಭುತ ಎಂಬುದನ್ನು ತಿಳಿದುಕೊಳ್ಳಬೇಕು.

ಇಂದಿನ ವಿಜ್ಞಾನ ಯುಗದಲ್ಲಿಯೂ ಸಾಧ್ಯವಾಗದ ವೈಚಾರಿಕ ಕ್ರಾಂತಿ ಬಸವಣ್ಣನವರು ಮಾಡಿದರು. ಅವರ ವೈಚಾರಿಕ ಕ್ರಾಂತಿ ಇಂದಿನ ದಿನಮಾನಕ್ಕೆ ಅನಿವಾರ್ಯ ಇದೆ. ಅವಶ್ಯವಾಗಿ ಬೇಕಾಗಿದೆ. ಭವಿಷ್ಯ ಅಂಗೈಯಲ್ಲಿ ಇಲ್ಲ. ಮುಂಗೈಯಲ್ಲಿ ಇದೆ. ನಿನ್ನ ಪರಿಶ್ರಮದಲ್ಲಿ ಇದೆ. ನಿನ್ನ ಪ್ರಯತ್ನದಲ್ಲಿ ಇದೆ ಎಂದರು. "ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯ ನಾಳಿನ ದಿನಕ್ಕಿಂತ ಇಂದಿನ ದಿನ ಲೇಸೆಂದು ಹೇಳಿರಯ್ಯ" ಎಂದು ಸಾರಿ, ಈ ದಿನ ಶ್ರೇಷ್ಠ ಆ ದಿನ ಕನಿಷ್ಠ ಎನ್ನುವುದು ಸರಿ ಅಲ್ಲ, ಎಲ್ಲ ದಿನಗಳೂ ಶ್ರೇಷ್ಠ ಎಂದು ತಿಳಿಸಿದರು. ಆ ದಿಕ್ಕು ಈ ದಿಕ್ಕುಗಳಲ್ಲಿ ಭೇದವ ಕಳೆದರು. ಸ್ವರ್ಗ ಕೈಲಾಸ ನರಕ ಎಂಬ ಕಲ್ಪನೆ ಕಳೆದು "ಆಚಾರವೇ ಸ್ವರ್ಗ ಅನಾಚಾರವೇ ನರಕ" ಎಂದು ಸಾರಿದರು. ಎಡಗೈ ಕನಿಷ್ಠ ಬಲಗೈ ಶ್ರೇಷ್ಠ ಎಂಬ ಭೇದ ಹೋಗಲಾಡಿಸಿ, ಎಡದ ಕೈಯಲ್ಲಿಯೇ ಇಷ್ಟಲಿಂಗವಿಟ್ಟು ಪೂಜಿಸುವ ಮೂಲಕ ಭೇದ ಕಳೆದರು. ಮುಂಜಾನೆ ಎದ್ದು ಹಡಪದವನ ಮುಖ ನೋಡಲಾಗದು ಎಂಬುದನ್ನು ಹೋಗಲಾಡಿಸಿ, ಹಡಪದ ಅಪ್ಪಣ್ಣನವರನ್ನು ವೈಯಕ್ತಿಕ ಕಾರ್ಯದರ್ಶಿಯನ್ನಾಗಿ ನೇಮಿಸಿಕೊಂಡು ಮೈಲಿಗೆ ತೊಳೆದರು. ಶುಭ ವೇಳೆ ಅಶುಭ ವೇಳೆಯನ್ನು ಕಳೆದು ಎಲ್ಲವೂ ಶುಭ ಎಂದು ಸಾರಿದರು. ಪಂಚಾಂಗ ಜ್ಯೋತಿಷ್ಯ ಖಂಡಿಸಿ ಪಂಚಾಂಗವ ಕೇಳಿದ ಸೀತೆ ವನವಾಸವಾದಳೇಕೆ? ಪಂಚಾಂಗವ ಕೇಳಿದ ದಕ್ಷಬ್ರಹ್ಮನ ತಲೆ ಯಾಕೆ ಹೋಯಿತು? ಪ್ರಶ್ನೆ ಹಾಕಿದರು. ಜೀವನದ ವಿವಿಧ ರಂಗದಲ್ಲಿ ವ್ಯಾಪಿಸಿದ ಅಂಧಶ್ರದ್ಧೆ, ಮೂಢನಂಬಿಕೆಯನ್ನು ಹೋಗಲಾಡಿಸಿ ವೈಚಾರಿಕ ಕ್ರಾಂತಿ ಮಾಡಿದರು.

ಧಾರ್ಮಿಕ ಕ್ರಾಂತಿ, ಸಾಮಾಜಿಕ ಕ್ರಾಂತಿ, ರಾಜಕೀಯ ಕ್ರಾಂತಿ, ಶೈಕ್ಷಣಿಕ ಕ್ರಾಂತಿ, ಸಾಹಿತ್ಯಿಕ ಕ್ರಾಂತಿ, ವೈಚಾರಿಕ ಕ್ರಾಂತಿಗಳನ್ನು ಮಾಡಿ ಸಮಗ್ರ ಕ್ರಾಂತಿ ಪುರುಷರಾದ ಬಸವಣ್ಣನವರನ್ನು ಕುರಿತು 'ಎನಗೆಯೂ ಗುರು, ನಿಮಗೆಯೂ ಗುರು, ಜಗವೆಲ್ಲಕ್ಕೂ ಗುರು, ಯುಗದ ಉತ್ಸಾಹ' ಎಂದು ಅಲ್ಲಮಪ್ರಭುಗಳು ಹೇಳಿದರೆ, ಬಹುರೂಪಿ ಚೌಡಯ್ಯನವರು 'ರೇಕಣ್ಣಪ್ರಿಯ ನಾಗಿನಾಥ ಬಸವಣ್ಣನಿಂದ ಬದುಕಿತ್ತೀಲೋಕವೆಲ್ಲ' ಎಂದು ಉದ್ಗರಿಸಿದ್ದು ಸತ್ಯವಾಗಿದೆ. ಬಸವಣ್ಣನವರ ವಿಚಾರ ಧಾರೆಗಳು ಶತಶತಮಾನಗಳಷ್ಟು ಮುಂದಿವೆ. ಶತಮಾನಗಳು ಕಳೆದಂತೆ ಬಸವ ವಿಚಾರಧಾರೆಗೆ ಬೆಲೆ ಬರುತ್ತದೆ. ಬಸವಾಚರಣೆಗಳನ್ನು ಆಚರಣೆಯಲ್ಲಿ ತಂದು ಸುಖೀಸಮಾಜ, ಕಲ್ಯಾಣರಾಜ್ಯ ನಿರ್ಮಾಣ ಮಾಡೋಣ. ಅಂಥ ಶಕ್ತಿ ಲೋಕಗುರು ಬಸವಣ್ಣ ದಯಪಾಲಿಸಲಿ ಎಂದು ಪ್ರಾರ್ಥಿಸೋಣ.

**ಕೃಪೆ:** ಬಸವಣ್ಣನಿಂದ ಬದುಕಿತ್ತೀ ಲೋಕವೆಲ್ಲ

**ಪ್ರ:** ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೇ, ಶ್ರೀ ಮುರುಘಾಮಠ, ಧಾರವಾಡ

■■

# ಉಡಿಯ ಲಿಂಗವ ಬಿಟ್ಟು ಗುಡಿಯ ಲಿಂಗಕ್ಕೆ ಶರಣೆಂದವರಿಗೇನೆಂಬೆ?...

• ವೆಂಕಟೇಶ ಕೆ. ಜನಾದ್ರಿ

ಬಹಿರಂಗದಲ್ಲಿ ಶುಚಿತ್ವ ಮಾಡುವವರು, ಮಾಡಿಕೊಳ್ಳುವವರು ಮತ್ತು ಮಾಡಿಸುವವರಿಗೇನು ಈ ನಾಡಿನಲ್ಲಿ ಕೊರತೆಯಿಲ್ಲ. ಆದರೆ ಅಂತರಂಗದ ಶುಚಿತ್ವ ಅಂತರಂಗದ ಶುದ್ಧಿತನ ಮಾಡಿಕೊಳ್ಳುವುದಿರಲಿ ಪ್ರಯತ್ನಿಸುವವರೂ ಕಡಿಮೆಯೇ. ಅಂತರಂಗ ಶುದ್ಧಿ ಮಾಡಿಕೊಳ್ಳುವುದು ಕಷ್ಟ. ಮಾಡಿಸುವವರಂತೂ ಇಲ್ಲವೇ ಇಲ್ಲ. ಹಾಗೆ ಮಾಡಿಸಲೂ ಸಾಧ್ಯವೂ ಇಲ್ಲ. ಬಾಹ್ಯದಲ್ಲಿ ಉಡುವ ತೊಡುವ ವಸ್ತ್ರಗಳ ಜೊತೆಗೆ ಭೌತಿಕವಾದ ಶರೀರದ ಶುಚಿತ್ವವೆಷ್ಟು ಮುಖ್ಯವೋ ಆಂತರ್ಯದ ಶುದ್ಧತೆ ಮತ್ತು ಮನಸ್ಸಿನ ಸ್ವಚ್ಛತೆ ಕಾಪಾಡಿಕೊಂಡರೆ ಆತ ಶರಣನಾಗುತ್ತಾನೆ. ಮಹಾತ್ಮನಾಗ್ತಾನೆ. ಈ ಬಗೆಯ ಅಂತರಂಗ-ಬಹಿರಂಗದ ಶುದ್ಧತೆಯೇ ನಿಜವಾದ ಮಡಿತನವಾಗುತ್ತದೆ. ಮಡಿವಂತಿಕೆ ಯಾಗುತ್ತದೆ. ಅದು ಹಾಗಾಗಬೇಕು.

ಹನ್ನೆರಡನೇ ಶತಮಾನದಲ್ಲಿ ಬಸವಣ್ಣನ ಸಮಕಾಲೀನ ಶರಣರಲ್ಲಿ ಮಡಿವಾಳ ಮಾಚಯ್ಯನವರದ್ದು ಶರಣರ ಬಟ್ಟೆಗಳನ್ನು ಶುಚಿ ಮಾಡಿಕೊಡುವ ಪವಿತ್ರವಾದ ಕಾಯಕ. ಇಲ್ಲಿ ಶರಣರೆಂದರೆ ಬಹಿರಂಗದೊಂದಿಗೆ ಅಂತರಂಗದಲ್ಲಿಯೂ ಶುದ್ಧವಾಗಿರುವವರೆಂಬ ಅರ್ಥ. ಇಂಥ ಶರಣರು ಉಡುವ ಬಟ್ಟೆಗಳನ್ನು ಶುಚಿಗೊಳಿಸಿ ಅವರಿಗೊಪ್ಪಿಸಿ ಅವರ ಶುದ್ಧ ಮನಸ್ಸಿನ ವಿಚಾರಗಳು ಇನ್ನಷ್ಟು ಅರಳುವಂತೆ ಮಾಡುವ ಮಾಚಯ್ಯ ತಂದೆ ನಿಜಕ್ಕೂ ಒಬ್ಬ ಅನುಭಾವಿ ಶರಣ. ಸಾಮಾನ್ಯರು ವಿಷಯುವನ್ನು ಮತ್ತು ಅರಿವನ್ನು ಅನುಭವಿಸಬಹುದು. ಆದರೆ ಆನುಭಾವಿಕ ನೆಲೆಯಲ್ಲಿ ಕಂಡುಕೊಂಡವರು ಶರಣರು. ಅವರು ಬರೀ ಓದುವುದು, ಉಪದೇಶ ಮಾಡುವುದನ್ನು ಮಾಡದೇ ತಮ್ಮ ತಮ್ಮ ಕಾಯಕದೊಂದಿಗೆ ತಮ್ಮ ವಿವೇಚನೆಗೆ ಕಂಡುಕೊಂಡ ಆನುಭಾವಿಕ ನಿಲುವನ್ನು ವಚನಗಳ ಮೂಲಕ ಅನುಭವ ಮಂಟಪದಲ್ಲಿ ಮಂಥಿಸುತ್ತಿದ್ದರು. ಆ ಮಂಥನದಲ್ಲಿ ಆವಿರ್ಭವಿಸುವವು ಶುದ್ಧವಾದ ವಚನಗಳಾಗುತ್ತಿದ್ದವು. ಮುಂದೇ ಇವೇ ವಚನಧರ್ಮ, ಶರಣಧರ್ಮವಾದವು. ಇವುಗಳನ್ನು ನುಡಿದು ನಡೆದವರೇ ಶರಣರಾದರು. ಇಂಥವರ ತಾಣವೇ ಅನುಭವ, ಅನುಭಾವ ಮಂಟಪವಾದವು.

ಮೌಢ್ಯತೆ, ಜಾತೀಯತೆ, ಧರ್ಮಾಂಧತೆ, ಅಸಮಾನತೆಯಂಥ ಗಾಢಾಂಧಕಾರ ತುಂಬಿಕೊಂಡಿದ್ದ ಹನ್ನೆರಡನೆ ಶತಮಾನದಲ್ಲಿ ಬಸವಾದಿ ಪ್ರಮಥರ ವೈಚಾರಿಕ ಚಿಂತನೆಗಳು ನಿಜಕ್ಕೂ ಅಂದು ಅವಶ್ಯಕವಾಗಿದ್ದವು. ಇಂಥ ಕಾಲಘಟ್ಟದಲ್ಲಿ ಉದಯಿಸಿದವರು ಮಡಿವಾಳ ಮಾಚಯ್ಯ ಶರಣರು. ಇಂದಿನ ವಿಜಯಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ದೇವರ ಹಿಪ್ಪರಗಿಯಲ್ಲಿ ಪರವತಯ್ಯ ಮತ್ತು ಸುಜ್ಞಾನಮ್ಮ ಎಂಬ ಶರಣ ದಂಪತಿಗಳ ಮಗನಾಗಿ ಕ್ರಿ.ಶ. ೧೧೨೦-೩೦ರ ಕಾಲದಲ್ಲಿ ಜನಿಸುತ್ತಾರೆ. ಗುರುಗಳಾದ ಮಲ್ಲಿಕಾರ್ಜುನಯ್ಯ ಸ್ವಾಮಿಯವರ ಆಶೀರ್ವಚನ ಇವರನ್ನು ಬೆಳೆಸಿ ಬೆಳಗಿಸುತ್ತದೆ. ಬಸವ ಕಲ್ಯಾಣದತ್ತ ಮುಖ ಮಾಡುವಂತೆಯೂ ಈ ಗುರುಗಳು ಪ್ರೇರಕರಾಗುತ್ತಾರೆ. ನಿಷ್ಠಾವಂತರ ಶರಣರ ಬಟ್ಟೆಗಳನ್ನು ಮಾತ್ರ ಶುಚಿಗೊಳಸುವುದು ಇವರ ಕಾಯಕ. "ಅರಸುತನ ಮೇಲಲ್ಲ, ಅಗಸುತನ ಕೀಳಲ್ಲ" ಎಂಬುದು ಇವರ ಸಮಾನತೆಯ ಮಂತ್ರ. ಕಾಯಕದ ಮಹತ್ವವಾಗಿತ್ತು.

ಅನುಭವ ಮಂಟಪಕ್ಕೆ ಬರುವ ಶರಣರನ್ನು ಸ್ವಾಗತಿಸಿ, ಹೊಸಬರಾಗಿದ್ದರೆ ಪರೀಕ್ಷಿಸಿ ಪ್ರವೇಶ ಪತ್ರ ನೀಡುವಂಥದ್ದು ಸಹ ಇವರ ಹೊಣೆಯಾಗಿತ್ತು. ಗಣಾಚಾರಿ ಸಂಪನ್ನರಿವರು. ಭವಿಯಾದ ಬಿಜ್ಜಳ ಮಹಾರಾಜನ ಬಟ್ಟೆಯನ್ನೂ ಸಹ ಶುಚಿಗೊಳಿಸಿ ಮಡಿ ಮಾಡಲು ಅಧಿಕಾರಯುತವಾಗಿ ದಿಟ್ಟತನದಿಂದ ನಿರಾಕರಿಸಿದ ಗಣಾಚಾರಿ. ಅಂದಿನ ವ್ಯವಸ್ಥೆಯಲ್ಲಿ ಇದೊಂದು ಮಹತ್ವದ ಪ್ರತಿಭಟನೆಯಾಗಿತ್ತು. ಇಂದಿಗೂ ಅವ್ಯವಸ್ಥೆಯ ವಿರುದ್ಧ ಮುಷ್ಕರ ಮಾಡಲು ಹೆದರುವ, ಯೋಚಿಸುವ ಕೆಲವರಿಗೆ ಇವರ ಧೀರತನ ಮಾದರಿಯಾಗಬೇಕು. ಮಾಚಯ್ಯನವರ ಈ ಧೋರಣೆಗೆ ಕಾರಣ ಎಲ್ಲರೂ ಸತ್ಯ ಶುದ್ಧವಾದ ಕಾಯಕದಿಂದ ಶರಣತನದ ವ್ಯಕ್ತಿತ್ವದಿಂದ ಬದುಕಬೇಕು. ಇಡೀ ವ್ಯವಸ್ಥೆಯು

ಲೆಕ್ಕಪತ್ರ ಅಧೀಕ್ಷಕ, ಈಕರಸಾ ಸಂಸ್ಥೆ , ಕೇಂದ್ರ ಕಛೇರಿ, ಕಲಬುರ್ಗಿ-೫೮೫೧೦೨ ಮೊ: ೯೯೪೫೩೩೨೦೪೯೨

ಶರಣಮಯವಾಗಬೇಕೆಂಬ ಹಸಿವು, ತವಕ ಇತ್ತು. ಪರಿಶುದ್ಧವಾದ ಕಾಯಕವೇ ಎಲ್ಲರೊಡಲ ಹಸಿವಾಗಿರಬೇಕೆಂಬ ಧೋರಣೆಯಲ್ಲಿ ಅವರು ಹಲವಾರು ವಚನಗಳನ್ನು ರಚಿಸಿದ್ದರು. ಇವರು "ಕಲಿದೇವರ ದೇವ" ಎಂಬ ಅಂಕಿತದಲ್ಲಿ ರಚಿಸಿರುವ ೩೪೩ ವಚನಗಳು ಇಂದು ದೊರೆತಿವೆ. ಅಧ್ಯಯನಕ್ಕೆ ಲಭ್ಯವಿವೆ.

ಮಾಚಯ್ಯನವರು ಬಸವಕಲ್ಯಾಣಕ್ಕೆ ಬರುವಾಗ ಭೀಮಾ ನದಿಯನ್ನು ದಾಟಿಕೊಂಡು ಬರಬೇಕಾಗುತ್ತದೆ. ಆ ಸಂದರ್ಭದಲ್ಲಿ ನದಿಯೇ ಎರಡು ಭಾಗವಾಗಿ ಇವರಿಗೆ ದಾರಿ ಮಾಡಿಕೊಡುತ್ತದೆಂಬ ಪ್ರತೀತಿ ಇದೆ. ಇದನ್ನು ನಂಬುವುದು ಅಸಾಧ್ಯ. ಆದರೆ ಒಳ್ಳೆಯ ಈಜುಗಾರರಾದ ಇವರು ಈಜಿಕೊಂಡೇ ನದಿಯನ್ನು ದಾಟಿರಬಹುದು. ಸರಾಗವಾಗಿ ಈಜುವಾಗ ನೀರು ಎರಡು ಭಾಗವಾದಂತೆ ಭಾಸವಾಗಿರುತ್ತದೆ. ಅಲ್ಲದೇ ಸಕಲ ಕೊಳೆಯನ್ನು ತೊಳೆಯುವ ಶಕ್ತಿ ನದಿ ನೀರಿಗೆ ಇರುತ್ತದೆ ಎನ್ನುತ್ತಾರೆ. ಇಲ್ಲಿ ಮಾಚಯ್ಯನವರಲ್ಲಿ ಯಾವುದೇ ಕೊಳೆ ಇಲ್ಲದ ಕಾರಣ ಆ ನದಿಯ ನೀರೂ ಇವರನ್ನು ಸೋಂಕಲು ಅವಶ್ಯವಿಲ್ಲವೆಂದು ಯೋಚಿಸಿರಬಹುದೇನೋ? ಭೌತಿಕವಾಗಿ ಮಾನಸಿಕವಾಗಿ ಶುದ್ಧವಾಗಿರುವವರಿಗೆ ಮತ್ತಾವ ಶುದ್ಧತೆಯ ಅವಶ್ಯಕತೆ ಇಲ್ಲವೆನ್ನುವುದರ ಪ್ರತೀಕವಾಗಿ ಹರಿಯುವ ನದಿಯೇ ಎರಡು ಭಾಗವಾಗಿ ಇವರಿಗೆ ದಾರಿ ಮಾಡಿದೆಯೆಂದು ಪರಿಭಾವಿಸಬಹುದು. "ಶುದ್ಧಿಯಿಂದ ಇದ್ದವರು ಇನ್ನೊಬ್ಬರನ್ನು ಶುದ್ಧ ಮಾಡುವುದು ಬಹಳ ಸುಲಭ. ಅಶುದ್ಧವಾದವರು ಇನ್ನೊಬ್ಬರನ್ನು ಶುದ್ಧಿಗೊಳಿಸಲು ತೊಡಗಿದರೆ ಆ ಇನ್ನೊಬ್ಬರೂ ಮತ್ತಷ್ಟು ಅಶುದ್ಧರಾಗುತ್ತಾರೆ". ಅದಕ್ಕಾಗಿಯೇ ಶರಣರು ಮೊದಲು ತಾವು ಶುದ್ಧರಾಗಿ ನಡೆದು ಇನ್ನೊಬ್ಬರಿಗೆ ಹೇಗೆ ಶುದ್ಧವಾಗಿ ನಡೆಯಬೇಕೆಂದು ನುಡಿದು ದಾರಿ ತೋರಿಸುತ್ತಿದ್ದರು. "ಮೊದಲು ನೀನು ಶುದ್ಧನಾಗು ಜಗತ್ತಿನಲ್ಲಿ ಒಬ್ಬ ಅಶುದ್ಧಿ ಕಡಿಮೆಯಾಗುತ್ತಾನೆ" ಎಂಬುದವರ ನಿಲುವು.

ಮಾಚಯ್ಯನವರು ಬಸವಕಲ್ಯಾಣದಲ್ಲಿ ಕಾಯಕ ನಿರತರಾದ ಸಂದರ್ಭದಲ್ಲಿ ಒಂದು ದಿನ ಶರಣ ನುಲಿಯ ಚಂದಯ್ಯನವರ ಇಷ್ಟಲಿಂಗ ಕಳಚಿ ಬೀಳುತ್ತದೆ. ಆ ಇಷ್ಟಲಿಂಗವನ್ನು ಮತ್ತೇ ಪಡೆಯಲು ಚಂದಯ್ಯ ನಿರಾಕರಿಸುತ್ತಾರೆ. ಇಷ್ಟಲಿಂಗ ತಾನಾಗಿಯೇ ಕೆಳಗೆ ಬಿದ್ದಿದೆ ಅದನ್ನು ತೆಗೆದುಕೊಳ್ಳುವ ಅವಶ್ಯಕತೆ ನನಗೆ ಇಲ್ಲವೆನ್ನುತ್ತಾರೆ. ಹಾಗಂದು ಮತ್ತೇ ತಾವು ಕಾಯಕನಿರತರಾಗುತ್ತಾರೆ. ಅವರಿಗೆ ಇಷ್ಟಲಿಂಗಕ್ಕಿಂತ ಕಾಯಕ ಮುಖ್ಯವಾಗುತ್ತದೆ. ಆಗ ಇಷ್ಟಲಿಂಗ ಇವರ ಬೆನ್ನತ್ತಿ ಬರುತ್ತದೆ. ಅದಕ್ಕೆ ಕಾಯಕ ಮಾಡಲು ಇವರು ತಿಳಿಸುವುದು ಈ ಎಲ್ಲಾ ಪ್ರಸಂಗ ಬಹುಶಃ ತಮಗೆಲ್ಲಾ ತಿಳಿದಿದೆ. ಈ ಇಷ್ಟಲಿಂಗ ನಿರಾಕರಣೆಯ ಸಂದರ್ಭ ಅನುಭವ ಮಂಟಪದಲ್ಲಿ ಚರ್ಚೆಯಾಗುತ್ತದೆ. ನಿರಾಕಾರ ಲಿಂಗವನ್ನನುಭವಿಸಿದ ನನಗೆ ಸಾಕಾರ ಲಿಂಗದ ಅವಶ್ಯಕತೆ ಇಲ್ಲವೆಂದು ಚಂದಯ್ಯ ವಾದಿಸಿದಾಗ ಮಾಚಯ್ಯನವರು ಬಹಳ ಮಾರ್ಮಿಕವಾಗಿ "ಸವಿ ಬೇಕು, ಹಣ್ಣು ಬೇಡ" ಎಂದರೆ ಹೇಗೆ?" ಚಂದಯ್ಯ. ನೀನು ಹಣ್ಣಿನ ಸವಿಯನ್ನು ಸವಿಯಬೇಕಾದರೆ ಹಣ್ಣನ್ನು ಸ್ವೀಕರಿಸಿ ಅದನ್ನು ತಿಂದು ಅನುಭವಿಸಿದಾಗ ಮಾತ್ರ ಸಾಧ್ಯವಲ್ಲವೇ? ಎಂದು ಪ್ರಶ್ನಿಸುತ್ತಾರೆ. ಇಲ್ಲಿ ಹಣ್ಣು ಸಾಕಾರ ರೂಪವಾದ ಇಷ್ಟಲಿಂಗವಾದರೆ ಅದರ ಸವಿ ನಿರಾಕಾರವಾದ ಒಳಗಿನ ಅರಿವು, ದೇವರನ್ನು ಅಂದರೆ ಲಿಂಗಭಾವವನ್ನನುಭವಿಸುವುದರ ಪ್ರತೀಕವಾಗಿದೆ. ಹೀಗೆ ಅಂಗದೊಳಗಿನ ಲಿಂಗತತ್ವ ಅರಿಯಲು ಇಷ್ಟಲಿಂಗವೆಂಬುದು ಹಣ್ಣು, ಒಳಗಿನ ಅರಿವು, ಜೀವಾತ್ಮ, ದೇವ, ಲಿಂಗತತ್ವವೆಲ್ಲ ಆ ಹಣ್ಣಿನ ಸವಿ ಇದ್ದಂತೆ ಎಂದು ಇಷ್ಟಲಿಂಗದ ಮಹತ್ವವನ್ನು ನಿರೂಪಿಸಿದವರು. ಇಷ್ಟಲಿಂಗ ಬೇಡ ಭಾವಲಿಂಗವೇ ಸಾಕು ಎಂಬುದು ನಿನ್ನ ಭ್ರಮೆಯಾಗಿದೆ, ನಿರಾಕಾರವಾದ ದೇವರನ್ನು ಅನುಭಾವಿಸಲು ಸಾಕಾರವಾದ ಇಷ್ಟಲಿಂಗವೆಂಬ ಕುರುಹು ಅವಶ್ಯವೆನ್ನುತ್ತಾರೆ. ಹೀಗೆ ಮಾಚಯ್ಯನವರು ಪ್ರತಿಪಾದಿಸಿದ ಇಷ್ಟಲಿಂಗದ ಅವಶ್ಯಕತೆಯ ಕುರಿತ ಈ ಪ್ರಸಂಗ ಬಹಳ ಮಹತ್ವವನ್ನು ಪಡೆದುಕೊಳ್ಳುತ್ತದೆ.

"ಮಧುರ ಗುಣವ ಇರುವೆ ಬಲ್ಲದು, ವಾಯುಗುಣವ ಸರ್ಪ ಬಲ್ಲದು, ಗೋತ್ರದ ಗುಣವ ಕಾಗೆ ಬಲ್ಲದು, ಇದು ಕಾರಣ ಮನುಷ್ಯ ಜನ್ಮದಲ್ಲಿ ಬಂದು ಶಿವಜ್ಞಾನವನರಿಯದಿರ್ದಡೆ ಆ ಕಾಗೆ–ಕೋಳಿಗಳಿಗಿಂತ ಕರಕಷ್ಟ ಕಾಣಾ ಕಲಿದೇವರದೇವ" ಎಂಬ ಮತ್ತೊಂದು ವಚನದ ಮೂಲಕ ನಮ್ಮೊಳಗಿನ ಶಿವಜ್ಞಾನದ ಅರಿವನ್ನು ಪಡೆಯುವುದು ಇಷ್ಟಲಿಂಗ ಧರಿಸಿಕೊಂಡಿರುವವರ ಹೊಣೆಗಾರಿಕೆಯಾಗಿದೆ ಎನ್ನುತ್ತಾರೆ. ಹಾಗಾಗದಿದ್ದರೆ ಸಿಹಿ ಗುಣವನ್ನು ತಿಳಿದುಕೊಂಡ ಇರುವೆಗಿಂತ, ಗಾಳಿಯ ಗುಣವನ್ನರಿತ ಹಾವಿಗಿಂತ, ಗೋತ್ರದ ಗುಣದ ಅರಿವಿರುವ ಕಾಗೆ ಪಶು ಪಕ್ಷಿಗಳಿಗಿಂತ ಮನುಷ್ಯ ಕಡೆಯಾಗುತ್ತಾನೆ ಎಂದು ಛೇಡಿಸುತ್ತಾರೆ. ಏಕೆಂದರೆ ಜೀವ, ಜೀವಾತ್ಮ, ಪರಮಾತ್ಮ, ದೇವ, ದೇವರುಗಳೆಂಬ ಶಿವಜ್ಞಾನದ ಅರಿವಿರುವ ಮನುಷ್ಯನೇ ಈ ಅರಿವನ್ನು ಅರಿಯದಿದ್ದರೆ ಪಶು–ಪಕ್ಷಿಗಿಂತಲೂ ಆತ ಕೀಳು ಎಂಬುದು ಮಾಚಯ್ಯನವರ ಮನದಾತಂಕ.

"ಎತೆತ್ತ ನೋಡಿದಡೆ ಅತ್ತತ್ತ ಬಸವನೆಂಬ ಬಳ್ಳಿ, ಎತ್ತಿ ನೋಡಿದಡೆ ಲಿಂಗವೆಂಬ ಗೊಂಚಲು, ಒತ್ತಿ ಹಿಂಡಿದರೆ ಭಕ್ತಿಯೆಂಬ ರಸವಯ್ಯ..... ಬಸವಾ ಬಸವಾ ಎಂದು ಮಜ್ಜನಕ್ಕೆರೆಯದವನ ಭಕ್ತಿ ಶೂನ್ಯ ಕಾಣಾ ಕಲಿದೇವರದೇವ" ಎಂದು ಬಸವಣ್ಣನವರ ಕುರಿತಾಗಿಯೇ ರಚಿಸಿದ ಈ

ವಚನದಲ್ಲಿ ಬಸವಣ್ಣನವರ ಶರಣ ಸಂಕುಲದ ಮಹತ್ವದ ಕುರಿತು ಬಿಂಬಿಸಿದ್ದಾರೆ. ಬಸವನೆಂಬುದೇ ಬಳ್ಳಿಯಾಗಿ ಆ ಬಳ್ಳಿಯನ್ನು ಎತ್ತಿ ನೋಡಿದರೆ ಅಲ್ಲೆಲ್ಲ ಲಿಂಗಗಳಿರುವ ಗೊಂಚಲು, ಅವನ್ನು ಒತ್ತಿ ಹಿಡಿದರೆ ಭಕ್ತಿಯೆಂಬ ರಸ...ಇಂಥ ಲಿಂಗಕ್ಕೆ ಬಸವಾ ಬಸವಾ ಎಂದು ಮಜ್ಜನಕ್ಕೆರೆಯದವರಲ್ಲಿ ಭಕ್ತಿಯೇ ಇರಲಾರದು ಎಂಬ ಸಂಕಟ ಒಂದೆಡೆಯಾದರೆ ಇಷ್ಟು ಸರಳವಾಗಿ ದೇವನನ್ನನುಭವಿಸುವುದನ್ನು ಪಾಲಿಸಬೇಕೆಂಬ ಹಂಬಲ ಮತ್ತು ಹಸಿವು ಇಲ್ಲಿ ಕಾಣಬಹುದು. ಇದೆಂಥ ಅದ್ಭುತವಾದ ಭಕ್ತಿಯ ಪರಿಕಲ್ಪನೆಯಲ್ಲವೇ? ಹೀಗೆ ಮಾಚಯ್ಯನವರು ಬಹಳ ಗಂಭೀರವಾದ ಮತ್ತು ಆಕ್ರೋಶಭರಿತವಾದ ವಚನಗಳ ಜೊತೆಗೆ ಈ ಬಗೆಯ ಬೆಡಗಿನ ವಚನಗಳ ಮೂಲಕ ಭಕ್ತಿಯಲ್ಲಿ ದೇವನ ಕಾಣುವ ಬಗೆಯನ್ನು ಬಿಂಬಿಸಿದ್ದು ಇಲ್ಲಿ ಕಾಣಬಹುದು.

"ಉಡಿಯ ಲಿಂಗವ ಬಿಟ್ಟು, ಗುಡಿಯ ಲಿಂಗಕ್ಕೆ ಶರಣೆಂಬ, ಮತಿಭ್ರಷ್ಟರನೇಂಬೆನಯ್ಯ ಕಲಿದೇವರದೇವ" ಎಂದು ವಚಿಸುವಲ್ಲಿ ಇಷ್ಟಲಿಂಗದ ಅರಿವಿಲ್ಲದವರು ಬೆಟ್ಟದ/ಗುಡಿಯ ಲಿಂಗಕ್ಕೆರಗುವುದು ಸಹಜ. ಆದರೆ ಇಷ್ಟಲಿಂಗಧಾರಿಯಾಗಿದ್ದು ಇಷ್ಟಲಿಂಗದ ಮಹತ್ವವನ್ನರಿತುಕೊಂಡವರೂ ಸಹ ಗುಡಿಯ ಲಿಂಗಕ್ಕೆ ಮತ್ತು ಬೆಟ್ಟದ ಲಿಂಗಕ್ಕೆ ಮತ್ತೇ ಮತ್ತೇ ಶರಣೆಂದು ನಮಿಸುವವರಿಗೆ ಮತಿಭ್ರಷ್ಟರೆಂದು ಕೋಪದಿಂದ ಜರಿಯುತ್ತಾರೆ. ತನ್ನ ಇಷ್ಟಲಿಂಗದೊಳಗೆ ಅವಿತಿರುವ ಮಹಾದೇವನನ್ನು ಸುಲಭವಾಗಿ ಅರಿಯುವ ಬದಲು ಮತ್ತೇಕೆ ಈ ಜನ ದೇವನನ್ನು ಹೊರಗಡೆ ಹುಡುಕುತ್ತಾರೆಂಬ ಆತಂಕ, ಸಂಕಟ ಇಲ್ಲಿ ಮಾಚಯ್ಯನನ್ನು ಕಾಡುತ್ತದೆ. ಶುದ್ಧವಾದ ಮಡಿಮಾಡಿದ ಬಟ್ಟೆಗಳು ಮತ್ತು ಶರೀರ ಭೌತಿಕವಾಗಿ ಶುದ್ಧಗೊಳಿಸಿದರೆ ಇಷ್ಟಲಿಂಗಕ್ಕೆ ಭೌತಿಕ ಅಂಗದ ಜೊತೆ ಅಂಗದೊಳಗಿನ ಲಿಂಗವನ್ನು ಮಡಿ ಮಾಡುವ ಶಕ್ತಿ ಇದೆಯೆಂಬುದು ಮಾಚಯ್ಯನ ಭರವಸೆ. ಪ್ರತಿಯೊಬ್ಬರೂ ತಮ್ಮಂಗದೊಳಗೇ ಇಷ್ಟಲಿಂಗದ ನಿರಾಕಾರ ಶಿವನನ್ನು ಕಾಣಬೇಕೆಂಬುದು ಅವರ ಆಶಯ.

ಇಂಥ ಮಾಚಯ್ಯನವರು ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಬಸವಣ್ಣನ ವ್ಯಕ್ತಿತ್ವದ ಕುರಿತು ಒಂದು ವಿಶಿಷ್ಟವಾದ ವಚನ ಅನುಭಾವಿಸಿದ್ದಾರೆ, ಅದು ಹೀಗಿದೆ.

**ಉಟ್ಟ ಸೀರೆಯ ಹರಿದು ಹೋದಾತ ನೀನಲಾ ಬಸವಣ್ಣ, ಮೆಟ್ಟಿದ ಕೆರಹ ಕಳೆದು ಹೋದಾತ ನೀನಲಾ ಬಸವಣ್ಣ, ಕಟ್ಟಿದ ಮುಡಿ ಬಿಟ್ಟು ಹೋದಾತ ನೀನಲಾ ಬಸವಣ್ಣ, ಸೀಮೆಯ ಸಂಬಂಧವ ತಪ್ಪಿಸಿ ಹೋದಾತ ನೀನಲಾ ಬಸವಣ್ಣ, ಲಿಂಗಕ್ಕೆ ಮಾಡಿದೆಂದ ಸೋಂಕದೆ ಹೋದೆಯಲ್ಲ ಬಸವಣ್ಣ, ಜಂಗಮಕ್ಕೆ ಮಾಡಿದ ಮಾಟವ ಕೈಯಲ್ಲಿ ಹಿಡಿದುಕೊಂಡು ಹೋದೆಯಲ್ಲ ಬಸವಣ್ಣ, ಬೆಳಗನುಟ್ಟು ಬಯಲಾಗಿ ಹೋದೆಯಲ್ಲ ಬಸವಣ್ಣ, ಆ ಬಸವಣ್ಣಂಗೆ ಶರಣೆಂಬ ಪಥವನೇ ತೋರು ಕಂಡಾ ಕಲಿದೇವರದೇವ.**

ಶೀಲವಂತ ಮತ್ತು ಲಾವಣ್ಯರು ಲಿಂಗಧಾರಿಗಳಾಗಿ ಜಾತಿಯನ್ನು ಮೀರಿದ್ದರೂ ಅವರನ್ನು ಲಿಂಗವಂತ ಅಥವಾ ಲಿಂಗಾಯತರೆಂದು ಪರಿಗಣಿಸದೇ ಅದೊಂದು ಅಂತರ್‌ಜಾತಿ ಮದುವೆ ಎಂದು ಬಿಂಬಿಸಿ, ಈ ಕಾರಣಕ್ಕಾಗಿ ಕಲ್ಯಾಣ ಕ್ರಾಂತಿಯಾದಾಗ ಪ್ರಧಾನಿಯಾಗಿದ್ದ ಬಸವಣ್ಣ ಪ್ರಧಾನಿ ಪದವಿ ತ್ಯಾಗ ಮಾಡಿ ಪೋಷಾಕು ಹರಿದು, ಪಾದರಕ್ಷೆ ಕಳೆದು, ಕಿರೀಟ ಕಳಚಿಟ್ಟು ರಾಜಧಾನಿ ಬಿಟ್ಟು ಸರಳವಾಗಿ ನಿರ್ವಿಕಾರ ಭಾವದಲ್ಲಿ ಹೋದಾಗಿನ ಪ್ರಸಂಗವಿಲ್ಲಿ ಮಾಚಯ್ಯ ಬಹಳ ನೋವಿನಿಂದ ಬಿಂಬಿಸಿದ್ದಾರೆ. ಇಷ್ಟಲಿಂಗ, ಜಂಗಮತತ್ವ ಮತ್ತು ಸಾಮಾಜಿಕ ಕ್ರಾಂತಿಯನ್ನು ಹಿಡಿದುಕೊಂಡೇ ಹೋದ ಬಸವಣ್ಣನಿಗೆ ಯುದ್ಧವೆಂಬ ರಕ್ತಕ್ರಾಂತಿ ಬೇಕಾಗಿರಲಿಲ್ಲ. ಶರಣರು ಮರಣವೇ ಮಹಾನವಮಿ ಎಂದರಿತಿದ್ದರು. ಆದರೆ ವಚನಗಳನ್ನು ಉಳಿಸಿಕೊಳ್ಳಬೇಕು ಅವುಗಳನ್ನು ಮುಂದಿನ ಜನಾಂಗಕ್ಕೆ ಕೊಡಬೇಕೆಂಬ ತವಕ ಇತ್ತು. ಆ ಕಾರಣಕ್ಕಾಗಿ ಸ್ವತಃ ಬಸವಣ್ಣನವರೇ ಬೆಳಗನುಟ್ಟು ಬಯಲಾಗಿ ಹೋಗಿ ಕೂಡಲಸಂಗಮದಲ್ಲಿ ಬಯಲಾದರು. ಶರಣರೆಲ್ಲ ಅಳಿದರೂ ಸಮಸಮಾಜ ನಿರ್ಮಾಣವಾಗದುದ್ದಕ್ಕೆ ಚಿಂತಿತರಾಗದ ಬಸವಣ್ಣ ಮುಂದೊಂದು ದಿನ ತಮ್ಮೀ ಕನಸು ನನಸಾಗುತ್ತದೆ ಎಂದುಕೊಂಡರು. ಇಂಥ ಬಸವಣ್ಣನವರ ಸಮಸಮಾಜದೆಡೆ ಸಾಗುವಂಥ ದಾರಿಯನ್ನು ನನಗೆ ತೋರಿಸೆನ್ನುತ್ತಾರೆ. ಇದು ಮಾಚಯ್ಯ ತಮಗೆ ತಾವು ಹೇಳಿಕೊಂಡಂತೆನಿಸಿದರೂ ಬಸವ ತತ್ವದಲ್ಲಿ, ವಚನ ಸಂಸ್ಕೃತಿಯಲ್ಲಿ ನಂಬಿಕೆ ಇಟ್ಟುಕೊಂಡವರೆಲ್ಲರ ಹೊಣೆಯಾಗಿದೆ.

ವಿವಿಧ ಶರಣರು ತಮ್ಮದೇ ರೀತಿಯಲ್ಲಿ ಮಾಚಯ್ಯನ ಕುರಿತು ಅಭಿವ್ಯಕ್ತಿಸಿದ್ದಾರೆ. ಅಲ್ಲಮರು "ಗುಹೇಶ್ವರ ಲಿಂಗದಲ್ಲಿ ಬಸವಣ್ಣನ ಕೃಪೆಯಿಂದ ನಿನ್ನ ಕಂಡೆ ಮಡಿವಾಳ ಮಾಚಯ್ಯ" ಎನ್ನುವಲ್ಲಿ ಅವರ ಅಂತರಂಗದ ದೈವವಾದ ಗುಹೇಶ್ವರ ಲಿಂಗದಲ್ಲಿ ಮಾಚಯ್ಯನವರನ್ನು ತಾವು ಕಂಡ ಬಗೆ ಮತ್ತು ಇದಕ್ಕೆ ಬಸವಣ್ಣನ ಕೃಪೆಯೇ ಕಾರಣ ಎಂಬ ವಿನೀತ ಭಾವದಲ್ಲಿ ನುಡಿದಿರುವುದನ್ನು ಗಮನಿಸಬೇಕು. ಜೊತೆಗೆ ಅಲ್ಲಮರು ಮಾಚಯ್ಯನನ್ನು ಅತ್ಯಂತ ಮಹತ್ವದ ಸ್ಥಾನದಲ್ಲಿ ಕಂಡುಕೊಂಡಿರುವುದಾಗಿ ತಿಳಿಯುತ್ತದೆ. ಅಕ್ಕಮಹಾದೇವಿಯಂತೂ "ಬಸವಣ್ಣನೇ ಗುರು, ಪ್ರಭುದೇವರೇ ಲಿಂಗ, ಸಿದ್ಧರಾಮನೇ ಜಂಗಮ, ಮಡಿವಾಳಯ್ಯ ಎನ್ನ ಎತ್ತ ತಂದೆ" ಎಂದು

ಮಾಚಯ್ಯನ ಮಗಳು ತಾನೆಂದು ಹೇಳುತ್ತಾಳೆ. ಇಲ್ಲಿ ಮಾಚಯ್ಯನವರು ಅತ್ಯುನ್ನತ ಮಟ್ಟದಲ್ಲಿಯ ಅಕ್ಕನಿಗೇ ತಂದೆಯ ಸ್ಥಾನದಲ್ಲಿರುವುದನ್ನು ಗಮನಿಸಬಹುದು. ಚೆನ್ನಬಸವಣ್ಣ "ಎನ್ನಂತರಂಗವೇ ಬಸವಣ್ಣ, ಬಹಿರಂಗವೇ ಮಡಿವಾಳ, ಇವರಿಬ್ಬರ ಪ್ರಸಾದ ಸಾಹಿತ್ಯ ನಾನೇ ಕೂಡಲ ಚೆನ್ನಸಂಗಮದೇವ" ಎಂದು ಚೆನ್ನಬಸವಣ್ಣ ತನ್ನ ಅಂತರಂಗದಲ್ಲಿ ಬಸವಣ್ಣನನ್ನು ಬಹಿರಂಗದಲ್ಲಿ ಮಡಿವಾಳ ಮಾಚಯ್ಯನವರನ್ನು ಪ್ರತಿಷ್ಠಾಪಿಸಿಕೊಂಡು ಆ ಮೂಲಕ ತಾವು ಪಡೆದ ಅರಿವನ್ನು ಪ್ರಸಾದವಾಗಿಸಿಕೊಂಡು ತಾವು ಮತ್ತು ತಮ್ಮ ಅರಿವನ್ನು ಜಂಗಮವಾಗಿಸಿಕೊಳ್ಳುವ ಮೂಲಕ ತಾವು ಪ್ರಸಾದ ಸಾಹಿತ್ಯವಾಗಿರುವದನ್ನು ಮಾರ್ಮಿಕವಾಗಿಲ್ಲಿ ಬಿಂಬಿಸುತ್ತಾರೆ.

ಮಡಿವಾಳ ಮಾಚಯ್ಯನವರು ಶರಣರ ಬಟ್ಟೆಗಳನ್ನು ಮಡಿಮಾಡುವುದರ ಜೊತೆಗೆ ಮಲಿನವಾದ ವ್ಯವಸ್ಥೆಯ ಕೊಳೆಯನ್ನು ತೊಳೆದು ಮಡಿ ಮಾಡುವ ಮನಸ್ಥಿತಿಯಿಂದ ರಚಿಸಿದ ವಚನಗಳು ಮತ್ತವರ ಧೋರಣೆಗಳು ಸಾರ್ವಕಾಲಿಕವಾಗಿ ಚಲನಶೀಲವಾಗಿರಬೇಕೆಂದು ಬಯಸಿದ್ದವರು. ಹಾಗಾಗಿ ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ವಚನಗಳ ರಕ್ಷಣೆಗಾಗಿ ಉಳವಿಯತ್ತ ಪ್ರಯಾಣಿಸುವ ಶರಣರಲ್ಲಿ ತಾವು ಸೇರಿಕೊಂಡು ಶರಣರನ್ನು ಮತ್ತವರ ವಚನಗಳನ್ನು ರಕ್ಷಿಸುವ ಪವಿತ್ರವಾದ ಹೊಣೆ ಹೊತ್ತುಕೊಳ್ಳುತ್ತಾರೆ. ಅಲ್ಲಿ ಪ್ರತಿ ಹಂತದಲ್ಲಿ ಸಾಹಸವನ್ನು ಮೆರೆದರು. ಅದೊಂದು ಬಗೆಯ ಪ್ರಗತಿಯ ಕ್ರಾಂತಿ, ಪರಿವರ್ತನೆ ಬಯಸಿ ಹೋರಾಡುವಾಗ ಶರಣರೆಲ್ಲರೂ ಮರಣವೇ ಮಹಾನವಮಿ ಎಂದು ಲಿಂಗೈಕ್ಯರಾದ ನಂತರ ಇವರು ಏಕಾಂಗಿಯಾಗಿಯೂ ಹೋರಾಡಿದರು. ಕ್ರಾಂತಿಯ ಮೂಲಕ ಪ್ರಗತಿಪರತೆಯನ್ನು ಕಾಣಬೇಕೆಂಬ ಹಸಿವನ್ನಿರಿಸಿಕೊಂಡ ಒಡಲುಗೊಂಡವರಳಲಿಗೆ ಇವರ ವಚನಗಳ ಧೋರಣೆಯಲ್ಲಿ ಉತ್ತಮ ತುತ್ತು ಸಿಗಬಲ್ಲದು. ಈ ಬಗೆಯ ಒಡಲುಗೊಂಡವರಳಲಿಗೆ ಸಾಂತ್ವನ ಸಿಗಬಹುದು. ಮಾಚಯ್ಯ ಶರಣರು ಕೊನೆಗೆ ಇಂದಿನ ಸಿಂಧಗಿ ತಾಲ್ಲೂಕಿನ ಕಲಿಪುರ ಅಥವಾ ಕಲಕೇರಿ ಎಂಬ ಊರಲ್ಲಿ ಹೊಸ್ತಿಲ ಹುಣ್ಣಿಮೆ ಮೂಲಾ ನಕ್ಷತ್ರದ ದಿವಸ ತಮ್ಮ ಗುರುವಿನೊಂದಿಗೆ ಜೀವಂತ ಸಮಾಧಿಯಾಗುತ್ತಾರೆಂದು ನಂಬಲಾಗಿದೆ. ಇನ್ನೊಂದು ಪ್ರತೀತಿಯ ಪ್ರಕಾರ ಅವರು ಬೆಳಗಾವಿ ಜಿಲ್ಲೆಯ ಗೊಡಚಿ ಹತ್ತಿರ ಲಿಂಗೈಕ್ಯರಾದ ಕಾರಣ ಅಲ್ಲಿ ಇವರ ಸಮಾಧಿ ಇರುವುದಾಗಿಯೂ ಐತಿಹ್ಯವಿದೆ. ಈ ವಿವರಗಳನ್ನೆಲ್ಲ ಸಂಶೋಧಕರ ಶೋಧಕ್ಕೆ ಬಿಡೋಣ.

ಇಂದಿಗೂ ಬಸವಕಲ್ಯಾಣದ ತ್ರಿಪುರಾಂತಕ ಕೆರೆಯಿಂದ ಸ್ವಲ್ಪ ದೂರದಲ್ಲಿ ಪಶ್ಚಿಮ ದಿಕ್ಕಿನಲ್ಲಿ ಮಡಿವಾಳ ಮಾಚಯ್ಯನ ಹೊಂಡವಿದೆ. ಒಂದು ಗುಡಿಯಿದೆ ಅಲ್ಲಿ ಜೋಡಿ ಶಿವಲಿಂಗ ಕಾಣಸಿಗುತ್ತವೆ. ಭಕ್ತಿಯೆಂಬ ಮಡಿಯಿಂದ ದರ್ಶನ ಪಡೆಯುವ ಪದ್ಧತಿ ಇದೆ. ಮತ್ತೇ ಇಲ್ಲಿ ಮಾನಸಿಕ ಮಡಿತನವನ್ನು ಸಾಂಕೇತಿಕವಾಗಿ ಬಿಂಬಿಸುತ್ತದೆ. ಹಾಗೆಯೇ ಸಿಂಧಗಿ ತಾಲ್ಲೂಕಿನ ಡೋಣಿ ಕೊಂಡಗುಳಿಯಲ್ಲಿ ಮಡಿವಾಳ ಮಾಚಯ್ಯನ ಗುಡಿ ಇದೆ. ದೇವರ ಹಿಪ್ಪರಗಿಯಲ್ಲಿ ಗುಡಿಯೊಂದಿದೆ. ಇವರು ವಾಸಿಸಿದ್ದರೆಂದು ನಂಬಲಾದ ಮನೆಯೊಂದಿದೆ. ಅಲ್ಲಿ ಕಲ್ಮೇಶ್ವರ (ಕಲ್ಲಿನಾಥ) ಗುಡಿಯ ಹತ್ತಿರವಿರುವ ಇವರ ಮನೆಯಲ್ಲಿ ಇವರು ಬಳಸುತ್ತಿದ್ದ ಖಡ್ಗವನ್ನೂ ನೋಡಬಹುದು. ಈಗ ಈ ಮನೆ ಮಠವಾಗಿದೆ. ಸಿಂಧಗಿ ತಾಲ್ಲೂಕಿನ ಕೊಕಟನೂರಲ್ಲಿಯೂ ಒಂದು ಗುಡಿ ಇದೆ. ಈ ಭಾಗದಲ್ಲೆಲ್ಲ ಮಾಚಯ್ಯನವರು ಆರಾಧ್ಯ ದೈವವಾಗಿದ್ದಾರೆ. ಹೀಗೆ ಭೌತಿಕವಾಗಿ ಅವರನ್ನು ನೆನಪಿಸುವಂಥ ಸ್ಮಾರಕಗಳ ಜೊತೆಗೆ, ಅಂಗವಳಿದಿದ್ದರೂ ಅವರ ಅಂಗದೊಳಗಿನ ಲಿಂಗ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ. ಪ್ರಗತಿಪರ, ಆತ್ಮಶುದ್ಧತೆ, ಶುಚಿತ್ವ, ಅಂತರಂಗ ಮತ್ತು ಬಹಿರಂಗ ಶುದ್ಧತೆ, ಅನ್ಯಾಯದ ಅಸಮಾನತೆ ವಿರುದ್ಧದ ಹೋರಾಟದ ಮೂಲಕ ಮನಸ್ಸಿನ ಶುದ್ಧತೆ ಮಾಡಿದವರು, ಹೀಗೆ ಮಾಡಬೇಕೆಂಬುದು ಅವರ ಒಡಲಾಳದ ಹಸಿವಾಗಿತ್ತು. ಇಂಥ ಅಪ್ರತಿಮ ಮಾಚಯ್ಯ. ಮತ್ತವರ ಆ ವಿಚಾರಗಳ ಧೋರಣೆಯಲ್ಲಿ ನಾವು ಬೆಳಕನ್ನು ಕಂಡುಕೊಂಡರೆ ಪರಮಾತ್ಮನಲ್ಲಿ ಲಿಂಗೈಕ್ಯವಾದ ಅವರ ಲಿಂಗದಲ್ಲಿದ್ದ ಜೀವಾತ್ಮ ಮೆಚ್ಚಿ ಹೌದೌದೆನ್ನಬಹುದೇನೋ? ಇಂದಿನ ಮಲೀನವಾದ ಅವ್ಯವಸ್ಥೆಗೆ, ಅವ್ಯವಸ್ಥೆಯೊಳಗಿನ ಮಲಿನ ಮನಸ್ಸಿನ ಮಡಿತನಕ್ಕೆ ಬೇಕು ಮಾಚಯ್ಯನ ಮಡಿವಾಳತನ. ವಿವಿಧ ಬಗೆಯ ಹಸಿವಿನ ಒಡಲುಗೊಂಡವರಳಲಿಗೆ ಬೇಕು ಇಂಥ ಶರಣ ಸಾಧಕರ ಚಿಂತನೆ ಮತ್ತು ಧೋರಣೆಗಳೆಂಬ ಅನ್ನದ ತುತ್ತು.

■■

# ಪ್ರಾಪಂಚಿಕ ಬದುಕಿನಲ್ಲಿ ಪಾರಮಾರ್ಥಿಕ ಸಾಧನೆಗೈದ ಮೋಳಿಗೆ ಮಹಾದೇವಿ

• ಶ್ರೀಧರ ಗೌಡರ

ಜನರಾಡುವ ಭಾಷೆಯಲ್ಲಿಯೇ ಜನರಿಗೆ ಧರ್ಮ ಬೋಧಿಸಿ ಸಂಸ್ಕಾರ ನೀಡಿ, ಸುಸಂಸ್ಕೃತರನ್ನಾಗಿ ಮಾಡಿದ ಬಸವಣ್ಣನವರು ಹಿಂದುಳಿದವರಿಗೆ, ಅಸ್ಪೃಶ್ಯರಿಗೆ ಅರಿವು ಮೂಡಿಸುವ ಮೂಲಕ ಸಮಾನತೆ ತರಲು ಪ್ರಯತ್ನಿಸಿದರು. ಅಕ್ಷರ ಸಂಸ್ಕೃತಿಯಿಂದ ವಂಚಿತರಾದ ಬಹುಸಂಖ್ಯಾತ ಕೆಳವರ್ಗದವರಿಗೆ ಅಕ್ಷರ ಜ್ಞಾನವನ್ನು ಭಕ್ತಿ ಮಾರ್ಗದ ಮೂಲಕ ಕಲ್ಪಿಸಿ ಸ್ತ್ರೀಯರಿಗೂ ಸಮಾನತೆ, ಪೂಜಾರ್ಹತೆ ಇದೆ ಎಂದು ಜಗತ್ತಿಗೆ ತೋರಿಸಿದರು.

ಬಸವಣ್ಣನ ಕಾಯಕ, ದಾಸೋಹ ಸಿದ್ಧಾಂತ ಹಾಗೂ ಸಮಾಜೋಧಾರ್ಮಿಕ ಚಳುವಳಿಯ ಪರಿಣಾಮವಾಗಿ ಕಲ್ಯಾಣನಾಡಿನ ಕೀರ್ತಿ ದೇಶ ವಿದೇಶಗಳಲ್ಲಿ ಹರಡಿ ದೇಶದ ಎಲ್ಲ ಮೂಲೆಗಳಿಂದ ಚಿಂತಕರು, ಅನುಭಾವಿಗಳು ದೈವೀ ರಾಜ್ಯವಾದ ಕಲ್ಯಾಣದತ್ತ ಬಂದರು.

ಆಂಧ್ರದಿಂದ ತೆಲುಗು ಮಸಣೇಶ, ಕಾಶ್ಮೀರದಿಂದ ಬೊಂತಾದೇವಿ, ಮಹಾರಾಷ್ಟ್ರದಿಂದ ಉರಿಲಿಂಗ ಪೆದ್ದಿ ಹಾಗೂ ಕಾಶ್ಮೀರದ ಅರಸ ಮಹಾದೇವ ಭೂಪಾಲ ಹಾಗೂ ಅವನ ರಾಣಿ ಮಹಾದೇವಿ ಕಲ್ಯಾಣಕ್ಕೆ ಆಗಮಿಸಿದ್ದರು.

ಮೋಳಿಗೆ ಮಾರಯ್ಯ ಕಾಶ್ಮೀರದ ಮಹಾರಾಜನಾಗಿದ್ದ. ಮೂಲ ಹೆಸರು ಮಹಾದೇವ ಭೂಪಾಲ ಇವನ ಪತ್ನಿ ಗಂಗಾದೇವಿ. ಬಸವಣ್ಣನವರು ಕಾಶ್ಮೀರಕ್ಕೆ ಹೋದಾಗ ಅವರ ದರ್ಶನದಿಂದ ಪುನೀತರಾದ ಎರಡು ಸಾವಿರ ಜನರು ಶರಣರಾಗಿ ಕಲ್ಯಾಣಕ್ಕೆ ಆಗಮಿಸುತ್ತಾರೆ. ಅದನ್ನು ತಿಳಿದ ಮಹಾದೇವ ಭೂಪಾಲ ಕಲ್ಯಾಣದ ಬಗ್ಗೆ ತಿಳಿಯಲು ತನ್ನ ಆಪ್ತ ಸೈನಿಕನಾದ ಚೂರಿ ಚಿಕ್ಕಣ್ಣ ಎಂಬ ವ್ಯಕ್ತಿಯನ್ನು ಕಳುಹಿಸುತ್ತಾನೆ. ಕಲ್ಯಾಣದ ವಾತಾವರಣ ತಿಳಿಯಲು ಬಂದ ಚೂರಿ ಚಿಕ್ಕಣ್ಣ ಕೂಡಾ ಶರಣನಾಗಿ ಕಲ್ಯಾಣದಲ್ಲಿಯೇ ಉಳಿದುಬಿಡುತ್ತಾನೆ.

ನಿತ್ಯ ಆರು ಸಾವಿರ ಜಂಗಮರಿಗೆ ದಾಸೋಹ ಮಾಡುತ್ತಿದ್ದ ಕಾಶ್ಮೀರ ರಾಜ ಮಹಾದೇವ ಭೂಪಾಲ, ರಾಣಿ ಗಂಗಾದೇವಿ ಪಾರಮಾರ್ಥಿಕ ಚಿಂತನ ಮಂಥನಕ್ಕೆ ಅಣಿಯಾಗಲು ಕಾಶ್ಮೀರದಿಂದ ಬರಿಗಾಲಿನಿಂದ ಕಾಡು ದಾರಿಯಲ್ಲಿ ಕಲ್ಯಾಣಕ್ಕೆ ನಡೆದು ಬಂದರು.

ಕಾಡಿನಲ್ಲಿ ಬರುವಾಗ ಮುಂದೆ ಮುಂದೆ ಮಹಾದೇವ ಭೂಪಾಲ, ಹಿಂದೆ ರಾಣಿ ಮಹಾದೇವಿ. ದಾರಿಯಲ್ಲಿ ಬಂಗಾರದ ಓಲೆಯೊಂದು ಕಂಡು, ಭೂಪಾಲ ಅದರ ಮೇಲೆ ಮಣ್ಣು ಸರಿಸಿ ಮುಂದೆ ಬಂದನು. ರಾಣಿ ಮಹಾದೇವಿ ಅವನನ್ನು ಹಿಂಬಾಲಿಸಿದಳು. ದೂರ ದಾರಿ ಕ್ರಮಿಸಿದ ನಂತರ ಮಹಾದೇವ ಭೂಪಾಲ ರಾಣಿ ದಾರಿಯಲ್ಲಿ ಬಂಗಾರದ ಓಲೆಯೊಂದಿತ್ತು, ನಿನ್ನ ಚಿತ್ತ ಬೀಳಬಾರದೆಂದು ಅದರ ಮೇಲೆ ಮಣ್ಣು ಸರಿಸಿ ಬಂದೆನು ಎಂದು ಹೇಳಿದ್ದಕ್ಕೆ ಪ್ರತಿಯಾಗಿ ಮಹಾದೇವಿ ಹೊನ್ನು ಮಣ್ಣಿನಲ್ಲಿ ಮತ್ತೆ ಭಿನ್ನವುಂಟೆ ಭೂಪಾಲ ಎಂದು ಕೇಳುವ ಮೂಲಕ ತನ್ನ ಎತ್ತರದ ನಿಲುವನ್ನು ತೋರಿಸಿದ್ದಾಳೆ.

ಕಲ್ಯಾಣದ ಅನುಭವ ಮಂಟಪದಲ್ಲಿ ಸದಸ್ಯರಾಗಬೇಕಾದರೆ ಕಾಯಕವೆಂಬುದು ಕಡ್ಡಾಯ ನಿಯಮವಾಗಿತ್ತು. ಮಹಾದೇವ ಭೂಪಾಲ, ಮಹಾದೇವಿ ಅರಸೊತ್ತಿಗೆ ತೊರೆದು ಮೋಳಿಗೆ (ಕಟ್ಟಿಗೆ, ಉರುವಲು ತಂದು ಶರಣರಿಗೆ ಒದಗಿಸುವುದು)ಯನ್ನು ಕಾಯಕವನ್ನಾಗಿ ಎತ್ತಿಕೊಂಡು, ದೀಕ್ಷೆ ಪಡೆದು ಮಹಾದೇವ ಭೂಪಾಲ ಮಾರಯ್ಯನಾಗಿ, ಗಂಗಾದೇವಿ ಮಹಾದೇವಿಯಾಗಿ ಪರಿವರ್ತನೆಹೊಂದಿ ಕಟ್ಟಿಗೆಕಡಿದು ಮಾರುವ ಕಾಯಕವನ್ನು ಮಾಡುತ್ತಾರೆ.

ವಚನಕಾರ್ತಿಯಾಗಿ, ಅನುಭಾವಿಯಾಗಿ, ಸಂಸಾರಿಯಾಗಿ ಪ್ರಾಪಂಚಿಕ ಬದುಕಿನಲ್ಲಿಯೇ ಪಾರಮಾರ್ಥಿಕ ಸಾಧನೆಯನ್ನು ಸಾಧಿಸಿದ ಅಪ್ರತಿಮ ಶರಣೆ ಮಹಾದೇವಮ್ಮ

ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಕೂಡಲಸಂಗಮ-೫೮೭೧೧೫ ತಾ.ಹುನಗುಂದ ಜಿ.ಬಾಗಲಕೋಟ ಮೊ-೯೪೪೮೦೨೨೬೩೮೨

"ಎನ್ನಯ್ಯ ಪ್ರಿಯ ಇಮ್ಮಡಿ ನಿಷ್ಕಳಂಕ ಮಲ್ಲಿಕಾರ್ಜುನ" ಎಂಬ ವಚನಾಂಕಿತದಲ್ಲಿ ವಚನ ರಚಿಸಿದ್ದು. ೭೦ ವಚನಗಳು ಲಭ್ಯವಾಗಿವೆ.

ವೈರಾಗಿನಿಯಾದ ಮಹಾದೇವಮ್ಮ ಸಂಸಾರದ ಜಂಜಡಕ್ಕೆ ಹೆದರಿದವಳಲ್ಲ. ವಚನ ಶೈಲಿ, ಅನುಭಾವ, ವೈಚಾರಿಕತೆಯಲ್ಲಿ ಅಕ್ಕಮಹಾದೇವಿಗೆ ಸಮವಾಗಿ ನಿಲ್ಲುವ ಮೌಲ್ಯ, ನಿಷ್ಠೆಯನ್ನು ಹೊಂದಿದ್ದಳು.

ಗೌರವಾಂಕನ ಮೋಳಿಗಯ್ಯ ಪುರಾಣ, ಬಸವ ಪುರಾಣ, ಭೈರವೇಶ್ವರ ಕಾವ್ಯ, ಶೂನ್ಯ ಸಂಪಾದನೆ, ಶಿವತತ್ವ ಚಿಂತಾಮಣಿ ಮುಂತಾದ ಕೃತಿಗಳು ಮಹಾದೇವಮ್ಮನ ಚರಿತ್ರೆಯ ಮೇಲೆ ಬೆಳಕು ಚಲ್ಲುತ್ತವೆ.

ಕ್ರಿಯೆ, ಜ್ಞಾನದ ಕುರಿತು : ಕ್ರಿಯೆ, ಜ್ಞಾನಗಳ ಸಮನ್ವಯಕ್ಕೆ ಒತ್ತುಕೊಟ್ಟವರು ಶರಣರು.ಕ್ರಿಯೆಯಿಲ್ಲದೆ ಜ್ಞಾನ ಅರ್ಥರಹಿತ ಎಂಬ ಮಾತನ್ನು ಮಹಾದೇವಮ್ಮ ವಚನದಲ್ಲಿ ಹೀಗೆ ವ್ಯಕ್ತಪಡಿಸಿದ್ದಾಳೆ.

**ಆವ ಬೀಜ ಬಿತ್ತಿದಡೂ**
**ಪೃಥ್ವಿಗೆ ಬೇರು, ಬಯಲಿಂಗೆ ಶಾಖೆ**
**ತಲೆದೋರಿ ಬೆಳೆವಂತೆ**
**ಐಕ್ಯಕ್ಕೆ ಮರೆ, ಕ್ರಿಯೆಗೆ ಬಾಹ್ಯ**
**ಉಭಯದ ಭೇದವುಳ್ಳನ್ನಕ್ಕ ಭಕ್ತಿ ಹೋರಾಟ ಬಿಡದು**
**ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ**
**ಮಣಿಯುಳ್ಳನ್ನಕ್ಕ ಪವಣಿಕೆಯ ಹಂಗು ಬಿಡದು.**

ಯಾವುದೇ ಪುಡಿ ಬೀಜವು ಭೂಮಿಯಲ್ಲಿ ಬೇರು ಬಿಟ್ಟು, ಬಯಲಿನಲ್ಲಿ ಸಸಿಯಾಗಿ, ಮರವಾಗಿ ಟೊಂಗೆ ಬಿಡುವುದು. ಜ್ಞಾನ ಅಂತರಂಗ. ಕ್ರಿಯೆ ಬಹಿರಂಗದ ಪ್ರಕ್ರಿಯೆ. ಇವೆರೆಡರ ಭೇದವ ಕಿತ್ತೊಗೆಯುವುದೇ ಭಕ್ತಿಯ ಹೋರಾಟವೆಂದಿದ್ದಾಳೆ. ತೋರಿಕೆ ಭಕ್ತರನ್ನು ವಿಡಂಬಿಸಿದ ಮಹಾದೇವಿ

**ಊರ್ವಶಿ ಕರ್ಪುರವ ತಿಂದು ಎಲ್ಲರಿಗೆ ಮುತ್ತಕೊಟ್ಟಡೆ ಮೆಚ್ಚುವರಲ್ಲದೆ ಹಂದಿ ಕರ್ಪುರವ ತಿಂದು ಎಲ್ಲರಿಗೆ ಮುತ್ತುಕೊಟ್ಟರೆ ಮೆಚ್ಚುವರೆ, ಹುಡುಹುಡು ಎಂದೆಟ್ಟುವರಲ್ಲದೆ? ನಡೆನುಡಿ ಶುದ್ಧವುಳ್ಳವರು ಪುರಾತನ ವಚನ ಓದಿದಡೆ ಅನುಭಾವವ ಮಾಡಿದಡೆ ಮೆಚ್ಚುವರಲ್ಲದೆ ನಡೆನುಡಿ ಸುದ್ಧವಿಲ್ಲದವರು ಪುರಾತನರ ವಚನ ಓದಿದಡೆ ಅನುಭಾವವ ಮಾಡಿದಡೆ ಮೆಚ್ಚುವರೆ? ನಡೆನುಡಿ ಶುದ್ಧವಿಲ್ಲದವರು ಪುರಾತನ ವಚನವ ಓದಿದಡೆ ಆ ಹಂದಿಗಿಂತ ಕರಕಷ್ಟ.**

ಬಾಹ್ಯಾಡಂಬರದ ವ್ರತಾಚಾರ ಕೈಕೊಂಡು, ಪುರಾತನರ ವಚನ ಪಠಣವನ್ನೆ ತಮ್ಮ ಹೊಟ್ಟೆಹೊರೆಯುವ ಸಾಧನವನ್ನಾಗಿ ಮಾಡಿಕೊಂಡ ಸ್ವಾರ್ಥಿಗಳನ್ನು ಕಟುವಾಗಿ ಟೀಕಿಸಿದ್ದಾಳೆ. ನಡೆನುಡಿ ಶುದ್ಧವಿಲ್ಲದವರು ಪುರಾತನರ ವಚನಗಳನ್ನು ಓದುವದಕ್ಕೂ ಅನರ್ಹರು. ಅವರು ಹಂದಿಗಿಂತ ಕನಿಷ್ಠರು ಎಂದು ಹೇಳಿ, ತೀಕ್ಷ್ಣವಿಡಂಬನೆಗೂ ತೊಡಗುತ್ತಾಳೆ. ನಿಜವಾದ ಭಕ್ತ, ನಡೆನುಡಿಯಲ್ಲಿ ಶುದ್ಧತೆಯನ್ನು ತಂದುಕೊಂಡು, ಅನುಭಾವನ್ನಾಚರಿಸಿ ಪುರಾತನರ ವಚನಗಳನ್ನು ವಾಚಿಸಿ, ತನ್ನರಿವಿನ ಗುಡಿಯನ್ನು ಪ್ರವೇಶಿಸುತ್ತಾಳೆಂಬ ಆಶಯವನ್ನು ಪ್ರಕಟಿಸುತ್ತಾಳೆ.

ಸರಳವಾದ ರೂಪಕಗಳನ್ನು ಬಳಸಿ, ಸಾಮಾನ್ಯರಿಗೂ ತಿಳಿಯುವಂತೆ ತನ್ನ ಅನುಭವಗಳನ್ನು ವಚನಗಳ ಮೂಲಕ ಅಭಿವ್ಯಕ್ತಪಡಿಸಿದ್ದಾಳೆ. ವಚನಗಳಲ್ಲಿ ದೃಷ್ಟಾಂತ, ಸಾದೃಶ್ಯ ಅಲಂಕಾರಗಳು ಬಳಕೆಯಾಗಿವೆ.

ಬಸವಣ್ಣ ಕಲ್ಯಾಣ ತೊರೆದ ನಂತರವೂ ಮೋಳಿಗೆ ಮಾರಯ್ಯ, ಮಾಹಾದೇವಿ ಕಲ್ಯಾಣದಲ್ಲಿಯೇ ಉಳಿದು ಮೋಳಿಗೆಕೇರಿ ಎಂಬಲ್ಲಿ ಐಕ್ಯರಾದರೆಂದು ತಿಳಿದು ಬರುತ್ತದೆ.

ಬಸವಣ್ಣನವರ ಕಲ್ಯಾಣವೆಂಬ ಶುಕ್ತಿಕೆಯಲ್ಲಿ ಮಹಾದೇವ ಭೂಪಾಲನೆಂಬ ಸ್ವಾತಿಕ ಜಲಬಿಂದು ಸೇರಿ ಮಾರಯ್ಯನೆಂಬ ಥಳಥಳಿಸುವ ಮುತ್ತಾಯ್ತು. ಆ ಮುತ್ತಿನ ಶೀತಲಕಾಂತಿಯೇ ಮಹಾದೇವಿಯಮ್ಮನಾಗಿ ತೊಳಗಿ ಬೆಳಗುವಂತಾಯ್ತು ! ಮರ್ತ್ಯಕ್ಕೆ ಮಹವ ತಂದ ಬಸವಣ್ಣನೆಂಬ ಪರಂಜ್ಯೋತಿ ಮುಟ್ಟಿದ ಗಂಡಹೆಂಡಿರು ಆತ್ಮಜ್ಯೋತಿಯಲ್ಲಿ ಎಚ್ಚೆತ್ತು ಬಾಳಿ ಬೆಳಗಿದರು ಎಂಬ ಪ್ರೋ. ಭೂಸನೂರಮಠರು ಮಾರಯ್ಯ ದಂಪತಿಗಳ ಬಗ್ಗೆ ಬರೆದ ಮಾತು ನಿಜಕ್ಕೂ ಸತ್ಯವಾದುದು.

■■

# ಉರಿಲಿಂಗ ಪೆದ್ದಿ

• ಶ್ರೀ ಶ್ರೀಶೈಲ ಪ. ಕಳಸದ

ಪ್ರತಿಯೊಬ್ಬ ಮನುಷ್ಯನಲ್ಲಿ ಸತ್ವ, ರಜಸ್‌ಮತ್ತು ತಮಸ್ ಈ ಮೂರೂ ಗುಣಗಳು ಇದ್ದೇ ಇರುತ್ತವೆ. ಆದರೆ ಸದಾಕಾಲ ಒಂದೇ ಪ್ರಮಾಣದಲ್ಲಿ ಇರುವದಿಲ್ಲ. ಹೆಚ್ಚು ಕಡಿಮೆ ಆಗುತ್ತಿರುತ್ತವೆ. ವ್ಯಕ್ತಿಯಲ್ಲಿ ಯಾವ ಗುಣ ಹೆಚ್ಚಾಗಿದೆಯೋ ಅದರಂತೆ ವರ್ತಿಸುತ್ತಾನೆ. ಸತ್ವಗುಣ ಹೆಚ್ಚಾಗಿದ್ದರೆ ಸತ್ಯವಂತ, ಸಂಭಾವಿತ, ಸಭ್ಯ, ಪಾಪಭೀರು ಆಗಿರುತ್ತಾನೆ; ಒಳ್ಳೆಯ ವಿಚಾರ ಮಾಡುತ್ತಾನೆ, ಸಾಧು ಪ್ರಾಣಿಯಾಗಿರುತ್ತಾನೆ. ರಜೋಗುಣ ಪ್ರಧಾನವಾಗಿದ್ದರೆ ಆತ ಮಹತ್ವಾಕಾಂಕ್ಷಿಯಾಗಿರುತ್ತಾನೆ, ಚಟುವಟಿಕೆಯುಳ್ಳವನಾಗಿರುತ್ತಾನೆ. ತಮೋಗುಣ ಪ್ರಧಾನವಾಗಿದ್ದರೆ ಆತ ಆಲಸಿ, ಸೋಮಾರಿ, ಕೆಟ್ಟವಿಚಾರ ಮಾಡುತ್ತಿರುತ್ತಾನೆ; ದುರಾಚಾರಿಯೂ ಆಗಿರಬಹುದು. ಆದರೆ ಈ ಗುಣಗಳು ಸ್ಥಿರವಲ್ಲ. ವ್ಯಕ್ತಿಯ ಸ್ವಭಾವ, ಪೂರ್ವಾರ್ಜಿತ ಕರ್ಮ, ವಾತಾವರಣ ಅಥವಾ ಆಕಸ್ಮಿಕ ಘಟನೆಯ ಪ್ರಭಾವದಿಂದ ಒಳ್ಳೆಯವನು ಕೆಟ್ಟವನಾಗಬಹುದು; ಕೆಟ್ಟವನು ಒಳ್ಳೆಯವನಾಗಬಹುದು. ಇಲ್ಲಿ ವಾಲ್ಮೀಕಿ, ಅಂಗುಲಿ ಮಾಲಾ ಇವರನ್ನು ಉದಾಹರಿಸಬಹುದು. ಪೆದ್ದಣ್ಣನನ್ನು ಇದೇ ಸಾಲಿಗೆ ಸೇರಿಸಬಹುದು.

ಪೆದ್ದಣ್ಣ ಆಂಧ್ರ ಪ್ರದೇಶದ ಓರ್ವ ಅಸ್ಪೃಶ್ಯ. ಅದು ಹೇಗೋ ಅವನು ಚಿಕ್ಕಂದಿನಿಂದಲೇ ಕಳ್ಳತನ ಮಾಡುವದನ್ನು ಕಲಿತಿದ್ದ. ಅವನಿಗೆ ಬೇರೆ ಯಾವ ಉದ್ಯೋಗವೂ ಹಿಡಿಸಲಿಲ್ಲ. ಯಾವುದೋ ಕಾರಣದಿಂದ ಆತ ಪತ್ನಿ ಸಮೇತ ಗುಳೆ ಕಟ್ಟಿಕೊಂಡು ಮಹಾರಾಷ್ಟ್ರದ ನಾಂದೇಡ ಜಿಲ್ಲೆಯ ಕಂಧಾರ ಎಂಬ ಪಟ್ಟಣಕ್ಕೆ ಬಂದ. ಅಲ್ಲಿ ಅವನಿಗೆ ಕಳ್ಳತನ ಮಾಡಲು ಅನುಕೂಲಕರ ತಾಣಗಳಿದ್ದವು. ಅವನ ಕಳ್ಳತನದ ಉದ್ಯೋಗ ಚನ್ನಾಗಿಯೆ ನಡೆದಿತ್ತು.

ಅದೇ ಊರಿನಲ್ಲಿ ಉರಿಲಿಂಗ ದೇವ ಎಂಬ ಲಿಂಗಾಯತ ಮಠಾಧೀಶರಿದ್ದರು. ಆ ಮಠಕ್ಕೆ ಬಹಳ ಜನ ನಡೆದುಕೊಳ್ಳುತಿದ್ದರು. ಉರಿಲಿಂಗ ದೇವರು ಜನರಿಗೆ ಆಚಾರ ವಿಚಾರಗಳನ್ನು ಬೋಧಿಸುತ್ತಿದ್ದರು. ನಂದಿವಾಡ ಗ್ರಾಮದ ಸೂರಯ್ಯ ಎಂಬವ ಉರಿಲಿಂಗ ದೇವರಿಂದ ಲಿಂಗದೀಕ್ಷೆ ಪಡೆದುಕೊಳ್ಳಲು ಮಠಕ್ಕೆ ಬಂದನು. ಗುರುಗಳು ಅಪ್ಪಣೆ ಕೊಡಿಸಿದ ಪ್ರಕಾರ ದೀಕ್ಷೆಗೆ ಬೇಕಾಗುವ ಎಲ್ಲ ಸಾಮಗ್ರಿಗಳನ್ನು ತಂದು ಮಠದಲ್ಲಿರಿಸಿದನು. ಪೆದ್ದಣ್ಣನಿಗೆ ಆ ದಿನ ಮಠದಲ್ಲಿ ಲಿಂಗದೀಕ್ಷಾ ಕಾರ್ಯಕ್ರಮ ಇರುವದೂ ಅದಕ್ಕೆ ಬೇಕಾಗುವ ಸಾಮಗ್ರಿಗಳನ್ನು ಮಠದಲ್ಲಿ ಇರಿಸಿರುವದೂ ಗೊತ್ತಾಯಿತು. ಆತ ಬೈತಿಟ್ಟುಕೊಂಡು ಮಠದ ಹತ್ತಿರವೇ ಅಲೆದಾಡುತ್ತಿದ್ದನು. ಜನ ಸಂಚಾರ ಕಡಿಮೆಯಾದಕೂಡಲೇ ಪೆದ್ದಣ್ಣ ಮಠದ ಮಾಳಿಗೆ ಏರಿ ಪೂಜಾ ಕೋಣೆಯ ಬೆಳಕಿಂಡಿಯಿಂದ ಒಳಗೆ ಇಳಿಯಲು ಇಣಿಕಿ ನೋಡಿದ. ಅಲ್ಲಿ ಲಿಂಗದೀಕ್ಷಾ ಕಾರ್ಯಕ್ರಮ ನಡೆದಿತ್ತು. ಪತ್ರ, ಪುಷ್ಪ, ಅಗರು, ಚೆಂದನ ಮುಂತಾದವುಗಳ ಸುವಾಸನೆಯಿಂದ ಪೂಜಾಕೋಣೆ ಘಮಘಮಿಸುತ್ತಿತ್ತು. ಉರಿಲಿಂಗದೇವರು, ಅವರ ಎದುರಿಗೆ ಸೂರಯ್ಯ ಕುಳಿತಿದ್ದನು. ಪ್ರಾಸಂಗಿಕ ವಚನಗಳನ್ನು ತಾಳಬದ್ಧವಾಗಿ ಹೇಳುತ್ತಿದ್ದರು. ಆ ವಾತಾವರಣದ ಪ್ರಭಾವ ಪೆದ್ದಣ್ಣನ ಮೇಲೆ ಚನ್ನಾಗಿಯೇ ಆಯಿತು. ಆತ ಕದಿಯುವ ವಿಚಾರವನ್ನೇ ಮರೆತ. ಮತ್ತೆ ಮತ್ತೆ ಇಣಿಕಿ ನೋಡುತ್ತಿದ್ದಂತೆ ಉರಿಲಿಂಗ ದೇವರು ಸ್ತ್ರೀಯಂತೆ ಪರಶಿವನು ಪುರುಷನಂತೆ ಕಂಡು ಬಂದರು. ಶರಣಸತಿ ಲಿಂಗಪತಿ ಎಂಬ ಭಾವ ಮೂಡಿತು. ಅನಂತರ ಗುರುಗಳು ಸೂರಯ್ಯನಿಗೆ ಮಂತ್ರೋಪದೇಶ ಮಾಡಿ ಲಿಂಗದ ನೆಲೆ ಕಲೆಗಳನ್ನು ತಿಳಿಸಿಕೊಟ್ಟು ಲಿಂಗದೀಕ್ಷೆಯನ್ನು ಮಾಡಿದರು. ಅದನ್ನೆಲ್ಲ ನೋಡುತ್ತಿದ್ದಂತೆ ಪೆದ್ದಣ್ಣನ ಅಂತರಂಗದಲ್ಲಿ ಬಹು ದೊಡ್ಡ ಪರಿವರ್ತನೆಯಾಯಿತು. ಸೂರಯ್ಯನಂತೆ ತಾನೂ ಲಿಂಗದೀಕ್ಷೆ ಪಡೆಯಬೇಕು ಎಂದುಕೊಂಡನು. ಆದರೆ ಗುರುಗಳು ಹಿಂದು ಮುಂದು ಗೊತ್ತಿಲ್ಲದ ತನ್ನಂಥ ಅಪರಿಚಿತನಿಗೆ ಲಿಂಗದೀಕ್ಷೆ ಕೊಡಬಹುದೇ.. ..? ಎಂದು ಚಿಂತಿಸಿದ.

ಶ್ರೀಶೈಲ ಪ. ಕಳಸದ, ಬಸವನಗರ, ಹಿರೇಬಾಗೇವಾಡಿ ಮೊ-೯೯೦೨೨೦೫೫೫೦

ಪೆದ್ದಣ್ಣ ಈಗ ಕಳ್ಳತನ ಮಾಡುವದನ್ನು ಬಿಟ್ಟು ಕೂಲಿ ನಾಲಿ ಮಾಡಿ ಜೀವನ ನಡೆಸತೊಡಗಿದ್ದ. ಲಿಂಗದೀಕ್ಷೆ ಪಡೆಯಲು, ಮೊದಲು ಗುರುಸೇವೆ ಮಾಡಿ ಅವರ ವಿಶ್ವಾಸಕ್ಕೆ ಪಾತ್ರನಾಗಬೇಕು. ಆನಂತರ ಹದ ಸಮಯದಲ್ಲಿ ಲಿಂಗದೀಕ್ಷೆಯ ಪ್ರಸ್ತಾಪ ಮಾಡಬೇಕು ಎಂದು ನಿರ್ಧರಿಸಿದ. ಅದರಂತೆ ಪ್ರತಿದಿನ ಅಡವಿಯಿಂದ ಕಟ್ಟಿಗೆಯನ್ನು ಕಡಿದು ತಂದು ಮಠಕ್ಕೆ ಹಾಕತೊಡಗಿದ. ಕೆಲವು ದಿನ ಕಳೆದವು. ಒಂದು ದಿನ ಉರಿಲಿಂಗ ದೇವರು ಪೆದ್ದಣ್ಣನಿಗೆ ಕಟ್ಟಿಗೆಯ ಬೆಲೆಯನ್ನು ತೆಗೆದುಕೊ ಎಂದರು. ಆದರೆ ಪೆದ್ದಣ್ಣ ತನಗೆ ದುಡ್ಡು ಬೇಡ ಲಿಂಗದೀಕ್ಷೆ ಕೊಡಿರಿ ಎಂದು ಬೇಡಿಕೊಂಡ. ಪೆದ್ದಣ್ಣ ಒಬ್ಬ ಐನಾತಿ ಕಳ್ಳ ಇಂಥವನಿಗೆ ಲಿಂಗದೀಕ್ಷೆ! ಗುರುಗಳು ಸುಮ್ಮನಾದರು. ಪೆದ್ದಣ್ಣ ಮಾತ್ರ, ಇಂದಲ್ಲದಿದ್ದರೆ ಎಂದಾದರೂ ಗುರುಕೃಪೆ ಆಗಿಯೇ ಆಗುತ್ತದೆ ಎಂಬ ದೃಢ ವಿಶ್ವಾಸದಿಂದ ಕಟ್ಟಿಗೆ ಹಾಕುವದನ್ನು ಮುಂದುವರೆಸಿದ. ಹಾಗೆಯೇ ಅವಕಾಶ ದೊರೆತಾಗೊಮ್ಮೆ ಲಿಂಗದೀಕ್ಷೆ ನೀಡಬೇಕೆಂದು ದುಂಬಾಲು ಬಿದ್ದ. ಅಷ್ಟೇ ಅಲ್ಲ ಹಾದಿ ಬೀದಿಗಳಲ್ಲಿ ಗುರುಗಳು ಕಂಡಾಗಲೆಲ್ಲ ಲಿಂಗದೀಕ್ಷೆ ಲಿಂಗದೀಕ್ಷೆ ಎಂದು ಹಂಬಲಿಸತೊಡಗಿದ. ಒಂದು ದಿನ ಉರಿಲಿಂಗ ದೇವರುಸಿಟ್ಟಿನಿಂದ ಬೀದಿಯಲ್ಲಿ ಬಿದ್ದಿದ್ದ ಒಂದು ಕಲ್ಲನ್ನು ಎತ್ತಿಕೊಂಡು 'ಘೇ ಜಾ ದಗಡೀಚ' ಎಂದು ಪೆದ್ದಣ್ಣನೆಡೆಗೆ ಒಗೆದು ಇದನ್ನೇ ಪೂಜಿಸು ಹೋಗು ಎಂದರು. ಪೆದ್ದಣ್ಣನಿಗೆ ಅತಿ ಆನಂದವಾಯಿತು. ಆ ಕಲ್ಲನ್ನು ಮನೆಗೆ ಒಯ್ದು ಭಕ್ತಿಯಿಂದ ಪೂಜಿಸತೊಡಗಿದನು. 'ಘೇ ಜಾ ದಗಡೀಚ' ಇದೇ ಅವನಿಗೆ ಷಡಕ್ಷರಿ ಮಂತ್ರವಾಯಿತು. ನಿಯಮಿತವಾಗಿ ಅಪಾರ ಭಕ್ತಿಯಿಂದ ಆರಾಧನೆ ಮಾಡುತ್ತಿರಲು ಆ ಕಲ್ಲೇ ಇಷ್ಟಲಿಂಗವಾಯಿತು. ಪೆದ್ದಣ್ಣ ಶುದ್ಧ ಸಾತ್ವಿಕ ವ್ಯಕ್ತಿಯಾದ. ಈ ವಿಷಯ ತಿಳಿದು ಉರಿಲಿಂಗ ದೇವರು ಪೆದ್ದಣ್ಣನ ಭಕ್ತಿ ನಿಷ್ಠೆಗಳಿಗೆ ಮೆಚ್ಚಿ ಆತನನ್ನು ಕರೆಯಿಸಿ ಶಾಸ್ತ್ರೋಕ್ತ ವಿಧಿ ವಿಧಾನದಿಂದ ಲಿಂಗ ದೀಕ್ಷೆಯನ್ನು ನೀಡಿ 'ಉರಿಲಿಂಗ ಪೆದ್ದಿ' ಎಂದು ನಾಮಕರಣ ಮಾಡಿ ಆಶೀರ್ವದಿಸಿದರು. ಪೆದ್ದಣ್ಣನಿಗೆ ಪುನರ್ಜನ್ಮವಾದಂತಾಯಿತು. ಉರಿಲಿಂಗ ಪೆದ್ದಿಯು ಸಾಧನೆಯನ್ನು ಮುಂದುವರೆಸಿದನು. ಅದರ ಪರಿಣಾಮವಾಗಿ ವಾಕ್ಸಿದ್ಧಿ, ಸ್ಪರ್ಶಸಿದ್ಧಿ ಮುಂತಾದವು ಸಿದ್ಧಿಸಿದವು. ಅದರಿಂದ ಪವಾಡಗಳು ನಡೆಯತೊಡಗಿದವು.

ಕಂಧಾರದ ರಾಜ ಒಂದು ಕೆರೆಯನ್ನು ಅಗೆಸುತ್ತಿದ್ದನು. ಎಷ್ಟು ಸಾಹಸ ಪಟ್ಟರೂ ನೀರು ಬೀಳಲಿಲ್ಲ. ಸೆಲೆಯ ಮೇಲೆ ಒಂದು ದೊಡ್ಡ ಬಂಡೆಗಲ್ಲು ಆತುಕೊಂಡಿತ್ತು. ಯಾರು ಎಷ್ಟೇ ಪ್ರಯತ್ನಿಸಿದರೂ ಬಂಡೆಗಲ್ಲು ಏಳಲಿಲ್ಲ. ಆಗ ಯಾರೋ ಉರಿಲಿಂಗ ಪೆದ್ದಿಯ ಸಲಹೆ ಕೇಳಬೇಕೆಂದು ಹೇಳಿದರು. ರಾಜ ಉರಿಲಿಂಗ ಪೆದ್ದಿಯನ್ನು ಕರೆಯಿಸಿ ಬಂಡೆಗಲ್ಲನ್ನು ತೆಗೆಯುವ ಬಗ್ಗೆ ವಿಚಾರಿಸಿದನು. ತೆಗೆಸುವ ಉಪಾಯ ಹೇಳಬೇಕೆಂದು ಬೇಡಿಕೊಂಡನು. ಉರಿಲಿಂಗ ಪೆದ್ದಿಯು 'ಜಾ ದಗಡೀಚ' ಎಂದು ಅರ್ಧಮಂತ್ರವನ್ನು ಹೇಳುತ್ತಿದ್ದಂತೆ ತನ್ನ ಇಷ್ಟಲಿಂಗವು ಗಾಳಿಯಲ್ಲಿ ತೇಲುತ್ತಹೋಗಿ ಬಂಡೆಗಲ್ಲಿನ ಮೇಲೆ ಕುಳಿತಿತು. 'ಘೇ ದಗಡೀಚ' ಬಂಡೆಗಲ್ಲನ್ನು ತೆಗೆದುಕೊ ಎನ್ನುತ್ತ ಮಂತ್ರವನ್ನು ಪೂರ್ಣಗೊಳಿಸಿದನು. ಇಷ್ಟಲಿಂಗದ ಕೆಳಗೆ ಇದ್ದ ಬಂಡೆಗಲ್ಲು ಕಿತ್ತಿ ಹೊರಬಿತ್ತು. ತತ್‌ಕ್ಷಣವೇ ಅಲ್ಲಿ ನೀರುಬುಗ್ಗೆ ಚಿಮ್ಮಿತು.ಪ್ರವಾಹ ಹರಿದು, ನೋಡುನೋಡುತ್ತಿದ್ದಂತೆ ತಗ್ಗುತುಂಬಿ ಕೆರೆಯಾಯಿತು. ಅದು ಲಿಂಗಶಕ್ತಿಯ ಪ್ರಭಾವ! ಆ ಘಟನೆಯಿಂದ ಉರಿಲಿಂಗಪೆದ್ದಿಯ ಕೀರ್ತಿ ಎಲ್ಲೆಡೆ ಹಬ್ಬಿತು.

ಉರಿಲಿಂಗ ದೇವರು ತಮ್ಮ ಪೀಠಕ್ಕೆ ಉತ್ತರಾಧಿಕಾರಿಯನ್ನು ಹುಡುಕುತಿದ್ದರು. ದೀರ್ಘವಾಗಿ ಆಲೋಚನೆ ಮಾಡಿದ ಬಳಿಕ ಉರಿಲಿಂಗಪೆದ್ದಿಯೇ ತಮ್ಮ ಪೀಠಕ್ಕೆ ಉತ್ತರಾಧಿಕಾರಿಯಾಗಲು ಅತ್ಯಂತ ಯೋಗ್ಯವ್ಯಕ್ತಿ ಎಂದುಕೊಂಡು ಪೆದ್ದಿಯನ್ನು ತಮ್ಮ ಪೀಠಕ್ಕೆ ನೇಮಿಸಿದರು. ಗುರು ಸಂಪ್ರದಾಯವನ್ನು ನಡೆಸಿಕೊಂಡು ಹೋಗಲು ಅನುಗ್ರಹಿಸಿದರು. ಉರಿಲಿಂಗ ಪೆದ್ದಿ ಪೀಠಾಧಿಕಾರಿಯಾದ ಮೇಲೆ ಸ್ಥಾನಕ್ಕೆ ತಕ್ಕಂತೆ ವಿದ್ವಾಂಸನಾಗಬೇಕು ಎಂಬ ಮಹತ್ವಾಕಾಂಕ್ಷೆ ಉಂಟಾಯಿತು. ಅದಕ್ಕಾಗಿ ಕನ್ನಡ, ಸಂಸ್ಕೃತ ಸಾಹಿತ್ಯವನ್ನು ಅಭ್ಯಾಸ ಮಾಡಿದ. ಕಾಲಾಂತರದಲ್ಲಿ ಕಲ್ಯಾಣ, ಕೊರಳಿ, ಭಾಲ್ಕಿ, ಬೇವಿನ ಚಿಂಚೋಳಿಯಲ್ಲಿ ಶಾಖಾ ಮಠಗಳನ್ನು ಸ್ಥಾಪಿಸಿದ. ಆ ಮಠಗಳು ಈಗಲೂ ಇವೆಯಂತೆ!

ಉರಿಲಿಂಗಪೆದ್ದಿ ಬಸವಣ್ಣನವರ ಶರಣ ತತ್ವಗಳನ್ನು ಅಧ್ಯಯನ ಮಾಡಿದ. ಇಷ್ಟಲಿಂಗ ಪೂಜೆ, ಪಂಚಾಚಾರ, ಷಟ್ಸ್ಥಲ ಸಿದ್ಧಾಂತ, ಅಷ್ಟಾವರಣ, ಕಾಯಕ, ದಾಸೋಹ ಮುಂತಾದವುಗಳನ್ನು ತಿಳಿದುಕೊಂಡ. ಮಠದ ಜೀವನಕ್ಕಿಂತ ಶರಣಜೀವನವೇ ಶ್ರೇಷ್ಠ ಎಂಬುದನ್ನು ಮನಗಂಡ. ಅಂತೆಯೇ ಆತ ತನ್ನ ಗುರುವಿನ ಮೂಲಮಠಕ್ಕೆ ಯೋಗ್ಯನಾದ ಓರ್ವ ಭಕ್ತನನ್ನು ಪೀಠಾಧಿಕಾರಿಯನ್ನಾಗಿ ನೇಮಿಸಿದ. ಪತ್ನಿ ಕಾಳವ್ವೆ ಸಹಿತ ಗುಳೆ ಕಟ್ಟಿಕೊಂಡು ಕಲ್ಯಾಣ ನಗರಕ್ಕೆ ಬಂದು ಅಲ್ಲಿಯೇ ನೆಲೆಸಿದ. ಅಲ್ಲಿ ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವ ಅಂಥವರ ಸಂಗದಲ್ಲಿ ಲಿಂಗಾಯತ ಧರ್ಮವನ್ನು ಚೆನ್ನಾಗಿ ಪ್ರತಿಪಾದಿಸಿದನು.

ವಚನಕಾರ: ಇತರ ವಚನಕಾರರಂತೆ ಉರಿಲಿಂಗ ಪೆದ್ದಿಯೂ ಅನೇಕ ವಚನಗಳನ್ನು ರಚಿಸಿದ್ದಾನೆ. ಆತನ ಮುದ್ರಿಕೆ 'ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರ'

**ಶಿವನು ತನ್ನ ವಿನೋದಕ್ಕೆ ರಚಿಸಿದನು ಅನಂತ ಲೋಕವನು ರಚಿಸಿದನು ವಿಶ್ವಕ್ಕೆ ಹೊರಗಾಗಿರ್ದನೆ? ಇಲ್ಲ. ವಿಶ್ವವೆಲ್ಲವು ತಾನಾದೊಡೆ ವಿಶ್ವದುತ್ಪತ್ತಿ ಸ್ಥಿತಿ ಲಯಕ್ಕೊಳಗಾದನೆ? ಇಲ್ಲ. ಅದೇನು ಕಾರಣವೆಂದೊಡೆ, ಅಜಾತನಾಗಿ ಉತ್ಪತ್ತಿಯಿಲ್ಲ, ಕರ್ಮರಹಿತನಾಗಿ ಸ್ಥಿತಿಗೊಳಗಲ್ಲ, ಮರಣರಹಿತನಾಗಿ ಲಯಕ್ಕೊಳಗಲ್ಲ ಇಂತೀ ಗಣತ್ರಯಂಗಳ ಹೊದ್ದಲರಿಯ ತಾನಲ್ಲದೆ ವಿಶ್ವಕ್ಕಾಧಾರವಿಲ್ಲದಾಗಿ ದೂರಸ್ಥನಲ್ಲ, ತನ್ನಲ್ಲಿ ತಾನಲ್ಲದೆ ಅನ್ಯವು ತೋರಲರಿಯದಾಗಿ ಇದಿರಿಲ್ಲ, ಇದಿರಿಲ್ಲದಾಗಿ ವಿಶ್ವಮಯ ತಾನಾದುದೇ ಸತ್ಯ, ಅರಸು ತಾನಾಳಾಗಬಲ್ಲ. ತನ್ನವಿನೋದಕ್ಕೆ, ಮರಳಿ ಅರಸಾಗಬಲ್ಲ; ನಿಮ್ಮುರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರನು; ಜಗವಾಲೂ ಬಲ್ಲ ಜಗವಾಗದಿರಲೂ ಬಲ್ಲನಯ್ಯ!**

ಲಿಂಗಮಧ್ಯೇ ಜಗತ್ಸರ್ವಮ್ ಕಾಣುವ ಕಾಣದಿರುವ ಪ್ರತಿಯೊಂದು ವಸ್ತುವೂ ಲಿಂಗಮಯ. ಲಿಂಗವಿಲ್ಲದೆ ಯಾವ ಕಾರ್ಯವೂ ನಡೆಯಲಾರದು. ಲಿಂಗವೇ ಪರಶಿವ. ಪರಶಿವನು ತನ್ನ ವಿನೋದಕ್ಕಾಗಿ ಈ ವಿಶ್ವವನ್ನು ಸೃಜಿಸಿದನು. ಶಿವನು ಜಲದೊಳಗಿನ ಸೂರ್ಯನಂತೆ ಇದ್ದಾನೆ. ಆದರೆ ಪ್ರಪಂಚದ ಪಾಪ, ಪುಣ್ಯ, ಬಂಧ, ಮೋಕ್ಷಗಳಿಗೆ ಹೊರಗಾಗಿದ್ದಾನೆ. ಜಲದೊಳಗಿನ ಪ್ರಕೃತಿ ವಿಕೃತಿಗಳು ಸೂರ್ಯನಿಗಿಲ್ಲ. ಲೋಕದ ಸ್ಥಿತಿ ಗತಿ ಲೋಕಕ್ಕಲ್ಲದೆ ಶಿವನಿಗಲ್ಲ. ಶಿವನು ಅಜಾತ. ಲೋಕದ ಪ್ರಾಣಿಗಳಂತೆ ಹುಟ್ಟಿಲ್ಲ. ಕರ್ಮರಹಿತನಾಗಿ ಸ್ಥಿತಿಯೊಳಗಲ್ಲ; ಮರಣರಹಿತನಾಗಿ ಲಯಕ್ಕೊಳಗಲ್ಲ. ತನ್ನಲ್ಲಿ ತಾನಲ್ಲದೆ ಅನ್ಯವು ತೋರಲರಿಯದು. ಅದಕ್ಕೆ ಇದಿರಿಲ್ಲ. ವಿಶ್ವಮಯ ತಾನಾದುದೇ ಸತ್ಯ. ಅರಸು ಆಳಾಗಬಲ್ಲ ತನ್ನ ವಿನೋದಕ್ಕೆ, ಮರಳಿ ಅರಸನಾಗಬಲ್ಲ.

**ಇದು ಕಾರಣ ಲಿಂಗವೇ ಪರಬ್ರಹ್ಮವೆಂದರಿದು ಧ್ಯಾನಿಸಿ ಪೂಜಿಸಿ ಮಹದಾನಂದ ಮುಕ್ತಿಯನೆಯ್ದಿದರು ಬ್ರಹ್ಮ ವಿಷ್ಣು ಮುಖ್ಯರಾದ ದೇವ ಜಾತಿ ಋಷಿ ಜನಂಗಳು ಇದು ಪುರಾಣ ಪ್ರಸಿದ್ಧ ಇನ್ನು ಕಲಿಯುಗದಲ್ಲಿ ದೃಷ್ಟವ ನೋಡಿರೆ; ಬಸವರಾಜ ದೇವರು ಮುಖ್ಯರಾದ ಅಸಂಖ್ಯಾತ ಪುರಾತನರು ಇದನರಿದು ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಲಿಂಗವೇ ಸಾಕಾರ ನಿರಾಕಾರ ಸಂಸಿದ್ಧವೆಂದು ಅರಿದು ಧ್ಯಾನಿಸಿ ಪೂಜಿಸಿ ಮಹದಾನಂದ ಮುಕ್ತಿಯನೆಯ್ದಿದರು ಕಾಣಿರಣ್ಣ**

**ಒಂದೇ ವಸ್ತು ತನ್ನ ಲೀಲೆಯಿಂದ**
**ಪರಮಾತ್ಮ ಜೀವಾತ್ಮವಾಯಿತು**
**ಆ ಪರಮಾತ್ಮನೇ ಲಿಂಗ, ಜೀವಾತ್ಮವೇ ಅಂಗ**
**ಸಂಗವೇ ಏಕಾತ್ಮ**
**ತತ್ವದವೇ ಪರಮಾತ್ಮ, ತ್ವಂ ಪದವೇ ಜೀವಾತ್ಮ**
**ಅಸಿ ಪದವೇ ತಾದಾತ್ಮ್ಯವಯ್ಯ**
**ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ**

ಪರಶಿವನು ತನ್ನ ಲೀಲೆಯಿಂದ ಪರಮಾತ್ಮ ಜೀವಾತ್ಮ ಎರಡು ತೆರನಾಗುತ್ತಾನೆ. ಪರಮಾತ್ಮನೇ ಲಿಂಗ, ಜೀವಾತ್ಮನೇ ಅಂಗ ಈ ಎರಡು ಲಿಂಗ ಅಂಗಗಳು ಒಂದನ್ನೊಂದು ಬಿಟ್ಟು ವ್ಯವಹರಿಸಲಾರವು. ಜಗತ್ತಿನ ಕಾರ್ಯ ಇವೆರಡರ ಮುಖಾಂತರ ನಡೆಯುತ್ತವೆ. ಅಂಗವು ಲಿಂಗಾಭಿಮುಖವಾಗಿ ಕಾರ್ಯ ಮಾಡಲು ಲಿಂಗದ ಗುಣಗಳು ಅಂಗದಲ್ಲಿ ಸಮಾವೇಶವಾಗಿ ಅದು ಲಿಂಗವೇ ಆಗುವದು.ಇದೇ ಲಿಂಗಾಂಗ ಸಾಮರಸ್ಯ. ಉರಿಲಿಂಗ ಪೆದ್ದಿಯು ತತ್ವಮಸಿ ಎಂಬ ವಾಕ್ಯದಿಂದ ತಿಳಿಸಿ ಹೇಳುತ್ತಾನೆ.

**ಶಿವ ಶಿವಾ ಬಸವಣ್ಣನೇ ಗುರುತ್ವವುಳ್ಳ ಮಹಾವಸ್ತುವಾಗಿ ಶ್ರೀ ಗುರು ಲಿಂಗವು ಬಸವಣ್ಣನೇ, ಶಿವ ಸುಖ ಸಂಪನ್ನನಾಗಿ ಶಿವಲಿಂಗವು ಬಸವಣ್ಣನೇ, ಜಂಗಮ ಪ್ರಾಣಿಯಾಗಿ ಜಂಗಮ ಲಿಂಗವು ಬಸವಣ್ಣನೇ, ಮಹಾ ಮಹಿಮನು ಬಸವಣ್ಣನೇ ಮಹಾವಸ್ತುವ ಗರ್ಭಿಸಿಕೊಂಡಿಪ್ಪಾತನು ಬಸವಣ್ಣನೇ ಮಹಾ ನಿತ್ಯನು ಬಸವಣ್ಣನೆ ಮಹಾಸತ್ಯನು ಬಸವಣ್ಣನೇ ಇಂತೀ ನವ ವಿಧ ಲಿಂಗವು ಬಸವಣ್ಣನೇ ಇಂತಿವನೆಲ್ಲವನೊಳಗೊಂಡು ಎನ್ನ ಕರಸ್ಥಲಕ್ಕೆ ಬಂದು ಎನಗೆ ಪ್ರಸಾದವನಿಕ್ಕಿ ಸಲಹಿದನಯ್ಯಾ ಬಸವಣ್ಣನು ಇದು ಕಾರಣ ಅನವರತ ನಾನು ಬಸವಾ ಬಸವಾ ಬಸವಯ್ಯಾ ಬಸವ ಗುರುವೇ ಬಸವ ಲಿಂಗವೇ ಬಸವ ತಂದೆಯೇ, ಬಸವ ಪ್ರಭುವೇ, ನಮೋ ನಮೋ ಎನುತಿರ್ದನಯ್ಯಾ, ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ**

ಉರಿಲಿಂಗ ಪೆದ್ದಿಯು ಬಸವಣ್ಣನವರನ್ನು ಬಹು ವಿಧವಾಗಿ ಕೊಂಡಾಡಿದ್ದಾನೆ. ಗುರುತ್ವವುಳ್ಳ ಮಹಾವಸ್ತು ಬಸವಣ್ಣ. ಶ್ರೀಗುರು ಲಿಂಗವೇ ಬಸವಣ್ಣ. ಸುಖ ಸಂಪನ್ನನಾಗಿ

ಶಿವಲಿಂಗವು ಬಸವಣ್ಣ. ಜಂಗಮ ಪ್ರಾಣಿಯಾಗಿ ಜಂಗಮ ಲಿಂಗವು ಬಸವಣ್ಣ ಮಹಾ ವಸ್ತುವ ಗರ್ಭೀಕರಿಸಿಕೊಂಡಾತ ಬಸವಣ್ಣ. ಮಹಾ ನಿತ್ಯನು ಮಹಾ ಸತ್ಯನು ಬಸವಣ್ಣ. ಬಸವಣ್ಣನೇ ಉರಿಲಿಂಗ ಪೆದ್ದಿಯ ಕರಸ್ಥಲಕ್ಕೆ ಬಂದು ಪ್ರಸಾದವನಿಕ್ಕಿ ಸಲಹಿದ ಬಸವಣ್ಣ. ಆದ ಕಾರಣ ಸದಾಕಾಲ ಬಸವಾ ಬಸವಾ ನಿನಗೆ ನಮೋ ನಮೋ– ಎಂದು ಸ್ತುತಿಸುತ್ತಾನೆ.

**ಅಯ್ಯಾ ನಿಮ್ಮ ಶರಣರ ಚರಣದ ಭಕ್ತಿಯೇ ಎನಗೆ ಸಾಲೋಕ್ಯ ಪದವಯ್ಯಾ, ನಿಮ್ಮ ಶರಣರ ಅರ್ಚನೆ ಪೂಜೆಯೇ ಎನಗೆ ಸಾಮೀಪ್ಯ ಪದವಯ್ಯಾ, ಅಯ್ಯಾ ನಿಮ್ಮ ಗಣಂಗಳ ಧ್ಯಾನವೇ ಎನಗೆ ಸಾರೂಪ್ಯ ಪದವಯ್ಯಾ, ಅಯ್ಯಾ ನಿಮ್ಮ ಪುರಾತನರ ಜ್ಞಾನಾನುಭವ ಸಮರಸಾನಂದವೇ ಎನಗೆ ಸಾಯುಜ್ಯಪದವಯ್ಯಾ. ಇಂತೀ ಚತುರ್ವಿಧ ಪದಂಗಳನಲ್ಲದೆ ಅನ್ಯವ ನಾನರಿಯೆನಯ್ಯಾ, ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ**

ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಮತ್ತು ಸಾಯುಜ್ಯ ಇವು ನಾಲ್ಕು ಮೋಕ್ಷದ ಪದವಿಗಳು. ಭಕ್ತನ ಅಥವಾ ಸಾಧಕನ ಸಾಧನೆಯನ್ನವಲಂಬಿಸಿ ಉಕ್ತ ಪದವಿಗಳು ದೊರೆಯುತ್ತವೆ. ಉರಿಲಿಂಗ ಪೆದ್ದಿಗೆ ಶಿವಶರಣರ ಚರಣದ ಭಕ್ತಿಯೇ ಸಾಲೋಕ್ಯ ಪದ. ಶರಣರ ಪೂಜೆಯೇ ಸಾಮೀಪ್ಯ ಪದ. ಶರಣ ಗಣಂಗಳ ಧ್ಯಾನವೇ ಸಾರೂಪ್ಯ ಪದ. ಪುರಾತನರ ಜ್ಞಾನ, ಅನುಭವಗಳ ಸಮರಸ ಆನಂದವೇ ಕೈವಲ್ಯ ಪದ. ಈ ನಾಲ್ಕು ಪದವಿಗಳಲ್ಲದೆ ಮತ್ತಾವ ಪದವಿಯನ್ನೂ ಉರಿಲಿಂಗ ಪೆದ್ದಿ ಬಯಸನು. ಹಾಗೆಯೇ ಗುರು ಜಂಗಮ ಸೇವೆಯಲ್ಲಿ ಕಾಲ ಕಳೆದು ಕೊನೆಗೆ ಕಲ್ಯಾಣದಲ್ಲಿಯೇ ಲಿಂಗೈಕ್ಯನಾದನು. ಆತನ ಸಮಾಧಿ ಕಲ್ಯಾಣದಲ್ಲಿ ಇನ್ನೂ ಇದೆಯಂತೆ!

■■

## ಲಿಂಗಾಯತ

ಲಿಂಗಾಯತ ಸ್ವತಂತ್ರ ಧರ್ಮದ ಕೂಗು ನಿನ್ನೆ ಮೊನ್ನೆಯದಲ್ಲ. ಅದು ೧೨ನೇ ಶತಮಾನದಿಂದಲೇ ಪ್ರಾರಂಭವಾಗಿದೆ. ಬ್ರಿಟಿಷರು ಭಾರತದಲ್ಲಿ ಮೊದಲನೆ ಸಲ ೧೮೭೧ ರಲ್ಲಿ ಜನಗಣತಿ ಪ್ರಾರಂಭ ಮಾಡಿದಾಗ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮ ಸ್ಥಾನಮಾನ ನೀಡಿದ್ದರು.

ಲಿಂಗಾಯತರು ತಮ್ಮ ಅಸ್ಮಿತೆ ಮರೆತು ವೀರಶೈವದ ಪ್ರಭಾವಕ್ಕೆ ಒಳಗಾಗಿ ತಾವು ಲಿಂಗೀ ಬ್ರಾಹ್ಮಣರೆಂದು ಕರೆಸಿಕೊಳ್ಳಲು ಪ್ರಯತ್ನವು ನಡೆದಿವೆ. ಇದಕ್ಕೆ ಸಾಕ್ಷಿ ೧೯೨೪ ರಲ್ಲಿ ನಿಜಾಮ ಸರ್ಕಾರದಲ್ಲಿ ಪರಳಿ ವೈಜನಾಥ ದೇವಾಲಯದ ಅಧಿಪತ್ಯಕ್ಕಾಗಿ ಬ್ರಾಹ್ಮಣರು ಲಿಂಗಾಯತರ ಮಧ್ಯ ನ್ಯಾಯಾಲಯದಲ್ಲಿ ನಡೆದ ವ್ಯಾಜ್ಯ ಬ್ರಿಟಿಷ್ ಸರ್ಕಾರ ೧೮೭೧ರ ಜನಗಣತಿಯಲ್ಲಿ ಲಿಂಗಾಯತ ಸ್ವತಂತ್ರ ಧರ್ಮ ಎಂದು ದಾಖಲಿಸಿದರೂ ೧೮೮೧ರ ಜನಗಣತಿಯಲ್ಲಿ ಮೈಸೂರು ಸಂಸ್ಥಾನ ಲಿಂಗಾಯತರನ್ನು ಶೂದ್ರರೆಂದು ನಮೂದಿಸಿತು. ಆಗ ಮೈಸೂರು ಅರಸರಲ್ಲಿ ಲಿಂಗಾಯತರು ಮನವಿ ಸಲ್ಲಿಸಿ ತಾವು ಲಿಂಗೀ ಬ್ರಾಹ್ಮಣರು ಎಂದು ಪರಿಗಣಿಸಲು ಕೇಳಿದರು. ಈ ಎಲ್ಲ ಗೊಂದಲದಿಂದಾಗಿ ಲಿಂಗಾಯತರಿಗೆ ಹಿಂದೂಗಳೆಂದು ಹಣೆಪಟ್ಟಿ ಕಟ್ಟಲಾಯಿತು.

ಸಂವಿಧಾನ ರಚನಾ ಸಭೆಯಲ್ಲಿ ಲಿಂಗಾಯತ ಸ್ವತಂತ್ರ ಧರ್ಮ ಎಂದು ಪರಿಗಣಿಸುವ ವಿಷಯವನ್ನು ಚರ್ಚೆಗೆ ತರಲಾಯಿತು. ಆದರೆ ಸಂವಿಧಾನ ರಚನಾ ಸಮಿತಿ ಇದನ್ನು ಅಂಗಿಕಾರ ಮಾಡದೆ ಬೌದ್ಧ, ಶಿಖ್ಖ, ಜೈನ ಧರ್ಮಗಳನ್ನೂ ಸಹ ಸ್ವತಂತ್ರ ಧರ್ಮಗಳೆಂದು ಪರಿಗಣಿಸಲಿಲ್ಲ. ಈ ಎಲ್ಲಾ ಧರ್ಮಗಳಿಗೆ ಹಿಂದೂ ಕಾನೂನು ಅನ್ವಯಿಸುವಂತೆ ನಿರ್ಣಯ ತೆಗೆದುಕೊಳ್ಳಲಾಯಿತು. ಹೀಗಾಗಿ ಎಲ್ಲ ಧರ್ಮಗಳನ್ನು ಹಿಂದೂ ಧರ್ಮದ ಗುಂಪಿಗೆ ಸೇರಿಸಲಾಯಿತು. ಇದು ಅಂದು ಆಳುತ್ತಿದ್ದವರ ಗೊಂದಲ ಮತ್ತು ಪೂರ್ವಾಗ್ರಹವನ್ನು ಹೇಳುತ್ತದೆ ಹೊರತು ಈ ಧರ್ಮಗಳ ತಪ್ಪಲ್ಲ.

**ಲಿಂಗಾಯತ ಮತ್ತು ಆಚರಣೆಗಳು,** ಕುಪೇಂದ್ರ ಪಾಟೀಲ್

# ಇಷ್ಟಲಿಂಗ

● ಶ್ರೀ ಆರ್. ಪಿ. ಅಪರಾಜ

**ಎನ್ನ ಕರಸ್ಥಲ ಮಧ್ಯದಲ್ಲಿ ಪರಮನಿರಂಜನ ಕುರುಹು ತೋರಿದ, ಆ ಕುರುಹಿನ ಮಧ್ಯದಲ್ಲಿ ಅರುಹಿನ ಕಳೆಯ ತೋರಿದ, ಆ ಕಳೆಯ ಮಧ್ಯದಲ್ಲಿ ಮಹಾಜ್ಞಾನದ ಬೆಳಗ ತೋರಿದ, ಆ ಬೆಳಗಿನ ನಿಲವಿನೊಳಗೆ ಎನ್ನ ತೋರಿದ, ಎನ್ನೊಳಗೆ ತನ್ನ ತೋರಿದ, ತನ್ನೊಳಗೆ ಎನ್ನನಿಂಬಿಟ್ಟುಕೊಂಡ ಮಹಾಗುರುವಿಗೆ ನಮೋ ನಮೋ ಎನುತಿರ್ದೆನಯ್ಯ ಅಖಂಡೇಶ್ವರಾ**

ಗುರುವಿಗೆ ಮಹತಿಯನ್ನು ಕೊಂಡಾಡಿದ ಷಣ್ಮುಖ ಶಿವಯೋಗಿಗಳ ವಚನವಿದು. ಗುರುವಿಡಿದು ಕುರುಹ ಕಾಣಬೇಕು. ಗುರುವಿಡಿದು ಅರುಹ ಕಾಣಬೇಕು, ಮುಂದೆ ಗುರು ಹಿಂದೆ ಲಿಂಗ–ಗುರುವೇ ಸರ್ವಸ್ವ ಎಂಬುದು ಶರಣರು ಸಾರಿದ ಸತ್ಯ.

ಷಣ್ಮುಖ ಸ್ವಾಮಿಗಳ ಪ್ರಸ್ತುತ ವಚನದಲ್ಲಿ ಲಿಂಗದೀಕ್ಷೆಯಿಂದ ಲಿಂಗಾಂಗ ಸಾಮರಸ್ಯದವರೆಗಿನ ಎಲ್ಲ ಮಜಲುಗಳು ಹಂತ ಹಂತವಾಗಿ ಒಡಮೂಡಿವೆ.

ಇಷ್ಟಲಿಂಗ ಲಿಂಗಾಯತ ಧರ್ಮದ ಜೀವಾಳ; ಶರಣ ಧರ್ಮದ ಕೇಂದ್ರಬಿಂದು; ಸಮಷ್ಟಿಯ ಪ್ರತೀಕ. ಇಷ್ಟಲಿಂಗವಿದ್ದ ಎದೆಯೆ ಸುಕ್ಷೇತ್ರ ಅದುವೇ ಪುಣ್ಯತೀರ್ಥ. ಇಷ್ಟಲಿಂಗವನ್ನು ನಿರ್ಲಕ್ಷಿಸಿ ಕಾಶಿ ಕೇದಾರಗಳ ಕ್ಷೇತ್ರ ಯಾತ್ರೆ ಮಾಡಿದರೆ ಕಟ್ಟಿಕೊಂಡ ಇಷ್ಟಲಿಂಗಕ್ಕೆ ಅಗೌರವ. ದೇಹವೇ ದೇಗುಲವಾಗಿರಲು ತೀರ್ಥಕ್ಷೇತ್ರಗಳ ಹಂಗೇಕೆ ಎಂಬುದು ಶರಣರ ಪ್ರಶ್ನೆ. ಕೇಳಿ ಜಂಗಮ ಪುಂಗವ ಅಲ್ಲಮ ಪ್ರಭುಗಳು ಹೇಳಿರುವುದನ್ನು;

**ಸುತ್ತಿ ಸುತ್ತಿ ಬಂದಡಿಲ್ಲ, ಲಕ್ಷ ಗಂಗೆಯ ಮಿಂದಡಿಲ್ಲ**
**ತುಟ್ಟ ತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ**
**ಅತ್ತಲಿತ್ತ ಹರಿದ ಮನವ ಚಿತ್ರ(ಲಿಂಗ)ದಲ್ಲಿ**
**ನಿಲಿಸಬಲ್ಲಡೆ ಬಚ್ಚಬರಿಯ ಬೆಳಗು ಗುಹೇಶ್ವರನೆಂಬ ಲಿಂಗವು**

ದೇವದರ್ಶನ ಬಯಸಿ ತೀರ್ಥಕ್ಷೇತ್ರಗಳನ್ನು ಸುತ್ತಿದರೂ ಗಂಗೆಯಲ್ಲಿ ಲಕ್ಷ ಲಕ್ಷ ಸಲ ಮಿಂದರು ದೇವದರ್ಶನ ಸಾಧ್ಯವಾಗದು. ವ್ರತ ನೇಮಗಳಿಂದಿಲ್ಲ ದೇವದರ್ಶನ. ವಿಷಯಗಳತ್ತ ಹರಿವ ಮನಸ್ಸನ್ನು ಹಿಡಿದು ನಿಲ್ಲಿಸಬೇಕು. ಆತ್ಮನತ್ತ ಮನವ ಹರಿಸಬೇಕು. ನೆನಹು ಅಖಂಡವಾಗಿರಬೇಕು. ಇದು ಘನ ಧ್ಯಾನದ ಸ್ಥಿತಿ. ಶರಣ ಇಂಥ ಸ್ಥಿತಿಯನ್ನು ಅನುಭವಿಸುತ್ತಾನೆ.

ಗುರು ಕರುಣಿಸಿದ ಇಷ್ಟಲಿಂಗ ಪರಶಿವನ ಚೈತನ್ಯದ ಅರುಹಿನ ಕುರುಹು. ಪೂಜೆಯಲ್ಲಿ ಪೂಜಕ ಪೂಜ್ಯವಸ್ತು ಬೇರೆ ಬೇರೆ ಅಲ್ಲ. ಇಷ್ಟಲಿಂಗ ಪೂಜೆ ಸ್ವಯಂ ಪೂಜೆ ಅದು ಬಾಹ್ಯ ಪೂಜೆಯಲ್ಲ ಇದು ಲಿಂಗಾಯತ ಧರ್ಮದ ವೈಶಿಷ್ಟ್ಯ. ಇಷ್ಟಲಿಂಗ ಪೂಜೆಯನ್ನು ಅಹಂಗ್ರೋಪಾಸನೆ ಎಂದು ಕರೆಯಲಾಗುತ್ತದೆ.

ಆಧ್ಯಾತ್ಮಿಕ ರೂಪದಲ್ಲಿ ಕಂಡ ದೇವರನ್ನು ಇಷ್ಟಲಿಂಗ ರೂಪದಲ್ಲಿ ಅಂಗದ ಮೇಲಿರಿಸಿಕೊಂಡು ಪೂಜಿಸುವವರು ಲಿಂಗಾಯತರು. ಇದು ಬರಿ ಇಷ್ಟಲಿಂಗ ಪೂಜೆಯಲ್ಲ; ಇದು ವಿಶ್ವಚೈತನ್ಯದ ಪೂಜೆ. 'ಸುಪ್ರಭಾತ ಸಮಯದಲ್ಲಿ ಅರ್ತಿಯಲಿ (ಪ್ರೀತಿಯಿಂದ) ಲಿಂಗವ ನೆನೆದರೆ ತಪ್ಪುವವು ಅಪಮೃತ್ಯು' ಎಂಬುದು ಬಸವಣ್ಣನವರ ಹಿತನುಡಿ. ಲಿಂಗಾಯತ ಧರ್ಮದ ಮೂಲತತ್ತ್ವ ಅಂಗ–ಲಿಂಗ ಸಾಮರಸ್ಯ. ಭಕ್ತ ಮತ್ತು ದೇವನೆಂಬ ದ್ವೈತ ಭಾವ ಅಳಿದಾಗ, ಭಕ್ತ ಪರಶಿವನಲ್ಲಿ ಸಮರಸಗೊಂಡು, ಆತನೊಡನೆ ಬೆರೆತು ಒಂದಾಗುತ್ತಾನೆ. ಆಗ ಭಕ್ತ–ದೇವ ಎಂಬ ಉಭಯವಳಿವದು. ಇದು ಜೀವ ಶಿವರ ಏಕತೆ; ಇದು ಅದ್ವೈತ. ಅಂಗನು ಲಿಂಗದಲ್ಲಿ ಬೆರೆತಾಗ ಆತ ಸ್ವಯಂ ಲಿಂಗನಾಗುತ್ತಾನೆ. ಮಾನವ ಮಹಾದೇವನಾಗಲು ಅಂಗಾನುಸಂಧಾನ ಅವಶ್ಯ.

ಲಿಂಗಪೂಜೆಯಲ್ಲಿ ದೃಷ್ಟಿಯೋಗ ಅತ್ಯವಶ್ಯಕ. ಲಿಂಗದಲ್ಲಿ ಅನಿಮಿಷ ದೃಷ್ಟಿಯಾಗಬೇಕು; ಇದು ಸಾಧನೆ. 'ಪ್ರಭುಲಿಂಗಲೀಲೆ'ಯಲ್ಲಿ ಚಾಮರಸ ಕವಿಯ ಒಂದು ಮೌಲಿಕವಾದ ಪದ್ಯ ಹೀಗಿದೆ.

ಆಂಜನೇಯ ನಗರ, ಬೆಳಗಾವಿ–೫೯೦೦೧೬, ಮೊ–೯೨೪೩೨೨೦೨೮೦

**ಆಲಿ ನಿಂದೊಡೆ ಸುಳಿದು ಸೂಸುವ ಗಾಳಿ ನಿಲುವದು**
**ಗಾಳಿ ನಿಲೆ ಮನ ಮೇಲೆ ನಿಲುವದು; ಮನವು ನಿಂದೊಡೆ**
**ಬಿಂದು ನಿಂದಿಹುದು; ಲೀಲೆಯಿಂದ ಬಿಂದು ನಿಂದೊಡೆ**
**ಕಾಲ ಕರ್ಮವ ಗೆದ್ದು ಮಾಯೆಯ ಹೆಸರಿಲ್ಲೆನಿಸಬಹುದೈ**
**ಬಸವ ಕೇಳೆಂದ.**

ದೃಷ್ಟಿಯೋಗದ ಆಲಿಯ ಸ್ತಂಬನ, ಶ್ವಾಸದ ಆರೋಹಣ ಅವರೋಹಣಗಳ ಶುದ್ಧೀಕರಣ, ಚಿತ್ತವೃತ್ತಿಯ ಕೇಂದ್ರೀಕರಣ, ಚಿತ್‌ಪ್ರಭೆಯ ವಿಕಾಸ, ತಾಮಸ ಪ್ರಕೃತಿಯ ಕ್ರಮಗತ ನಿರಸನ, ಸಾಮರಸ್ಯ ಇವುಗಳ ಅಭೂತಪೂರ್ವ ನಿರೂಪಣೆ ಈ ಪದ್ಯದಲ್ಲಿದೆ. ಆಗ ತನು ನಷ್ಟ ಮನ ನಷ್ಟ ನೆನಹು ನಷ್ಟ ಭಾವ ಪರವಶತೆ ಇಲ್ಲಿದೆ.

ದೃಷ್ಟಿಯೋಗದ ಕುರಿತ ಉಲ್ಲೇಖಗಳು ಶರಣರ ವಚನಗಳಲ್ಲಿವೆ; ನೋಡಿ ಬಸವಣ್ಣನವರ ವಚನವನ್ನು

**ಅಂಗಯ್ಯ ಒಳಗಣ ಲಿಂಗವ ನೋಡುತ್ತ**
**ಕಂಗಳು ಕಡೆಗೋಡಿವರಿಯುತ್ತ ಸುರಿಯುತ್ತ ಎಂದಿಪ್ಪೆನೊ?**
**ನೋಟವೆ ಪ್ರಾಣವಾಗಿ ಎಂದಿಪ್ಪೆನೊ?**
**ಕೂಟವೇ ಪ್ರಾಣವಾಗಿ ಎಂದಿಪ್ಪೆನೊ?**

ಮನಸ್ಸನ್ನು ನಿಗ್ರಹಿಸಲು ಕಣ್ಣನ್ನು ಹತೋಟಿಯಲ್ಲಿಡುವದು ಅವಶ್ಯ. ಮನಸ್ಸಿನ ಚಂಚಲತೆಯನ್ನು ನೀಗಲು ಬಸವಣ್ಣನವರು ಲಿಂಗಯ್ಯನ ಮೊರೆ ಹೋಗುತ್ತಾರೆ.

**ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ**
**ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ**
**ಮತ್ತೊಂದ ಕೇಳದಂತೆ ಕಿವಡನ ಮಾಡಯ್ಯ ತಂದೆ**
**ಲಿಂಗವ ಪೂಜಿಸಿ ಫಲವೇನಯ್ಯಾ ಸಮರತಿ ಸಮಕಳೆ**
**ಸಮ ಸುಖವನರಿಯದನ್ನಕ್ಕ? ಲಿಂಗವ ಪೂಜಿಸಿ**
**ಫಲವೇನಯ್ಯಾ ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ?**

ಇದು ಬಸವಣ್ಣನವರ ಪ್ರಶ್ನೆ. ಲಿಂಗಾಂಗ ಸಾಮರಸ್ಯದ ಗುರಿ ಇಲ್ಲದ ಸಾಧನೆ, ಪೂಜೆ ವ್ಯರ್ಥ. ಲಿಂಗಪೂಜೆಗೆ ಲಿಂಗದೀಕ್ಷೆ ಹೊಂದುವದು ಲಿಂಗಾಯತ ಧರ್ಮದಲ್ಲಿ ಕಡ್ಡಾಯ.

**ಲಿಂಗವಿಲ್ಲದೆ ನಡೆವವರ, ಲಿಂಗವಿಲ್ಲದೆ ನುಡಿವವರ**
**ಲಿಂಗವಿಲ್ಲದೆ ಉಗುಳ ನುಂಗಿದಡೆ ಅಂದಂದಿಗೆ**
**ಕಿಲ್ಬಿಷವಯ್ಯಾ.... ಲಿಂಗವಿಲ್ಲದೆ ನಡೆವವರ**
**ಅಂಗ ಮುಟ್ಟಲಾಗದು** (ಬಸವಣ್ಣನವರು)

ಪರಶಿವ ಜಗದ್ವ್ಯಾಪಿ; ಅಷ್ಟೆ ಅಲ್ಲ ಅದಕ್ಕೂ ಮೀರಿ ನಿಂತಿರುವ ಘನಮಹಿಮ. ಶೂನ್ಯವೇ ಮಾನವನ ಪರಮ ಪುರುಷಾರ್ಥ. ಪರಾತ್ಪರ ಪರತತ್ವ, ಅದನ್ನು ಶರಣರು ನಿಷ್ಕಲ ಲಿಂಗ ಶೂನ್ಯಲಿಂಗ, ಬಯಲು, ಆದಿ ಅಂತ್ಯವಿಲ್ಲದ ಮಹಾಬಯಲು ಚಿದಾಕಾಶ, ಅಂತಿಮ ಸತ್ಯ, ಅತ್ಯಂತಿಕ ಸತ್ಯ ಮುಂತಾದ ಅನೇಕ ನಾಮಧೇಯಗಳಿಂದಲೂ ಗುರುತಿಸಿದರು. ಹೀಗೆ ಅಂಗಪದ ವ್ಯಾಪಕ ಅರ್ಥ ಹೊಂದಿದೆ.

ಬಸವಣ್ಣನವರಿಂದ ಪ್ರತಿಪಾದಿತವಾದ ಲಿಂಗಸ್ಥಾವರ ಲಿಂಗವಲ್ಲ; ಗುಡಿಗುಂಡಾರಗಳಲ್ಲಿ ತೀರ್ಥ ಕ್ಷೇತ್ರಗಳಲ್ಲಿ ಸ್ಥಾಪಿತ ಲಿಂಗ ಇಷ್ಟಲಿಂಗವಲ್ಲ; ಅಲ್ಲಿರುವದು ಸ್ಥಾವರಲಿಂಗ ಅದು ಜಡವಸ್ತು. ಇಷ್ಟಲಿಂಗ ಪರಶಿವನ ಕುರುಹು. ಇಷ್ಟಲಿಂಗ ಪೂಜೆ ಸ್ವಯಂ ಪೂಜೆ. ಪೂಜಕ ಪೂಜ್ಯವಸ್ತುವಿನ ಮಧ್ಯೆ ಯಾವುದೇ ಪೂಜಾರಿ ಪುರೋಹಿತರಂಥ ಮಧ್ಯವರ್ತಿ ಇರುವುದಿಲ್ಲ. ಊಟವನು ಬೇರೆ ಮತ್ತೊಬ್ಬರ ಕೈಯಿಂದ ಮಾಡಿಸಬಹುದೆ?

ಶಿವನ ಪೂಜಕರಾದ ಲಿಂಗಾಯತರು ಹಿಂದೂಗಳು ಎಂಬುದು ಹಿಂದೂ ವೈದಿಕ ಧರ್ಮಗುರುಗಳೊಬ್ಬರ ಗ್ರಹಿಕೆ; ಅದು ಸರಿಯಾದುದಲ್ಲ. ಪೂಜ್ಯರ ಹೇಳಿಕೆ ಸಹಸಾ ಮುಗ್ಧ ಲಿಂಗಾಯತರನ್ನು ತಪ್ಪು ದಾರಿಗೆಳೆಸುವ ಕ್ರಮ.

ತಲೆಯಲ್ಲಿ ಗಂಗೆ, ತೊಡೆಯಲ್ಲಿ ಪಾರ್ವತಿ, ಎಡಬಲ ಕುಮಾರ ಗಣಪರು, ಸ್ಮಶಾನವಾಸಿ ಶಿವನ ಭಾವಚಿತ್ರವನ್ನು ಪೂಜಿಸುವವರು ಲಿಂಗಾಯತರಲ್ಲ.

ಲಿಂಗಾಯತರು ಹಿಂದುಗಳ ಆನುವಂಶಿಕರು; ಪಾರ್ಸಿಗಳ ಹಾಗೆ ಅವರೇನು ಭಾರತದ ಹೊರಗಿನಿಂದ ಬಂದವರಲ್ಲ. ಅವರು ಒಂದು ಜನಾಂಗವಾಗಿ ಹಿಂದೂಗಳಾಗಿದ್ದಾರೆ. ಆದರೆ ಒಂದು ಧರ್ಮವಾಗಿ ಅಲ್ಲ. ಅವರಿಗೆ ತಮ್ಮದೆ ಆದ ಧಾರ್ಮಿಕ ವರ್ಗವಾಗಿದೆ; ವಿಶಿಷ್ಟವಾದ ಧಾರ್ಮಿಕ ಚೌಕಟ್ಟಾಗಿದೆ.

ಇಷ್ಟಲಿಂಗ ಒಂದು ಸರ್ವಮಾನ್ಯ, ಸಾರ್ವಕಾಲಿಕ ಶ್ರೇಷ್ಠ ತತ್ವ. ಅದನ್ನು ಅರಿತು ಅಳವಡಿಸಿಕೊಂಡು ಲಿಂಗಾಯತ ಅಥವಾ ಶರಣ ಧರ್ಮವನ್ನು ಸ್ವೀಕಾರಮಾಡಬಯಸುವ ಎಲ್ಲರನ್ನೂ, ಜಾತಿ ಮತ ಪಂಥಗಳನ್ನದೆ ಬಸವ ಧರ್ಮ ಸ್ವಾಗತಿಸುತ್ತದೆ; ಹಿಂದೂ ವೈದಿಕ ಬ್ರಾಹ್ಮಣರನ್ನು ಕೂಡ.

ಇಷ್ಟಲಿಂಗ ಜನಕ ವಿಶ್ವಗುರು ಬಸವಣ್ಣನವರು ಇಷ್ಟಲಿಂಗದ ಮೂಲಕ ನೂತನ ಲಿಂಗಾಯತ ಧರ್ಮವನ್ನು ಪ್ರತಿಷ್ಠಾಪಿಸಿದವರು ಕೂಡ ಬಸವಣ್ಣನವರೆ.

ಇಷ್ಟಲಿಂಗದ ಉಗಮದ ಕುರಿತು ವ್ಯೋಮಮೂರ್ತಿ ಅಲ್ಲಮಪ್ರಭುಗಳು 'ಆದಿಯಲ್ಲಿ ನೀನೆ ಗುರುವಾದ ಕಾರಣ ನಿನ್ನಿಂದ ಹುಟ್ಟಿತ್ತು ಲಿಂಗ' ಎಂದು ಹೇಳಿದರೆ ಅವಿರಳಜ್ಞಾನಿ ಚೆನ್ನಬಸವಣ್ಣನವರು 'ಆದಿ ಬಸವಣ್ಣ ಅನಾದಿ ಲಿಂಗವೆಂದೆಂಬರು

ಹುಸಿ ಹುಸಿ ಈ ನುಡಿಯ ಕೇಳಲಾಗದು; ಆದಿ ಲಿಂಗ ಅನಾದಿ ಬಸವಣ್ಣನು ಎಂದು ಸ್ಪಷ್ಟಪಡಿಸಿದರು. ಲಿಂಗ, ಜಂಗಮ ಪ್ರಸಾದ ಇಂತೀ ತ್ರಿವಿಧಕ್ಕೆ ಬಸವಣ್ಣನೆ ಕಾರಣ.

ಜಾನಪದರು ಕೂಡ, **ಅರಿಯುದಕೆ ಕುರುಹೆಂದು ಕರಲಿಂಗ ನೀ ಕೊಟ್ಟೆ, ಶರಣೆಂಬ ನುಡಿಯನಚಲಮಾಡಿ ಶಿವಮತಕೆ ಗುರುಬಸವಲಿಂಗ ನಿಜಮಂತ್ರ** ಎಂದು ಹಾಡಿದರು.

ಬಸವ ಪೂರ್ವದಲ್ಲಿ ಲಿಂಗವಿತ್ತು; ಅದು ಪೀಠ ಹೊಂದಿದ ಸ್ಥಾವರಲಿಂಗ ಆಗಮಿಕ ಶೈವರು ಭೌತಿಕ ಸ್ವರೂಪದಲ್ಲಿ ಕಲ್ಪಿಸಿದ ಶಿವನನ್ನು ವಿಭಿನ್ನ ಆಕೃತಿಗಳಲ್ಲಿ ಗುಡಿ ಗುಂಡಾರಗಳಲ್ಲಿ ಸ್ಥಾಪಿಸಿಕೊಂಡು ಪೂಜಿಸುವದು ಪ್ರಾಚೀನ ಕಾಲದಲ್ಲಿ ರೂಢಿಗತವಾಗಿ ಬಂದು ಇಂದಿಗೂ ಮುಂದುವರಿದಿದೆ. ಸ್ಥಾವರ ಪೂಜೆ ಹಿಂದೂ ಶೈವ ಧರ್ಮದ ಲಕ್ಷಣ.

ಶೈವ ಧರ್ಮವನ್ನು ವೈಭವೀಕರಿಸುವ ಸುಂದರವಾದ ಬೃಹತ್ ದೇವಾಲಯಗಳು ದಕ್ಷಿಣ ಭಾರತದಲ್ಲಿ ವಿಶೇಷವಾಗಿ ತಮಿಳು ನಾಡಿನಾದ್ಯಂತ ಹರಡಿವೆ. ಶೈವರು ದೇವರನ್ನು ಬಾಹ್ಯದಲ್ಲಿ ಕಾಣುವಂಥವರು. ಲಿಂಗಾಯತರು ತಮ್ಮ ಇಷ್ಟದೇವತೆಯನ್ನು ಅಂತರಂಗದಲ್ಲಿ ಕಾಣುವ ಸಾಧಕರು. ಲಿಂಗಾಯತರು ಪೂಜಿಸುವ ಇಷ್ಟಲಿಂಗ ದೇವಾಲಯಗಳಲ್ಲಿಲ್ಲ. ತೀರ್ಥಕ್ಷೇತ್ರಗಳಲ್ಲೂ ಇಲ್ಲ. ಇಷ್ಟಲಿಂಗ ಲಿಂಗಾಯತ ಭಕ್ತನ ಎದೆಯ (ಅಂಗದ) ಮೇಲಿದೆ.

ಅನುಭಾವ ಅನುಸಂಧಾನ ಮತ್ತು ಅಂಗಾನುಭೂತಿ ಪ್ರಧಾನವಾದ ಲಿಂಗಾಯತ ಧರ್ಮವು ವಿಶ್ವಧರ್ಮವಾಗುವ ಎಲ್ಲ ಲಕ್ಷಣಗಳನ್ನು ಹೊಂದಿದೆ. ಇಷ್ಟಲಿಂಗವೇ ಸರ್ವಕ್ಕೂ ಕಾರಣ.

■■

## ಶರಣರ ಅದ್ಭುತ ಕ್ರಾಂತಿ

ಹನ್ನೆರಡನೆಯ ಶತಮಾನದ ಶಿವಶರಣರು ಕೇವಲ ಆಧ್ಯಾತ್ಮಿಕ ಸಾಧನೆಯಿಂದ ಮಾತ್ರವಲ್ಲ, ಸಾಮಾಜಿಕ ಸುಧಾರಣೆಯ ದೃಷ್ಟಿಯಿಂದಲೂ ನಮಗೆ ಬಹುಮುಖ್ಯವಾಗುತ್ತಾರೆ. ಅವರು ಆತ್ಮಕಲ್ಯಾಣದ ಜೊತೆಗೆ ಸಮಾಜಕಲ್ಯಾಣವನ್ನು ಸಾಧಿಸಬೇಕೆಂಬ ಆಶಯ ಹೊಂದಿದ್ದರು. ಸಮಾಜದ ಅಂಗವಾಗಿರುವ ವ್ಯಕ್ತಿಯಲ್ಲಿ ಪರಿವರ್ತನೆಯನ್ನು ತರುವ ಮೂಲಕ ಆದರ್ಶ ಸಮಾಜದ ನಿರ್ಮಾಣ ಸಾಧ್ಯವೆಂಬುದನ್ನು ಸಾಧಿಸಿ ತೋರಿಸಿದರು. ವ್ಯಕ್ತಿಗತ ಹಿತಾಸಕ್ತಿಗಾಗಿ ಅವರೆಂದೂ ಹಾತೊರೆಯಲಿಲ್ಲ. ಸಮಷ್ಟಿ ಹಿತವನ್ನೇ ತಮ್ಮ ಬದುಕಿನ ಧ್ಯೇಯವಾಗಿಸಿಕೊಂಡ ಅವರು ಆ ದಿಶೆಯಲ್ಲಿ ಅದ್ಭುತವಾದ ಕಾರ್ಯಮಾಡಿದರು.

ಮಹಾನ್ ವ್ಯಕ್ತಿಗಳು ಮೊದಲು ತಮ್ಮ ಆತ್ಮಶುದ್ಧಿಯನ್ನು ಮಾಡಿಕೊಳ್ಳುತ್ತಾರೆ. ತಮ್ಮ ಅಂತರಂಗವನ್ನು ಅನಾವರಣಗೊಳಿಸಿಕೊಳ್ಳುವ ಮೂಲಕ ಆ ಪರಿಶುದ್ಧಿಯನ್ನು ಸಾಧಿಸುತ್ತಾರೆ. 'ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯ, ವಿಚಾರಿಸಿದಡೆ ಹುರುಳಿಲ್ಲವಯ್ಯ', 'ಇಂದಿಗೆಂತು ನಾಳಿಗೆಂತು ಎಂದು ಬೆಂದೊಡಲ ಹೊರೆಯ ಹೋಯಿತ್ತೆನ್ನ ಸಂಸಾರ' ಮುಂತಾದ ವಚನಗಳ ಸಾಲುಗಳಲ್ಲಿ ಬಸವಾದಿ ಶರಣರು ತಮ್ಮನ್ನು ಮೊದಲು ಪಾರದರ್ಶಕವಾಗಿಸಿಕೊಂಡಿರುವುದನ್ನು ಕಾಣುತ್ತೇವೆ. ಹೀಗೆ ಪ್ರತಿಯೊಬ್ಬರೂ ಆತ್ಮಶುದ್ಧಿಯ ಮೂಲಕ ಆತ್ಮಬಲವನ್ನು ಹೊಂದಿ ಅದನ್ನು ಸಮಾಜದ ಹಿತಕ್ಕಾಗಿ ಬಳಸಬೇಕೆಂಬ ಸಂದೇಶವನ್ನು ಅವರು ಸಾರಿದ್ದಾರೆ.

ಶರಣರು ಸಾರಿದ ಸಂದೇಶಗಳು ಸಾರ್ವಕಾಲಿಕವಾಗಿವೆ, ವ್ಯಕ್ತಿ ಮತ್ತು ಸಮಾಜದ ಹಿತ ಸಾಧನೆಗೆ ಪೂರಕವಾಗಿವೆ. ಜಾತಿ ಮತ ಪಂಥಗಳ ಹೆಸರಿನಲ್ಲಿ, ವ್ಯಕ್ತಿ-ವ್ಯಕ್ತಿಗಳಲ್ಲಿ ಮೇಲು ಕೀಳುಗಳನ್ನು ಕಲ್ಪಿಸುವುದು ಸಲ್ಲದು, ಮಾನವ ಮಾತ್ರರೆಲ್ಲರೂ ಸಮಾನರು. ಎಲ್ಲರಲ್ಲಿಯೂ ಅದೇ ರಕ್ತ ಮಾಂಸಗಳಿದ್ದು, ಎಲ್ಲರ ಜನನವೂ ಒಂದೇ ರೀತಿಯಲ್ಲಾಗಿದೆ. 'ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ? ಎಂದು ಪ್ರಶ್ನಿಸುವ ಅವರು ವ್ಯಕ್ತಿಗಳು ಬದುಕಿನ ನಿರ್ವಹಣೆಗಾಗಿ ಕೈಕೊಳ್ಳುವ ಕಾಯಕದಲ್ಲಿಯೂ ಮೇಲುಕೀಳುಗಳನ್ನೆಣಿಸಬಾರದೆನ್ನುತ್ತಾರೆ. ಕಾಯಕವು ಸತ್ಯ ಶುದ್ಧವಾದುದು. ಭೌತಿಕ ಸಂಪತ್ತು ಕ್ಷಣಿಕವಾದುದು; ಅದರಿಂದಲೇ ಸುಖಪ್ರಾಪ್ತಿ ಎಂಬುದು ಅಜ್ಞಾನ. ಸತ್ಯದ ನಿಲವನರಿಯಲು ಪ್ರತಿಯೊಬ್ಬರೂ ಪ್ರಯತ್ನಿಸಬೇಕು. ಸತ್ಯವೇ ಶಿವ ಮತ್ತು ಸೌಂದರ್ಯ. ಮೂರ್ತಿಪೂಜೆ, ಬಹುದೇವತೆಗಳ ಉಪಾಸನೆಗಳು ಅಂಧಶ್ರದ್ಧೆಯ ಪ್ರತೀಕ. ದೇವರು ಕೇವಲ ದೇವಾಲಯಗಳಲಿಲ್ಲ. ಅವನು ಸರ್ವವ್ಯಾಪಿ. ಜಗದಗಲ, ಮುಗಿಲಗಲ ಅವನ ಸ್ವರೂಪ. ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ. ಪತಿವ್ರತೆಗೆ ಗಂಡನೊಬ್ಬನೇ ಇರುವಂತೆ ದೇವನೊಬ್ಬನೆ ಇದ್ದಾನೆ. ನಮ್ಮ ಅಜ್ಞಾನ ಹಾಗು ವಿಕೃತಿಗಳನ್ನು ಕಳೆದುಕೊಳ್ಳುವ ಮೂಲಕ ಸಂಸಾರದಲ್ಲಿದ್ದುಕೊಂಡೇ ಸದ್ಗತಿಯನ್ನು ಸಾಧಿಸಬೇಕು. ಹೀಗೆ ಸಂಸಾರದ ತಳಹದಿಯ ಮೇಲೆ ಭವ್ಯ ಆಧ್ಯಾತ್ಮಿಕ ಸೌಧವನ್ನು ನಿರ್ಮಿಸುವ ಮಹೋನ್ನತ ವಿಚಾರಗಳನ್ನು ಜನಮಾನಸದಲ್ಲಿ ತುಂಬುವ ಮೂಲಕ ಅದ್ಭುತ ಕ್ರಾಂತಿಯನ್ನೇ ಮಾಡಿದವರು ಶಿವಶರಣರು.

# ಶರಣರು ಮತ್ತು ಆಹಾರ ಸಂಸ್ಕೃತಿ

● ಎ. ಕೆ. ಜಯವೀರ

೧೯೮೬ರಲ್ಲಿ ನಾಗನೂರು ಶ್ರೀ ಶಿವಬಸವ ಸ್ವಾಮಿಗಳ ಕಲ್ಯಾಣ ಕೇಂದ್ರ, ಬೆಂಗಳೂರು ಇವರ ಆಶ್ರಯದಲ್ಲಿ ಒಂದು ವಿಚಾರ ಸಂಕಿರಣ ಏರ್ಪಟ್ಟಿತ್ತು. ಈ ಸಂದರ್ಭದಲ್ಲಿ ಮಂಡನೆಯಾದ ಪ್ರಬಂಧಗಳನ್ನು ಡಾ. ಸಾ. ಶಿ. ಮರುಳಯ್ಯ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಗದುಗಿನ ಜಗದ್ಗುರು ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರ ಆಶೀರ್ವಚನ ಪ್ರಕಟವಾಗಿದೆ. ಆ ಭಾಷಣದಲ್ಲಿ ಶ್ರೀಗಳು "ಲಿಂಗಾಯತ ಧರ್ಮ ಆಹಾರ ಸಂಸ್ಕೃತಿ ಕಾರಣವಾಗಿ ಇಂದು ಹಿಂದುಳಿದಿದೆ. ಹಿರಿಯ ಚಿಂತಕ ಡಾ. ದೇ. ಜವರೇಗೌಡ ಅವರು ಒಮ್ಮೆ ನಮ್ಮನ್ನು ಭೇಟಿಯಾಗಿ, ದಕ್ಷಿಣ ಕರ್ನಾಟಕದ ಲಕ್ಷಾಂತರ ಜನ ಲಿಂಗಾಯತ ಧರ್ಮ ಸ್ವೀಕರಿಸಲು ಸಿದ್ಧರಿದ್ದಾರೆ; ಆದರೆ ಅವರ ಆಹಾರ ಸಂಸ್ಕೃತಿಗೆ ತಾವು ಕಡಿವಾಣ ಹಾಕಬಾರದು, ಎಂದು ಹೇಳಿದರು. ಮಾಂಸಾಹಾರ ಸೇವನೆಗೆ ತಾವು ಒಪ್ಪಿಗೆ ನೀಡಿದರೆ, ಲಕ್ಷಾಂತರ ಜನ ಲಿಂಗಾಯತಧರ್ಮವನ್ನು ಸ್ವೀಕರಿಸಲು ತುದಿಗಾಲ ಮೇಲೆ ನಿಂತಿದ್ದಾರೆ' ಎಂದು ಹೇಳಿದಾಗ, ನಮ್ಮ ಸಮಾಜದ ಹಿರಿಯರು ಈ ಕುರಿತು ಗಂಭೀರವಾಗಿ ಆಲೋಚಿಸಬೇಕು" ಎಂದು ಮೂವತ್ತು ಮೂರು ವರುಷಗಳ ಹಿಂದೆ ಹೇಳಿದ ಮಾತುಗಳು ಇಂದಿಗೂ ಅಷ್ಟೇ ಪ್ರಸ್ತುತವಾಗಿವೆ ಎಂಬುದನ್ನು ಗಮನಿಸಬೇಕು.

ಇಂದು ಆಹಾರ ಸಂಸ್ಕೃತಿ ಕುರಿತು ತುಂಬ ಚರ್ಚೆ ನಡೆಯುತ್ತಿದೆ. ಲಿಂಗಾಯತ ಧರ್ಮದಲ್ಲಿಯೂ ಈ ಆಹಾರ ಸಂಸ್ಕೃತಿಯು ಕುರಿತು ಆಗಾಗ ವಾದ-ವಿವಾದಗಳು ನಡೆಯುತ್ತಿವೆ. ಕೆಲವು ವರ್ಷಗಳ ಹಿಂದೆ ಚಿತ್ರದುರ್ಗದ ಮುರುಘಾಮಠದ ಡಾ. ಶಿವಮೂರ್ತಿ ಮುರುಘಾ ಶರಣರು 'ಬಸವ ಧರ್ಮ' ಎಂಬ ಹೊಸಧರ್ಮದ ಘೋಷಣೆ ಮಾಡಿ, ಈ ಧರ್ಮದಲ್ಲಿ ಮಾಂಸಾಹಾರಿಗಳಿಗೂ ಪ್ರವೇಶವಿದೆ ಎಂದು ಹೇಳಿದಾಗ ನಾಡಿನ ತುಂಬ ಚರ್ಚೆಯಾಯಿತು. ಆದರೆ ಅವರ ಪ್ರಯತ್ನ ಯಶಸ್ವಿಯಾಗಲಿಲ್ಲ.

ಈಗ 'ಮತ್ತೆ ಕಲ್ಯಾಣ' ಕಾರ್ಯಕ್ರಮ ಸಂದರ್ಭದಲ್ಲಿ 'ಶರಣರ ಆಹಾರ ಸಂಸ್ಕೃತಿ' ಕುರಿತು ಮಾಧ್ಯಮಗಳಲ್ಲಿ ಚರ್ಚೆ ಪ್ರಾರಂಭವಾಗಿದೆ. ಬಸವಣ್ಣ-ಚನ್ನಬಸವಣ್ಣ-ಅಕ್ಕಮಹಾದೇವಿ ಅವರಂಥ ಮೇಲ್ವರ್ಗದವರು, ಕಾಳವ್ವೆ, ಅಂಬಿಗರ ಚೌಡಯ್ಯ, ಸಮಗಾರ ಹರಳಯ್ಯನಂತಹ ಕೆಳವರ್ಗದವರು ಅನುಭವ ಮಂಟಪದಲ್ಲಿ ಕೂಡಿಯೇ ಚರ್ಚಿಸುತ್ತಿದ್ದರು. ಹೀಗಾಗಿ ಅವರವರ ಆಹಾರ ಸಂಸ್ಕೃತಿ ಕುರಿತು ಖಂಡಿತವಾಗಿಯೂ ಅಲ್ಲಿ ಮೊದಲು ಚರ್ಚೆಯಾಗಿದೆ.

**ಎಡದ ಕೈಯಲ್ಲಿ ಕತ್ತಿ, ಬಲದ ಕೈಯಲ್ಲಿ ಮಾಂಸ**
**ಬಾಯಲಿ ಸುರೆಯಗಡಿಗೆ, ಕೊರಳಲಿ ದೇವರಿರಲು**
**ಅವರ ಲಿಂಗನೆಂಬೆ, ಸಂಗವೆಂಬೆ,**
**ಕೂಡಲಸಂಗಮದೇವಾ, ಅವರ ಮುಖಲಿಂಗಿಗಳೆಂಬೆನು**

ಬಸವಣ್ಣನವರು ಎಲ್ಲವರ್ಗದವರನ್ನು ತಮ್ಮ ಧರ್ಮದೊಳಗೆ ಬರಮಾಡಿಕೊಳ್ಳುವ ಉದ್ದೇಶದಿಂದಲೇ, ನಿಮ್ಮ ನಿಮ್ಮ ಆಹಾರ ಸಂಸ್ಕೃತಿ ನಿಮಗಿರಲಿ, ನೀವು ಒಂದು ಕೈಯಲ್ಲಿ ಕತ್ತಿ, ಇನ್ನೊಂದು ಕೈಯಲ್ಲಿ ಮಾಂಸ, ಬಾಯಲ್ಲಿ ಸುರೆಯ ಗಡಿಗೆ ಇಟ್ಟುಕೊಂಡಿದ್ದರೂ ಪರವಾಗಿಲ್ಲ; ಕೊರಳಲ್ಲಿ ಲಿಂಗವಿರಲಿ. ಹೀಗೆ ಲಿಂಗಧ'ರಿಸಿದರೆ, ನೀವು ಲಿಂಗಾಯತರಾದಂತೆಯೇ. ಲಿಂಗಧರಿಸಿದ ನಿಮ್ಮನೆಲ್ಲ ಲಿಂಗಮುಖಿಗಳೆಂದು ಗೌರವಿಸುವೆ ಎಂದು ಬಸವಣ್ಣನವರು ಅತ್ಯಂತ ಸರಳವಾಗಿ ಹೇಳಿದ್ದಾರೆ.

**ಕೊಲುವವನೇ ಮಾದಿಗ, ಹೊಲಸು ತಿಂಬವವನೇ**
**ಹೊಲೆಯ**
**ಸಕಲ ಜೀವಾತ್ಮರಿಗೆ ಲೇಸನೆ ಬಯಸುವ**
**ನಮ್ಮ ಕೂಡಲಸಂಗನ ಶರಣರೇ ಕುಲಜರು**

ವರ್ತಮಾನದ ಸಂದರ್ಭದಲ್ಲಿ ಈ ವಚನವನ್ನು ಕುರಿತು ಇನ್ನಷ್ಟು ವ್ಯಾಪಕವಾದ ಚರ್ಚೆ ನಡೆಯಬೇಕಾದ ಅನಿವಾರ್ಯತೆ ಇದೆ. ಏಕೆಂದರೆ ಬಸವಣ್ಣನವರು ಕೊಲುವವನೇ ಮಾದಿಗ ಎನ್ನುತ್ತಾರೆ. ೧೨ನೇ ಶತಮಾನದಲ್ಲಿ ಶ್ರೇಣೀಕೃತ

**ಸಂಶೋಧನಾರ್ಥಿ, ಕನ್ನಡ ಅಧ್ಯಾಪಕರು, ಜೆ. ಪಿ. ಎಸ್. ಪದವಿ ಕಾಲೇಜು, ಪರಮಾನಂದವಾಡಿ**

ಸಮಾಜದಲ್ಲಿ ದಲಿತವರ್ಗದ ಶೂದ್ರ-ಪಂಚಮ ಎನಿಸಿಕೊಂಡಿತ್ತು. ಅವರು ಮೇಲ್ವರ್ಗದವರ ಮನೆಯಲ್ಲಿ ದನಗಳು ಸತ್ತಾಗ, ಅವುಗಳನ್ನು ತಂದು ಆಹಾರವಾಗಿ ಸ್ವೀಕರಿಸುತ್ತಿದ್ದರು. ಪ್ರಾಣಿಗಳನ್ನು ಅವರು ಕೊಂದು ತಿನ್ನುವವರಲ್ಲ; ಆಕಸ್ಮಿಕವಾಗಿ ದನಕರುಗಳು ಸತ್ತ ನಂತರ ಅವುಗಳನ್ನು ತಂದು ತಿನ್ನುವವರು. ಆದರೆ ಮೇಲ್ವರ್ಗದವರು ದೇವರು-ಧರ್ಮದ ಹೆಸರಿನಲ್ಲಿ ಜೀವಂತ ಗೋವುಗಳನ್ನು ಬಲಿಕೊಟ್ಟು ಅದರ ಆಹಾರ ಸ್ವೀಕರಿಸುವರು. ಅದಕ್ಕಾಗಿ ಬಸವಣ್ಣನವರು ಇಲ್ಲಿ ಜೀವಂತ ಪ್ರಾಣಿಗಳನ್ನು ಉದ್ದೇಶಪೂರ್ವಕವಾಗಿ ದೇವರು-ಧರ್ಮದ ಹೆಸರಿನಲ್ಲಿ ಕೊಂದು ತಿನ್ನುವ ಮೇಲ್ವರ್ಗದ ವೈದಿಕ ಧರ್ಮದವರೇ ನಿಜವಾದ ಮಾದಿಗರು ಎನ್ನುವ ಮಾತನ್ನು ಸ್ಪಷ್ಟವಾಗಿ ತಿಳಿಸುತ್ತಾರೆ.

**ಏನಯ್ಯಾ ವಿಪ್ರರು ನುಡಿದಂತೆ ನಡೆಯರು, ಇದೆಂತಯ್ಯಾ? ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ! ಕೂಡಲಸಂಗಮದೇವಯ್ಯ, ಹೊಲೆಯರ ಬಸುರಲ್ಲಿ ವಿಪ್ರರು ಹುಟ್ಟಿ ಗೋಮಾಂಸ ತಿಂಬರೆಂಬುದಕ್ಕೆ ಇದೆ ದೃಷ್ಟ.**

ಬಸವಣ್ಣನವರು ಈ ವಚನದಲ್ಲಿ ಇನ್ನೂ ಈ ವಿಷಯವಾಗಿ ಸ್ಪಷ್ಟಪಡಿಸುತ್ತಾರೆ. ವಿಪ್ರಕುಲದವರು ತಮಗೊಂದು ಶಾಸ್ತ್ರ, ಉಳಿದವರಿಗೊಂದು ಶಾಸ್ತ್ರ ಎಂಬಂತೆ ನಡೆದುಕೊಳ್ಳುತ್ತಾರೆ. ಮನುವಿನ ಕಾಲದಲ್ಲಿ ವೈದಿಕರೆಲ್ಲ ಗೋಮಾಂಸ ಭಕ್ಷಣೆ ಮಾಡುತ್ತಿದ್ದರು. ಬೌದ್ಧಧರ್ಮ ಉಚ್ಛ್ರಾಯ ಸ್ಥಿತಿ ತಲುಪಿದಾಗ, ವೈದಿಕಧರ್ಮದ ಅವನತಿ ಪ್ರಾರಂಭವಾಯಿತು. ಆ ಸಂದರ್ಭದಲ್ಲಿ ಅವರು ಗೋಮಾಂಸ ಭಕ್ಷಣೆ ಬಿಟ್ಟರೆಂದು ಡಾ. ಅಂಬೇಡ್ಕರ್ ಅವರು ತಮ್ಮ ಬರಹಗಳಲ್ಲಿ ಮೇಲಿಂದ ಮೇಲೆ ಪ್ರಸ್ತಾಪಿಸಿದ್ದಾರೆ. ಬಸವಣ್ಣನವರ ಒಂದು ವಚನದಲ್ಲಿ 'ಬಡಗಿ ಮಾಚಲದೇವಿ'ಯನ್ನು ಕುಲಜೆಯನ್ನಾಗಿ ಮಾಡಲು ವಿಪ್ರರು ಮಾಡಿದ ತಂತ್ರ-ಕುತಂತ್ರಗಳ ಪ್ರಸ್ತಾಪವಿದೆ. ಹೀಗೆ ವೈದಿಕರು ತಮಗೊಂದು, ಬೇರೆಯವರಿಗೊಂದು ರೀತಿ ನಡೆದುಕೊಳ್ಳುತ್ತಾರೆ ಎಂದು ಬಸವಣ್ಣನವರು ಇಲ್ಲಿ ವಿವರಿಸಿದ್ದಾರೆ.

**ಕುರಿ ಕೋಳಿ ಕಿರಿಮೀನು ತಿಂಬವರಿಗೆಲ್ಲ ಕುಲಕುಲಜರೆಂದೆಂಬರು ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳುಜಾತಿಯೆಂಬರು. ಅವರೆಂತು ಕೀಳುಜಾತಿಯಾದರು? ಜಾತಿಗಳು ನೀವೇಕೆ ಕೀಳಾಗಿರೊ? ಬ್ರಾಹ್ಮಣನುಂಡುದು ಪುಲ್ಲಿಗೆ ಶೋಭಿತವಾಗಿ ನಾಯಿ ನೆಕ್ಕಿ ಹೋಯಿತು. ಮಾದಿಗರುಂಡುದು ಪುಲ್ಲಿಗೆ ಬ್ರಾಹ್ಮಣಗೆ ಶೋಭಿತವಾಯಿತು. ಅಂದೆಂತೆಂದಡೆ : ಸಿದ್ದಲಿಕೆಯಾಯಿತು, ಸಗ್ಗಳೆಯಾಯಿತು. ಸಿದ್ದಲಿಕೆಯ ತುಪ್ಪವನ್ನು, ಸಗ್ಗಳೆಯ ನೀರನು ಶುದ್ಧವೆಂದು ಕುಡಿವ ಬುದ್ಧಿಗೇಡಿ ವಿಪ್ರರಿಗೆ ನಾಯಕ ನರಕ ತಪ್ಪದಯ್ಯಾ ಉರಿಲಿಂಗಪೆದ್ದಿಗಳರಸು ಒಲ್ಲನಯ್ಯ**

ಬಸವಣ್ಣನವರ ಕಾಲದಲ್ಲಿ ಕೆಳವರ್ಗದ ಕಾಳವ್ವೆ ಎಂಬ ಶರಣೆ ಒಂದು ವಚನದಲ್ಲಿ ಅದ್ಭುತ ಪ್ರಶ್ನೆಯನ್ನು ಎತ್ತುತ್ತಾಳೆ. ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಕುರಿ ಕೋಳಿ ಮೀನು ತಿನ್ನುವರನ್ನು ಕುಲಜರೆಂದು, ಪರಮಾತ್ಮನ ಪಂಚಾಭಿಷೇಕಕ್ಕೆ ಸಲ್ಲುವ ಹಾಲನ್ನು ಕೊಡುವ ಆಕಳನ್ನು ತಿನ್ನುವವರನ್ನು ಕೀಳು ಎನ್ನುವರು. ಅವರು ಹೇಗೆ ಕುಲಜರಾದರು; ಇವರು ಹೇಗೆ ಕೀಳಾದರು ಎಂದು ನೇರವಾಗಿ ಪ್ರಶ್ನೆ ಮಾಡುತ್ತಾಳೆ. ದಲಿತರು ಸಿದ್ಧಪಡಿಸುವ ಸಿದ್ದಲಿಕೆಯಲ್ಲಿ (ಚರ್ಮದಿಂದ ತಯಾರಿಸಿದ ಒಂದು ವಸ್ತು) ತುಪ್ಪವನ್ನು ನೀರನ್ನು ಸಂಗ್ರಹಿಸಿ ಕುಡಿಯುವ ವಿಪ್ರರು ಹೇಗೆ ಕುಲಜರಾಗುತ್ತಾರೆ ಎಂದು ಕೇಳುವಲ್ಲಿ ಕಾಳವ್ವೆ ಆಹಾರ ಸಂಸ್ಕೃತಿಗೆ ಒಂದು ಅನನ್ಯವಾದ ಕಾಣಿಕೆ ಸಲ್ಲಿಸಿದ್ದಾಳೆ ಎಂದು ಹೇಳಬಹುದು. ಇದೇ ಹಾದಿಯಲ್ಲಿ ಅಂಬಿಗರ ಚೌಡಯ್ಯನವರ ವಚನವು ಹೀಗೆ ಸಾಗುತ್ತದೆ:

**ಕುರಿ ಕೋಳಿ ಕಿರಿಮೀನು ತಿಂಬವರ ಊರೊಳಗೆ ಇರು ಎಂಬರು. ಅಮೃತಾನ್ನವ ಕರೆವ ಗೋವ ತಿಂಬವರ ಊರಿಂದ ಹೊರಗಿರು ಎಂಬರು. ಆ ತನು ಹರಿಗೋಲಾಯಿತ್ತು. ಬೊಕ್ಕಣ, ಸಿದ್ಧಿಗೆ, ಬಾರುಕೋಲು, ಪಾದರಕ್ಷೆ ದೇವರ ಮುಂದೆ ಬಾರಿಸುವುದಕ್ಕೆ ಮದ್ದಳೆಯಾಯಿತ್ತು. ಈ ಬುದ್ದಲಿಕೆಯೊಳಗಣ ತುಪ್ಪವ ಶುದ್ಧ ಮಾಡಿ ತಿಂಬ ಗುಜ್ಜ ಹೊಲೆಯರ ಕಂಡಡೆ ಉದ್ದನ ಚಮ್ಮಾಳಿಗೆಯ ತಕ್ಕೊಂಡು ಬಾಯ ಕೊಯ್ಯುವನು ಎಂದಾತ ನಮ್ಮ ಅಂಬಿಗರ ಚೌಡಯ್ಯ**

ಕಾಳವ್ವೆಯ ಮುಂದುವರಿದ ಭಾಗವನ್ನು ಈ ವಚನದಲ್ಲಿ ನೋಡುತ್ತೇವೆ. ದೇವರ ಮುಂದೆ ಬಾರಿಸುವ ಮದ್ದಳೆ ಕೂಡ ಪ್ರಾಣಿಗಳ ಚರ್ಮದಿಂದಲೇ ಮಾಡಿದ್ದು, ಮನುಷ್ಯರು ಧರಿಸುವ ಪಾದರಕ್ಷೆ ಕೂಡ ಚರ್ಮದ್ದು ಹೀಗಿದ್ದೂ ಭೇದ ಮಾಡುವವರನ್ನು ಚಮ್ಮಾವುಗೆಯಿಂದ ಹೊಡೆಯಬೇಕೆಂದು ಕರೆಕೊಡುತ್ತಾನೆ.

ಇದು ಕೆಳವರ್ಗದ ವಚನಕಾರರ ದೃಷ್ಟಿಕೋನವಾದರೆ, ಇನ್ನು ಮೇಲ್ವರ್ಗದಲ್ಲಿ ಹುಟ್ಟಿ ಬಂದ ಅಕ್ಕಮಹಾದೇವಿ, ಚನ್ನಬಸವಣ್ಣನವರ ಆಹಾರದ ವಿಚಾರಗಳು ಸ್ವಲ್ಪ ಭಿನ್ನವಾಗಿರುವುದನ್ನು ಈಗ ನೋಡೋಣ

'ದೇಹವು' ಎಲ್ಲಾ ಸಾಧನೆಗೆ ಆಧಾರ. ಇಂತಹ ದೇಹದ ಸದುಪಯೋಗವನ್ನು ತಿಳಿಯದೆ ನಾವು ಅದನ್ನು ವಿಪರೀತ ಉಪಯೋಗಿಸಿ ದುರ್ಬಲವಾಗಿಸಿದ್ದೇವೆ. ದೈಹಿಕ ಅನಾರೋಗ್ಯಕ್ಕೆ ಒತ್ತಡದ ಬದುಕು, ಶುಚಿತ್ವವಿಲ್ಲದ ಪರಿಸರ, ವಿರುದ್ಧ ಆಹಾರ ಮತ್ತು ವಿರುದ್ಧ ವಿಹಾರಗಳು ಕಾರಣವಾಗಿವೆ. ನಾವಿಂದು ರೋಗ ನಿರ್ನಾಮಕ್ಕೆ ಕಾಯದೆ ತಾತ್ಕಾಲಿಕ ಪರಿಹಾರಕ್ಕೆ ಗಂಟು ಬಿದ್ದು, 'ನಿರಂತರ ಔಷಧ ಸೇವನೆಯೇ ಆರೋಗ್ಯ' ಎಂಬ ಹಂತಕ್ಕೆ ಬಂದು ನಿಂತಿದ್ದೇವೆ. ಇದು ನಮ್ಮ ದುರ್ದೈವ. ಶರಣರು ದೇಹವನ್ನು ಶೋಷಣೆಯ ವಸ್ತುವನ್ನಾಗಿ ಬಳಸದೆ 'ಪ್ರಸಾದಕಾಯ'ವನ್ನಾಗಿ ಕಂಡು ಅದರ ಮೌಲ್ಯವನ್ನು ಹೆಚ್ಚಿಸಿದರು. 'ಕೂಡಲಸಂಗನನೊಲಿಸಬಂದ ಪ್ರಸಾದ ಕಾಯವ ಕೆಡಿಸಲಾಗದು' ಎಂದು ಗುರು ಬಸವಣ್ಣನವರು ಈ ವಿಚಾರವನ್ನು ಅನುಮೋದಿಸುತ್ತಾರೆ. ದೇಹವು ಸಮತೋಲನವನ್ನು ಕಾಪಾಡಿಕೊಳ್ಳಬೇಕೆಂದರೆ ನಮ್ಮ ಜೀವನ ಕ್ರಮಬದ್ಧವಾಗಿರಬೇಕು. ಜೀವನಕ್ಕೆ ಬೇಕಾದ ಅತೀ ಮುಖ್ಯ ಧಾತುವೆಂದರೆ 'ಆಹಾರ'. ಆಹಾರ ನಮಗೆ ರೋಗವನ್ನೂ ತರಬಹುದು ಅಥವಾ ನಿರೋಗಿಯಾಗಿಯೂ ಇರಿಸಬಹುದು. ಇದನ್ನೇ ಶರಣೆ ಅಕ್ಕಮಹಾದೇವಿಯವರು ತಮ್ಮ ವಚನದಲ್ಲಿ ಸವಿಸ್ತಾರವಾಗಿ ಚಿತ್ರಿಸಿದ್ದಾರೆ–

> **ಆಹಾರವ ಕಿರಿದು ಮಾಡಿರಣ್ಣಾ, ಆಹಾರವ ಕಿರಿದು ಮಾಡಿ. ಆಹಾರದಿಂದ ವ್ಯಾಧಿ ಹಬ್ಬಿ ಬಲಿವುದಯ್ಯಾ. ಆಹಾರದಿಂ ನಿದ್ರೆ, ನಿದ್ರೆಯಿಂ ತಾಮಸ ಅಜ್ಞಾನ, ಮೈಮರಹು, ಅಜ್ಞಾನದಿಂ ಕಾಮವಿಕಾರ ಹೆಚ್ಚಿ, ಕಾಯವಿಕಾರ, ಮನೋವಿಕಾರ, ಇಂದ್ರಿಯವಿಕಾರ, ಭಾವವಿಕಾರ, ವಾಯು ವಿಕಾರವನುಂಟುಮಾಡಿ, ಸೃಷ್ಟಿಗೆ ತಹುದಾದ ಕಾರಣ ಕಾಯದ ಅತಿಪೋಷಣೆ ಬೇಡ. ಅತಿ ಪೋಷಣೆ ಮೃತ್ಯುವೆಂದುದು. ಜಪ ತಪ ಧ್ಯಾನ ಧಾರಣ ಪೂಜೆಗೆ ಸೂಕ್ಷ್ಮದಿಂ ತನುಮಾತ್ರವಿದ್ದರೆ ಸಾಲದೆ? ತನುವ ಪೋಷಿಸುವ ಆಸೆ ಯತಿತ್ವಕ್ಕೆ ವಿಘ್ನವೆಂದುದು. ತನು ಪೋಷಣೆಯಿಂದ ತಾಮಸ ಹೆಚ್ಚಿ, ಅಜ್ಞಾನದಿಂ ವಿರಕ್ತಿ ಹಾನಿ, ಅರಿವು ನಷ್ಟ, ಪರವು ದೂರ, ನಿರಕೆ ನಿಲವಿಲ್ಲದ ಕಾರಣ. ಚೆನ್ನಮಲ್ಲಿಕಾರ್ಜುನನೊಲಿಸ ಬಂದ ಕಾಯವ ಕೆಡಿಸದೆ ಉಳಿಸಿಕೊಳ್ಳಿರಯ್ಯಾ.**

ಯಾವುದೇ ವಸ್ತು ಅತೀಯಾದಾಗ ಅದರಿಂದ ತೊಂದರೆ ಸರ್ವೇ ಸಾಮಾನ್ಯ. ಆಹಾರವೂ ಕೂಡ ಹಿತಮಿತವಾಗಿ ಇದ್ದರೆ ದೇಹದ ಸಮತೋಲನ ಕಾಯ್ದುಕೊಳ್ಳುವುದು. ಅತಿಯಾದರೆ ಅದುವೇ ರೋಗದ ಮೂಲವಾಗುವುದು. ಸತ್ವಯುತವಾದ ಮಿತ ಆಹಾರವೇ ಆರೋಗ್ಯದ ಪರಮರಹಸ್ಯವಾಗಿದೆ. ಶರೀರ ಕ್ರಿಯೆ ಮತ್ತು ರಚನೆಯೂ ಸಹ ಇದಕ್ಕೆ ಪೂರಕವಾಗಿದೆ. ದೇಹದ ಕಣಕಣಗಳೂ ದಿನನಿತ್ಯದ ಅಗತ್ಯಗಳಿಗನುಸಾರವಾಗಿ ಆಹಾರವನ್ನು ಸ್ವೀಕರಿಸುತ್ತವೆ. ಅಗತ್ಯಕ್ಕಿಂತಲೂ ಹೆಚ್ಚಾದಾಗ ಶೇಖರಣೆಯಾಗುತ್ತ ಹೋಗುತ್ತದೆ. ಶೇಖರಣಾ ಮಾಧ್ಯಮವೇ ಕೊಬ್ಬು. ಮುಂದೆ ಕೊಬ್ಬಿನಾಂಶ ಹೆಚ್ಚಾಗಿ ಬೊಜ್ಜಿಗೆ ಕಾರಣವಾಗುತ್ತದೆ. ಬೊಜ್ಜು ಅನೇಕ ರೋಗಗಳಿಗೆ ಮಹಾದ್ವಾರವಿದ್ದಂತೆ. ಇದರೊಟ್ಟಿಗೆ ಬರುವ ರೋಗಗಳೆಂದರೆ ಮಧುಮೇಹ, ಅಧಿಕ ರಕ್ತದೊತ್ತಡ ಹೃದಯ ರೋಗ, ಮೂಳೆಸವೆತ ಇತ್ಯಾದಿ. ಇದುವೇ ವ್ಯಾಧಿ ಹಬ್ಬಿ ಬಲಿಯುವ ಪರಿ. ಇದು ದೇಹದ ಪ್ರಕೃತಿಗೆ ವಿಪತ್ತನ್ನು ತರುವ ಕಾರಣ ಅವಶ್ಯಕತೆಗನುಗುಣವಾಗಿ, ನಮ್ಮ ನಮ್ಮ ಶಾರೀರಿಕ ಕೆಲಸವನವಲಂಬಿಸಿ, ಸರಿಯಾದ ಪ್ರಮಾಣದಲ್ಲಿ ಸಮತೋಲನ ಆಹಾರವನ್ನು ಸೇವಿಸಿದರೆ ಆ ಆಹಾರವೇ ಔಷಧಿಯಾಗುತ್ತದೆ. ಪ್ರಜ್ಞಾವಂತ ಸಮಾಜ ಈ ಕಳಕಳಿಯೊಂದಿಗೆ ವ್ಯವಹರಿಸಬೇಕು. ಶ್ರೀ ಚನ್ನಬಸವಣ್ಣನವರು ಸಹ ಈ ವಿಚಾರವನ್ನು ಅನುಮೋದಿಸುತ್ತ ಹೀಗೆ ಹೇಳುತ್ತಾರೆ:

> **ರುಚಿಯನತಿ ರುಚಿಸಿದಲ್ಲಿ ವಿಷವಾಯಿತ್ತು**
> **ರುಚಿಯ ನಿಜಶಕ್ತಿಯಂತಿರಲು ಅಮೃತವಾಯಿತ್ತು**

ಆಧುನಿಕ ವೈದ್ಯಕೀಯ ಸಂಶೋಧನೆಗಳ ಪ್ರಕಾರ, 'ಒಬ್ಬ ಮನುಷ್ಯ ಹಸಿವೆಯಿಂದ ಸಾಯುವುದಕ್ಕೆ ಮೊದಲು ನೂರು ಜನ ತಿಂದು ಸಾಯುತ್ತಾರೆ' ಎಂದು ಅಭಿಪ್ರಾಯ ಪಟ್ಟಿದೆ. ಶರಣರು ಇಂದಿನ ಸಮಾಜದಲ್ಲಿ ಹಬ್ಬಿರುವ ಜೀವನಶೈಲಿಯ ರೋಗಗಳಿಗೆ ಅಂದಿನ ದಿನಮಾನದಲ್ಲಿಯೇ ಸರಿಯಾದ ಆಹಾರಕ್ರಮದ ಮುಖಾಂತರ ಒಬ್ಬ ತಜ್ಞ ವೈದ್ಯರ ರೀತಿಯಲ್ಲಿ ಪರಿಹಾರ ಸೂಚಿಸಿರುವುದನ್ನು ಕಂಡು ಪರಮಾಶ್ಚರ್ಯ ವಾಗುತ್ತದೆ.

ಹೀಗೆ ಶರಣರು ತಮ್ಮ ತಮ್ಮ ವಚನಗಳಲ್ಲಿ ಆಹಾರ ಸಂಸ್ಕೃತಿಯ ಕುರಿತು ಭಿನ್ನ ಭಿನ್ನ ಆಲೋಚನೆಗಳನ್ನು ವ್ಯಕ್ತಪಡಿಸಿರುವುದನ್ನು ನೋಡುತ್ತೇವೆ. ಈ ಲೇಖನದ ಪ್ರಾರಂಭದಲ್ಲಿ ಪ್ರಸ್ತಾಪಿಸಿದಂತೆ, ಆಧುನಿಕ ಕಾಲದಲ್ಲಿಯೂ ಆಹಾರ ಸಂಸ್ಕೃತಿಯ ಕಟ್ಟುನಿಟ್ಟಿನ ನಿಯಮ ಕಾರಣವಾಗಿ, ಲಿಂಗಾಯತರ ಸಂಖ್ಯೆ ಕಡಿಮೆಯಾಗಿದೆ ಎಂಬುದಕ್ಕೆ ಒಂದು ಘಟನೆಯನ್ನು ಇಲ್ಲಿ ಪ್ರಸ್ತಾಪಿಸಲೇಬೇಕು. ಅದು ಕೊಲ್ಲಾಪುರ ಶಾಹು ಮಹಾರಾಜರ 'ಲಿಂಗ' ಕಟ್ಟಿಕೊಳ್ಳುವ ಪ್ರಯತ್ನ ಕುರಿತು.

ಪ್ರಾಚೀನ ಕನ್ನಡ ಸಂಸ್ಕೃತಿಯ ಬೇರುಗಳಿಂದ ಪೋಷಿತವಾದ ಮಹಾರಾಷ್ಟ್ರ ಆರ್ಯಾವರ್ತವಾದರೂ ದ್ರಾವಿಡ ಸಂಸ್ಕೃತಿಯ ಸಮನ್ವಯವನ್ನು ಕಾಪಾಡಿಕೊಂಡು ಬಂದಿರುವುದು ಗಮನಿಸಬೇಕಾದ ಅಂಶ.

ಮಹಾರಾಷ್ಟ್ರದಲ್ಲಿ ಸುಮಾರು ೫೦ ಲಕ್ಷ ಲಿಂಗಾಯತ ಸಮುದಾಯ ಇದೆ. ವಿದರ್ಭ ಮಹಾರಾಷ್ಟ್ರದಲ್ಲಂತೂ ಪೂರ್ಣಪ್ರಮಾಣದ ಲಿಂಗಾಯತರಿದ್ದಾರೆ. ಆದರೆ ಕೊಲ್ಲಾಪುರ ಜಿಲ್ಲೆಯಲ್ಲಿ ಒಂದು ಸಮುದಾಯವಿದೆ. ಅವರನ್ನು "ತಿಳಿ ಆರ್ಯರು" ಎಂದು ಕರೆಯುತ್ತಾರೆ. ಅವರು ಲಿಂಗಾಯತ ಸಂಸ್ಕೃತಿಯನ್ನು ಅನುಕರಣೆ ಮಾಡುತ್ತಾರೆ. ಅವರ ಬಹಳಷ್ಟು ಆಚರಣೆಗಳೂ ಲಿಂಗಾಯತ ಆಚರಣೆಗಳೇ ಆಗಿವೆ.

ಕೊಲ್ಲಾಪೂರ ಸಂಸ್ಥಾನದ ಶಾಹೂ ಮಹಾರಾಜರು ಸುಮಾರು ೮ ದಶಕಗಳ ಹಿಂದೆ ಇಡೀ ದೇಶದಲ್ಲಿ ಪ್ರಥಮ ಎನ್ನುವಂತೆ ಬ್ರಾಹ್ಮಣೇತರ ಚಳವಳಿಯ ಮುಂಚೂಣಿಯಲ್ಲಿದ್ದವರು. ಬ್ರಾಹ್ಮಣೇತರ ಚಳವಳಿಗೆ ಎಲ್ಲ ರೀತಿಯ ಸ್ಫೂರ್ತಿ–ಚೈತನ್ಯವನ್ನು ನೀಡಿದವರು. ಹೀಗಾಗಿ ಕರ್ನಾಟಕದಲ್ಲಿ ಅಂದು ಸರ್ ಸಿದ್ಧಪ್ಪ ಕಂಬಳಿ ಅವರಂಥ ಬ್ರಾಹ್ಮಣೇತರ ನಾಯಕರಿಗೂ ಅವರಿಗೂ ಹತ್ತಿರದ ಸಂಪರ್ಕ ಉಂಟಾಗಿತ್ತು. ಆಶ್ಚರ್ಯವೆಂದರೆ ೧೯೨೪ರಲ್ಲಿ ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನ ಕಾಲಕ್ಕೆ ಬೆಳಗಾವಿಯಲ್ಲಿ ವಿವಿಧ ರೀತಿಯ ೨೦ ಅಧಿವೇಶನಗಳು ಜರುಗಿದವು. ಅವುಗಳಲ್ಲಿ ಬ್ರಾಹ್ಮಣೇತರ ಪರಿಷತ್ತಿನ ಅಧಿವೇಶನ ಕೂಡ ಒಂದು. ಅದರ ಅಧ್ಯಕ್ಷತೆಯನ್ನು ವಹಿಸಿದ್ದವರು ಸರ್ ಸಿದ್ಧಪ್ಪ ಕಂಬಳಿ. ಆದ್ದರಿಂದ ಶಾಹೂ ಮಹಾರಾಜರು ಮತ್ತು ಕಂಬಳಿಯವರು ಬ್ರಾಹ್ಮಣೇತರ ಚಳವಳಿಗೆ ಮುಂಬೈ ಪ್ರಾಂತ್ಯದಲ್ಲಿ ಬಹುದೊಡ್ಡ ನೇತಾರರಾಗಿದ್ದರು.

ಕಂಬಳಿಯವರ ಸ್ನೇಹ–ಸಂಪರ್ಕ ಹಾಗು ಕೊಲ್ಲಾಪುರದಲ್ಲಿ ಆಗಲೇ ಚಿತ್ರದುರ್ಗದ ಮಹಾಲಿಂಗ ಜಗದ್ಗುರುಗಳು ಒಂದು ಮಠವನ್ನು ಸ್ಥಾಪಿಸಿದ್ದರು. (ಈಗ ಅದು ಲಿಂಗಾಯತ ಬೋರ್ಡಿಂಗ್ ಎಂದು ಖ್ಯಾತವಾಗಿದೆ, ಆದರೆ ದುರ್ದೈವದಿಂದ ಮಠ–ಬೋರ್ಡಿಂಗ್ ಎರಡೂ ಅಸ್ತಿತ್ವಕಳೆದುಕೊಂಡು, ಅವಸಾನದ ಅಂಚಿನಲ್ಲಿವೆ) ಅದರ ಪ್ರಭಾವದಿಂದ ಶಾಹೂ ಮಹಾರಾಜರಿಗೆ ಲಿಂಗಾಯತ ಧರ್ಮದ ಬಗ್ಗೆ ಕುತೂಹಲ, ಆಸಕ್ತಿ ಉಂಟಾಯಿತು. ಸಿದ್ಧಪ್ಪ ಕಂಬಳಿ ಅವರ ಪ್ರೇರಣೆಯಿಂದ ಶಾಹೂ ಮಹಾರಾಜರು "ಲಿಂಗ"ಧಾರಣೆ ಮಾಡಿಕೊಳ್ಳಲು ಮನಸ್ಸು ಮಾಡಿದರು. ಲಿಂಗಧಾರಣೆ ದಿನಾಂಕವು ನಿಶ್ಚಿತವಾಗಿತ್ತು. ಇದರಿಂದ ಸಹಜವಾಗಿಯೇ ಅವರ ಸಾವಿರಾರು ಅಭಿಮಾನಿಗಳು ಲಿಂಗ ಕಟ್ಟಿಕೊಳ್ಳಲು ಸಿದ್ಧರಾದರು. ಎಲ್ಲ ಕಡೆಯೂ ವ್ಯಾಪಕ ಪ್ರಚಾರವಾಗಿತ್ತು. ಆದರೆ ಶಾಹೂ ಮಹಾರಾಜರ ಕೆಲವು ಹಿತೈಷಿಗಳು ಅವರಿಗೆ ಲಿಂಗ ಕಟ್ಟಿಕೊಳ್ಳದಂತೆ ಕಿವಿ ಮಾತು ಹೇಳಿದರು. "ನೀವು ಲಿಂಗ ಕಟ್ಟಿಕೊಂಡು ಲಿಂಗಾಯತರಾದರೆ, ಮಾಂಸ ತಿನ್ನುವಂತಿಲ್ಲ. ಮಾಂಸ ತಿನ್ನುವುದಾದರೆ ಲಿಂಗ ಕಟ್ಟಿಕೊಳ್ಳುವಂತಿಲ್ಲ. ಮಾಂಸಾಹಾರ ಸೇವನೆಯೇ ತಮ್ಮ ಮೂಲ ಆಹಾರ, ಅದನ್ನೇ ತಾವು ಬಿಟ್ಟರೆ ತಮ್ಮ ಕ್ಷಾತ್ರತೇಜ ಕಡಿಮೆಯಾಗಬಹುದು" ಎಂದೆಲ್ಲ ಹೇಳಿದಾಗ, ಶಾಹು ಮಹಾರಾಜರು ಲಿಂಗ ಕಟ್ಟಿಕೊಳ್ಳುವ ನಿರ್ಧಾರದಿಂದ ಹಿಂದೆ ಸರಿದರು.

ಆದರೆ ಅಷ್ಟರಲ್ಲಿ ನೂರಾರು ಗ್ರಾಮಗಳಿಗೆ ಮಹಾರಾಜರು ಲಿಂಗ ಕಟ್ಟಿಕೊಳ್ಳುವ ವಿಷಯ ತಿಳಿದಿತ್ತು ಮತ್ತು ಅವರೂ ಲಿಂಗ ಕಟ್ಟಿಕೊಳ್ಳಲು ತಯಾರಾಗಿದ್ದರು. ಹೀಗಾಗಿ ನಿಶ್ಚಿತವಾದ ದಿನಾಂಕದಂದು ಸಾವಿರಾರು ಮರಾಠಿಗರು ಲಿಂಗ ಕಟ್ಟಿಕೊಂಡರು. ಅಂದಿನಿಂದ ಅವರು ಮರಾಠಿ ಸಂಸ್ಕೃತಿಯಿಂದ ಹೊರಗಾದರು. ಅವರನ್ನು "ತಿಳಿ ಆರ್ಯರು" ಎಂದು ಉಳಿದವರು ಕರೆಯತೊಡಗಿದರು. ಅತ್ತ ಮರಾಠಿಗರು ಆಗದೆ, ಇತ್ತ ಲಿಂಗಾಯತರೂ ಆಗದೆ ಅಯೋಮಯ ಸ್ಥಿತಿಯಲ್ಲಿ ಅವರಿಂದು ಬದುಕುತ್ತಿದ್ದಾರೆ. ಮರಾಠಿಗರು ಅವರನ್ನು ಪೂರ್ಣಪ್ರಮಾಣದಲ್ಲಿ ಮರಾಠಿ ಸಂಸ್ಕೃತಿಯಲ್ಲಿ ಸೇರಿಸಿಕೊಳ್ಳುತ್ತಿಲ್ಲ. ಇತ್ತ ಲಿಂಗಾಯತರೂ ಅವರನ್ನು ತಮ್ಮ ಪ್ರವಾಹದಲ್ಲಿ ಸೇರಿಸಿಕೊಳ್ಳದೆ ದೂರಿಟ್ಟಿದ್ದಾರೆ. ಇಷ್ಟಾಗಿಯೂ ಒಂದು ವಿಶೇಷ ಸಂಗತಿಯೆಂದರೆ ಅವರು ಮಾಂಸಾಹಾರದಿಂದ ವಿಮುಖರಾಗಿದ್ದಾರೆ.

**ಆಕರ ಕೃತಿಗಳು:**


೧. ಸಾ. ಶಿ. ಮರುಳಯ್ಯ (ಸಂ): ವೀರಶೈವ ವಿಚಾರ ಸಂಕಿರಣ ಪ್ರ: ಎನ್. ಎಸ್. ಎಸ್ .ಎಸ್. ಕಲ್ಯಾಣ ಕೇಂದ್ರ, ಬೆಂಗಳೂರು, ೧೯೮೬

೨. ಬಸವಣ್ಣನವರ ಷಟ್‌ಸ್ಥಲ ವಚನಗಳು ಪ್ರ: ವಚನ ಅಧ್ಯಯನ ಕೇಂದ್ರ, ನಾಗನೂರು ರುದ್ರಾಕ್ಷಿಮಠ, ಬೆಳಗಾವಿ, ೨೦೧೮

೩. ಎಸ್. ಶಿವಣ್ಣ (ಸಂ) : ಸಮಗ್ರ ವಚನ ಸಂಪುಟ ಸಂ. ೬, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೧

೪. ಅವಿನಾಶ ಕವಿ : ಕಡೇಗಿಲು ಭದ್ರಾವತಿ, ೨೦೧೮

೫. ವೀರಣ್ಣ ರಾಜೂರ : ಶಿವಶರಣೆಯರ ವಚನ ಸಂಪುಟ ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೧


■■

# ಪುಸ್ತಕ ಪರಿಚಯ

● ಡಾ. ಎಂ. ಎಸ್. ಹುಲ್ಲೋಳಿ

**ಪಾಲ್ಕುರಿಕೆ ಸೋಮನಾಥನ**
**'ಬಸವ ಪುರಾಣ'ದ ಆಂಗ್ಲ ಅನುವಾದ**

Velcheru Narayana Rao
Gene. H. Roghair
'Siva's Warriors'
The Basava Purana of
Palkuriki Somanatha
Princeton Legacy Library
1990 by Princeton University Press

ಪಾಲ್ಕುರಿಕೆ ಸೋಮನಾಥ ಕವಿಯ ತೆಲಗು 'ಬಸವ ಪುರಾಣ'ವನ್ನು ಶ್ರೀ ವೆಲಚೇರು ನಾರಾಯಣರಾವ್ ಅವರು ರೋಘೇರ್ ಅವರ ಸಹಯೋಗದೊಂದಿಗೆ ಸರಳ, ಸುಂದರ ಭಾಷಾ ಶೈಲಿಯಲ್ಲಿ ಆಂಗ್ಲ ಭಾಷೆಗೆ ಅನುವಾದಿಸಿದ್ದಾರೆ.

ಪ್ರಸ್ತುತ ಬಸವ ಪುರಾಣವು ದಕ್ಷಿಣ ಭಾರತದ ವೀರಶೈವರ ಮಹತ್ವದ ಕೃತಿಯಾಗಿದ್ದು ಹದಿಮೂರನೆಯ ಶತಮಾನದಲ್ಲಿ ರಚಿತವಾಗಿರಬಹುದೆಂದು ಲೇಖಕರು ತರ್ಕ ಮಾಡಿದ್ದಾರೆ. ವೀರಶೈವವು 'ಲಿಂಗಾಯತ' ಬ್ರಾಹ್ಮಣ ವಿರೋಧಿ ಕ್ರಾಂತಿಕಾರಿ ಧರ್ಮವೆಂದು ಗುರುತಿಸಿದ್ದಾರೆ. ಬಸವ ಪುರಾಣವು ಶರಣರ, ಶಿವ ಭಕ್ತರ ಕಥಾಪ್ರಸಂಗಗಳ ಗುಚ್ಛವಾಗಿದ್ದು ಮತ್ತು ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ನಾಯಕತ್ವದಲ್ಲಿ ನಡೆದ ಲಿಂಗಾಯತ ಕ್ರಾಂತಿಯ ಪ್ರಭಾವದ ವಿಷಯವನ್ನು ಒಳಗೊಂಡಿದೆ.

ಏಳು ಅಧ್ಯಾಯಗಳಲ್ಲಿ ವಿಷಯ ನಿರೂಪಣೆ ಸಾಗಿದೆ. ಪ್ರಸ್ತಾವನೆ ಅಧ್ಯಾಯಗಳ ಸಾರಾಂಶ ಮತ್ತು ಅಧ್ಯಾಯಗಳಲ್ಲಿ ವಿವರವಾಗಿ ಭಕ್ತರ ಕಥಾಪ್ರಸಂಗಗಳ ನಿರೂಪಣೆ ಶಿವಭಕ್ತಿ ಪಾರಮ್ಯವನ್ನು ಎತ್ತಿ ಹಿಡಿದಿದೆ.

ಪ್ರಸ್ತಾವನೆಯಲ್ಲಿ ಲೇಖಕರು ಸೋಮನಾಥನ ಜೀವನ, ಅಂತ್ಯ ಮತ್ತು ಪ್ರಭಾವ ಕುರಿತ ದಂತ ಕಥೆಗಳು; ಬಸವ ಪುರಾಣದ ಸಾಹಿತ್ಯಿಕ ಮೌಲ್ಯ ಮತ್ತು ಸಾಮಾಜಿಕ ಪರಿಸರ; ವೀರಶೈವ ಮತ್ತು ಬಸವ ಪುರಾಣ, ಬಸವ ಪುರಾಣ ಮತ್ತು ಪೆರಿಯ ಪುರಾಣ, ವೀರಶೈವದ ಬ್ರಾಹ್ಮಣೀಕರಣ; ಬಸವ ಪುರಾಣದ ಬ್ರಾಹ್ಮಣೀಕರಣ, ಬಸವ ಪುರಾಣದ ಬಗೆಗೆ ಆಧುನಿಕ ವಿದ್ವಾಂಸರ ಅಭಿಪ್ರಾಯಗಳು, ಸೋಮನಾಥನ ಜನ್ಮಕಾಲ, ಹುಟ್ಟಿದ ಸ್ಥಳ, ಜಾತಿ ಇತ್ಯಾದಿ ಅಂಶಗಳು ಸೋಮನಾಥನ ಕೃತಿಗಳ ಪರಿಚಯ ಹಾಗು ಅನುವಾದದ ಕುರಿತು ವಾಸ್ತವಿಕ ಸತ್ಯನಿಷ್ಠ ಚರ್ಚೆಯನ್ನು ಮುಕ್ತ ಹೃದಯದಿಂದ ನಿರೂಪಿಸಿದ್ದನ್ನು ಮೆಚ್ಚಬಹುದಾಗಿದೆ.

ಸೋಮನಾಥನು ವೀರಶೈವ ಸಂಪ್ರದಾಯದನಿಷ್ಠ ಭಕ್ತ ಪಾಲಕನಾಗಿದ್ದನು. ನಂತರದ ತೆಲಗು ಕವಿಗಳು ತಮ್ಮ ಕಾವ್ಯಗಳಲ್ಲಿ ಸೋಮನಾಥನ ಹಾಗು ಬಸವ ಪುರಾಣದ ಪ್ರಭಾವವನ್ನು ಎತ್ತಿ ತೋರಿಸಿದ್ದಾರೆ. ಶಿವಭಕ್ತರು ಮಾಡಿದ ತಪ್ಪುಗಳನ್ನು ರಾಜನು ಮನ್ನಿಸುವಂತೆ ಮಾಡಿದ ಹಾಗು ಸೋಮನಾಥನು ನೇರ ಕೈಲಾಸಕ್ಕೆ ಹೋಗುವ ಈ ಎರಡು ಪವಾಡಗಳನ್ನು ಬಣ್ಣಿಸಿ ತೋರಿಸಿದ್ದಾರೆ. ಆಗ ಮೇಲಿಂದ ಮೇಲೆ ಶಿವಭಕ್ತರಿಗೂ ಹಾಗು ವೈಷ್ಣವರಿಗೂ ಜಗಳಗಳು ಆಗುತ್ತಿರುವದು ಕಂಡುಬರುತ್ತದೆ. ತೆಲಗು ಸಾಹಿತ್ಯದಲ್ಲಿ ಸಂಸ್ಕೃತ ಪ್ರಭಾವದ 'ಮಾಗ' ಹಾಗು ಜನಪದದ 'ದೇಶಿ' ಪ್ರಕಾರಗಳು ಹೆಚ್ಚು ಪ್ರಚಲಿತವಾಗಿದ್ದವು. ಸೋಮನಾಥನ ಬಸವ ಪುರಾಣವು ದೇಶಿ ಸಂಪ್ರದಾಯದ 'ದ್ವಿಪಾದ' ಶೈಲಿಯಲ್ಲಿ ರಚಿತವಾಗಿದ್ದು, ಜನಮನದಲ್ಲಿ ಅತೀವ ಪ್ರಭಾವ ಬೀರಿರುವುದನ್ನು ಕಾಣುತ್ತೇವೆ. ಕನ್ನಡದ ಪಂಪ ಮಹಾಕವಿಯ ಪ್ರಭಾವದಿಂದ ಪ್ರಭಾವಿತನಾಗಿ 'ಮಹಾಭಾರತ'ದಂತಹ ಮಾರ್ಗ ಸಂಪ್ರದಾಯದಲ್ಲಿ ಬ್ರಾಹ್ಮಣ ಕವಿ ನಾನಯ್ಯ ಹಾಗು ಇತರ ಬ್ರಾಹ್ಮಣ ಕವಿಗಳು ಸೋಮನಾಥನನ್ನು ಗುರುತಿಸಲು ಸಿದ್ಧರಿದ್ದಿಲ್ಲವೆಂದು ತೆಲಗು ಸಾಹಿತ್ಯದ ಇತಿಹಾಸಕಾರರು ಗಮನಿಸಿದ್ದಾರೆ. ಸಮಾಜದ ಜನರ ಬಾಯಲ್ಲಿ ರೂಢಿಗತವಾಗಿ ವೀರಶೈವ ಭಕ್ತರ ವೈಭವದ ಕಥೆಗಳನ್ನು ಆಧರಿಸಿ ದೇಶಿ ಸಂಪ್ರದಾಯದಲ್ಲಿ ಬಸವ ಪುರಾಣವನ್ನು ಸೋಮನಾಥನು ರಚಿಸಿದ್ದಾನೆ. ಜನಪದ ಸಾಹಿತ್ಯದಲ್ಲಿ ಮಹತ್ವದ ಕೃತಿಯನ್ನು ರಚಿಸಿದ ಸೋಮನಾಥನ

ಓಂ ನಗರ ಟೀಚರ್ಸ್ ಕಾಲನಿ, ಸಾಯಿನಗರ ಹುಬ್ಬಳ್ಳಿ, ಮೊ-೯೪೮೫೬೨೮೯

ಸಾಮರ್ಥ್ಯವನ್ನು ಬ್ರಾಹ್ಮಣ ಕವಿಗಳು ಒಪ್ಪುತ್ತಿದ್ದಿಲ್ಲ. ಸೋಮನಾಥನು ತೆಲಗು ಬಸವ ಪುರಾಣವನ್ನು ರಚಿಸಿರುವದು ಪ್ರಖ್ಯಾತವಿದೆ. ಬ್ರಾಹ್ಮಣರ ಭೇದ ನೀತಿ ಸಮಾಜದಲ್ಲಿ ಮಾಡಿರುವ ವರ್ಗ ಹಾಗು ಜಾತಿ ಭೇದಗಳನ್ನು ಕಟುವಾಗಿ ತನ್ನ ಕಾವ್ಯದಲ್ಲಿ ಖಂಡಿಸಿದ್ದಾನೆ. ತೆಲಗು ಬ್ರಾಹ್ಮಣ ಕವಿಗಳು ತಮ್ಮ ಆಶ್ರಯದಾತರಾದ ರಾಜರನ್ನು ತಮ್ಮ ಕಾವ್ಯಗಳ ಮೊದಲ ಕೇಳುಗರನ್ನಾಗಿ ಉಲ್ಲೇಖಿಸಿದ್ದಾರೆ. ಆದರೆ ಕ್ರಾಂತಿಕಾರಿ ಕವಿ ಸೋಮನಾಥನು ತಮ್ಮ 'ಬಸವ ಪುರಾಣ'ದ ಮೊದಲ ಕೇಳುಗನನ್ನಾಗಿ ತನ್ನ ಶ್ರೀಸಾಮಾನ್ಯ ಮಿತ್ರನನ್ನು ಉಲ್ಲೇಖಿಸಿದ್ದಾನೆ ಮತ್ತು ಯಾವ ಮೊದಲಿನ ಕವಿಗಳನ್ನು ಜ್ಞಾಪಿಸದೆ ಕೇವಲ ತನ್ನ ಕಾವ್ಯ ಗುರುವನ್ನು ಮಾತ್ರ ಜ್ಞಾಪಿಸಿದ್ದಾನೆ. ಸೋಮನಾಥನು ತಾನು ನಾಲ್ಕು ವೇದ ಪಾರಾಂಗತನಾಗಿದ್ದು, ಬ್ರಾಹ್ಮಣರ ನೀತಿ ನಡಾವಳಿಗಳನ್ನು ಮಾತ್ರ ಖಂಡಿಸುತ್ತೇನೆ ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ತನ್ನ ಅನೇಕ ಕೃತಿಗಳಲ್ಲಿ ಸಂಸ್ಕೃತ ಶಬ್ದ ಹಾಗು ಶ್ಲೋಕಗಳನ್ನು ಬಳಸಿದ್ದಾನೆ. ಜ್ಞಾನವನ್ನು ಮೆಚ್ಚುವ ಸೋಮನಾಥನು ಸಂಪ್ರದಾಯ ವಿರೋಧಿ, ಕ್ರಾಂತಿಕಾರಿ ವಿಚಾರಗಳನ್ನು ಒಳಗೊಂಡ ಉದಾರ ಹೃದಯಿಯಾಗಿದ್ದಾನೆ. ಕವಿಯ ಚಾರಿತ್ರ್ಯ ಹಾಗು ಶ್ರೇಷ್ಠತೆಯನ್ನು ಮೆಚ್ಚುತ್ತೇವೆ. ವೇದಗಳನ್ನು ಪಠಿಸುವ ಬ್ರಾಹ್ಮಣರ ಶ್ರೇಷ್ಠತೆಯನ್ನು ಅಲ್ಲಗಳೆಯಲು, ಕಲ್ಲಿದೇವಯ್ಯನು ತನ್ನ ಸಾಕಿದ ನಾಯಿಯ ಬಾಯಿಂದ ವೇದವನ್ನು ನುಡಿಸಿದ ಕಥೆಯನ್ನು ಸೋಮನಾಥನು ಸುಂದರವಾಗಿ ಚಿತ್ರಿಸಿದ್ದಾನೆ. ವೀರಶೈವ ತತ್ವಗಳಾದ ಗುರು, ಲಿಂಗ, ಜಂಗಮ, ಗುರು-ಶಿಷ್ಯ ಸಂಬಂಧ, ಇಷ್ಟಲಿಂಗಧಾರಣೆಯ ಶ್ರೇಷ್ಠತೆ ಇತ್ಯಾದಿ ವಿಷಯ ಚರ್ಚಿಸಲಾಗಿದೆ. ಮಧ್ಯಕಾಲೀನ ಆಂಧ್ರದಲ್ಲಿ ಇದ್ದ ಸಾಮಾಜಿಕ ಪರಿಸರ, ಭೂ ಒಡೆಯರು ಪ್ರಮುಖ ಜಾತಿಯ ಜಮೀನದಾರರ ಪ್ರಾಬಲ್ಯ, ಶೋಷಣೆಯ ವಿಷಯ ತಿಳಿಸಿ, ವೀರಶೈವ ಚಳುವಳಿಯ ಪ್ರಮುಖ ವಿಷಯ ಬಡವ, ಕೆಳವರ್ಗದ ಜಾತಿಯ ಜನರ, ಕುಶಲಕರ್ಮಿ ಪಂಚಾಳರು, ಅಸ್ಪೃಶ್ಯರನ್ನು ಉದ್ಧರಿಸಿ ಸಾಮಾಜಿಕ ಮಾನ್ಯತೆ ಹಾಗು ಸಾಮಾಜಿ ನ್ಯಾಯ ಒದಗಿಸುವುದನ್ನು ಎತ್ತಿ ತೋರಿಸಲಾಗಿದೆ. ತೆಲಗು ನಾಡು ಹಾಗು ತಮಿಳುನಾಡಿನ ಪರಿಸರದ ವಿವೇಚನೆ ನಮ್ಮ ಕಣ್ಣು ತೆರೆಸುತ್ತದೆ. ನಂತರದಲ್ಲಿ 'ಜಂಗಮ' ಬಸವ ಚಳುವಳಿಯ ಮೂಲ ಸತ್ವ ಮರೆತು ಒಂದು ಜಾತಿ ಆಗಿ ಪರಿಣಮಿಸಿ ಬ್ರಾಹ್ಮಣೀಕರಣಗೊಂಡ ಆರಾಧ್ಯರಾದ ವಿಷಯ ಚರ್ಚಿಸಿದ್ದಾರೆ. ಬಸವ ಪುರಾಣದಲ್ಲಿ ಮಹಿಳೆಯ ಸ್ಥಾನಮಾನ ಉನ್ನತಿ ಆದ ವಿಷಯ ಬಣ್ಣಿಸಲಾಗಿದೆ. 'ಕಾಯಕಮೆ ಕೈಲಾಸಮು' ಕಾಯಕವೇ ಕೈಲಾಸ ಎಂಬ ತತ್ವದ ಅನುಷ್ಠಾನ ಆದ ಭಕ್ತರ ಅನೇಕ ಕಥೆಗಳನ್ನು ವರ್ಣಿಸಲಾಗಿದೆ. ಮಡಿವಾಳ ಮಾಚಯ್ಯ, ಬೇಡರ ಕಣ್ಣಪ್ಪರ ಶಿವಭಕ್ತರ ಕಥೆಗಳನ್ನು ಉದಾಹರಿಸಲಾಗಿದೆ. ಪಂಚಾಳರು, ವಿಶ್ವಕರ್ಮರು, ಕುಶಲಕರ್ಮಿಗಳ ಜಾತಿಯ ಅನೇಕರು ತೆಲಗು ಸಾಹಿತ್ಯದಲ್ಲಿ ಉನ್ನತ ಕೃತಿಗಳನ್ನು ರಚಿಸಿದ್ದರೂ, ಬ್ರಾಹ್ಮಣರ ತತ್ವ, ಸಿದ್ಧಾಂತ, ನಡಾವಳಿಗಳನ್ನು ಬಲವಾಗಿ ಖಂಡಿಸಿದ್ದಾರೆ.

ತಮಿಳಿನ ಪುರಾಣ 'ಪೆರಿಯ ಪುರಾಣ'ದ ಕೃತಿಯನ್ನು ಚೆಕ್ಕಿಲಾರ್ ಶಿವಭಕ್ತರ ಕಥೆಗಳನ್ನು ಒಳಗೊಂಡಿದೆ. ಸೋಮನಾಥನಿಗೆ ಈ ಕೃತಿಯ ಪರಿಚಯವಿದ್ದಂತೆ ಕಾಣುವುದಿಲ್ಲವೆಂದು ಸಾಹಿತ್ಯ ಇತಿಹಾಸಕಾರರು ಅಭಿಪ್ರಾಯ ಪಟ್ಟಿದ್ದಾರೆ. ಸೋಮನಾಥನ ಸಂಸ್ಕೃತ, ತೆಲಗು, ಕನ್ನಡ, ತಮಿಳು, ಮರಾಠಿ ಭಾಷೆಗಳನ್ನು ಬಲ್ಲವನಾಗಿದ್ದನು. ಶ್ರೀಶೈಲದ ಶಿವಭಕ್ತರ ಸೂಚನೆಯಂತೆ ತಾನು ಜನಪದ ಮಾಹಿತಿ ಪಡೆದು, ವೀರಶೈವ ಭಕ್ತರ ಕಥೆಗಳನ್ನು ಕ್ರೋಢಿಕರಿಸಿ 'ಬಸವ ಪುರಾಣ' ರಚಿಸಿರುವೆನೆಂದು ಹೇಳಿದ್ದಾನೆ. ಸೋಮನಾಥನ ಬಸವ ಪುರಾಣ ಹಾಗು ತಮಿಳಿನ 'ಪೆರಿಯ ಪುರಾಣ' ಕಥೆಗಳಲ್ಲಿ ಬಹಳಷ್ಟು ಸಾಮ್ಯತೆಯನ್ನು ಕಾಣುತ್ತೇವೆ. ಚೆಕ್ಕಿಲಾರ ಜಮೀನದಾರ ಜಾತಿಯಿಂದ ಬಂದಿದ್ದು, ಬ್ರಾಹ್ಮಣರ ಬಗೆಗೆ ಗೌರವ ಉಳ್ಳವನಾಗಿದ್ದಾನೆ. ಆದರೆ ಸೋಮನಾಥನು ಕೆಳಜಾತಿಯ ಭಕ್ತರ ಕಥೆಗಳಿಗೆ ಆದ್ಯತೆ ನೀಡಿದ್ದಾನೆ ಹಾಗು ಕಠೋರ ಬ್ರಾಹ್ಮಣ ವಿರೋಧ ನೀತಿಯುಳ್ಳವನಾಗಿದ್ದಾನೆ.

ಲಿಂಗಾಯತರ ಮೂಲ ಸಿದ್ಧಾಂತವು ಬ್ರಾಹ್ಮಣರ ಶ್ರೇಷ್ಠತೆ, ಸಮಾಜದ ವ್ಯವಸ್ಥೆ, ಚಾತುರ್ವರ್ಣ ಪದ್ಧತಿಯನ್ನು ವಿರೋಧಿಸಿ ನೂತನ ಸಮಾಜ ನಿರ್ಮಾಣದ ಗುರಿ ಹೊಂದಿದ್ದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಆಂಧ್ರದ ವೀರಶೈವ ಬ್ರಾಹ್ಮಣರು ತಮ್ಮನ್ನು ಆರಾಧ್ಯರು ಎಂದು ಗುರುತಿಸಿಕೊಂಡು ತಮ್ಮ ಸಂಸ್ಕೃತದ ಜ್ಞಾನದ ಹಾಗು ತಮ್ಮ ಶ್ರೇಷ್ಠತೆಯನ್ನು ಶೈವ ವಿದ್ವಾಂಸರ ವಲಯದಲ್ಲಿ ಕಾಯ್ದುಕೊಳ್ಳಲು ಪ್ರಯತ್ನಿಸಿದರು. ತಮ್ಮ ಗ್ರಂಥಗಳನ್ನು ಬ್ರಾಹ್ಮಣೀಕರಣಗೊಳಿಸಿ ಸೋಮನಾಥನ 'ಬಸವ ಪುರಾಣ'ದ ಪ್ರಭಾವವನ್ನು ಕುಂಠಿತಗೊಳಿಸಿದರು. ಬಸವಣ್ಣನ ಪ್ರಭಾವಕ್ಕೆ ಒಳಗಾದವರು ಬಸವ ಸಂಪ್ರದಾಯವರೆಂದು ಪಂಡಿತಾರಾಧ್ಯರ ಪ್ರಭಾವಕ್ಕೆ ಒಳಗಾದವ ಆರಾಧ್ಯ ಸಂಪ್ರದಾಯದವರೆಂದು ಗುರುತಿಸಿಕೊಂಡಿದ್ದಾರೆ. ಪಂಡಿತಾರಾಧ್ಯರು ತಮ್ಮ 'ಶಿವತತ್ತ್ವ ಸಾರಮು' ಗ್ರಂಥದಲ್ಲಿ ಬ್ರಾಹ್ಮಣ ಶ್ರೇಷ್ಠತೆಯನ್ನು ಒಪ್ಪುವುದಿಲ್ಲ ಮತ್ತು ಶಿವಭಕ್ತರೆಲ್ಲರು ಸಮಾನರು ಹಾಗು ಶಿವನನ್ನು ಗೌರವಿಸದ ಬ್ರಾಹ್ಮಣರು ಅಸ್ಪೃಶ್ಯಕ್ಕಿಂತಲೂ ಕೀಳು ಎಂದು ಹೇಳಿದ್ದಾರೆ. ಆದರೆ ಸದ್ಯದ ಆರಾಧ್ಯರು ಶೈವ ಬ್ರಾಹ್ಮಣ ಸಂಪ್ರದಾಯಗಳನ್ನು ಅಳವಡಿಸಿಕೊಂಡು ಲಿಂಗಾಯತ ಸಿದ್ಧಾಂತಗಳನ್ನು ಮರೆತಿದ್ದಾರೆ.

'ಬಸವ ಪುರಾಣ'ದ ಬ್ರಾಹ್ಮಣೀಕರಣ ಕುರಿತು ತೆಲಗು ಸಾಹಿತ್ಯದ ಇತಿಹಾಸಕಾರರು ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ರೀತಿಯ ಪ್ರಯತ್ನಗಳನ್ನು ಗುರುತಿಸಿದ್ದಾರೆ. ಸಂಸ್ಕೃತ ಪ್ರಭಾವೀ ನಾನಯ್ಯ ಎಂಬ ಕವಿಯ 'ಮಹಾಭಾರತ'ಕ್ಕಿಂತಲೂ ಸೋಮನಾಥನ ದ್ವಿಪಾದ ಶೈಲಿಯು 'ಬಸವ ಪುರಾಣ'ವು ಸಾಮಾನ್ಯರಿಗೆ ಹೆಚ್ಚು ಮೆಚ್ಚುಗೆಯಾಗಿದೆ. ಟಿಕ್ಕಣ್ಣ, ಶ್ರೀನಾಥ ಮೊದಲಾದ ಬ್ರಾಹ್ಮಣ ಕವಿಗಳು ಕೃತಿಗಳಲ್ಲಿ ಚಂಪೂ ಹಾಗು ದ್ವಿಪಾದ ಸಮನ್ವಯದೊಂದಿಗೆ ಸಂಸ್ಕೃತ ಶ್ಲೋಕಗಳನ್ನು ಸೇರಿಸಿ 'ಬಸವ ಪುರಾಣ'ದ ಪ್ರಭಾವ ಕಡಿಮೆಮಾಡಲು ಪ್ರಯತ್ನಿಸಿದರು. ಬಸವ ಪುರಾಣದ ಕಥೆಗಳನ್ನು ಬಳಸಿ, ಸಂಸ್ಕೃತ ಅನುವಾದದಲ್ಲಿ ಅನೇಕ ವಿಷಯಗಳ ಕಲಬೆರಕೆ ಮಾಡಿ ಪ್ರಾಚೀನ ಕೃತಿ ವ್ಯಾಸನಿಂದ ರಚಿತವಾಗಿದ್ದು, ಪ್ರಾದೇಶಿಕ ಗ್ರಂಥಗಳು ಇದನ್ನೇ ಆಧರಿಸಿ ಸಿದ್ಧವಾಗಿವೆ ಎಂಬ ಭಾವನೆಯುನ್ನು ಉಂಟುಮಾಡಿದ್ದಾರೆ. ಅನೇಕ ಕೃತಿಗಳಲ್ಲಿ ತಮ್ಮ ಕೈಚಳಕ ತೋರಿಸಿದ್ದಾರೆ. ಹತ್ತೊಂಬತ್ತನೆ ಶತಮಾನದಲ್ಲಿ ಇಂಗ್ಲೀಷ ಭಾಷೆಯ ಪ್ರಭಾವದಿಂದ ನಂತರ ರಚಿಸಿದ ನಿಘಂಟುಗಳಲ್ಲಿ ಸೋಮನಾಥನ ಪುರಾಣದ ಶಬ್ದಗಳು ಹಾಗು ಇತರ ವ್ಯಾಕರಣಗಳ ನೆಪಮಾಡಿ ಬಸವ ಪುರಾಣ ಹಾಗು ಮುಂತಾದ ಕೃತಿಗಳು 'ಸಬ್‌ಸ್ಟಾಂಡರ್ಡ' ಗುಣಮಟ್ಟ ಹೊಂದಿಲ್ಲವೆಂದು ಆರೋಪಿಸಿದ್ದಾರೆ.

'ಬಸವ ಪುರಾಣ'ದ ಕುರಿತಾದ ವಿದ್ವಾಂಸರ ಇತ್ತೀಚಿನ ಪ್ರಾಂಜಲ ಮನಸ್ಸಿನ ಸಂಶೋಧನೆಗಳು ರೋಚಕವಾಗಿದ್ದು ಹೆಮ್ಮೆಪಡುವಂತಾಗಿವೆ. ಚಾರ್ಲಸ್ ಫಿಲಿಪ್ ಬ್ರೌನರು ಬ್ರಿಟಿಷ್ ಇಸ್ಟ್ ಇಂಡಿಯಾ ಕಂಪನಿ ಅಧಿಕಾರಿ ಮಾನವಶಾಸ್ತ್ರದಲ್ಲಿ ಆಸಕ್ತಿಯುಳ್ಳವನಾಗಿ ಕಡೆಗಣಿಸಲ್ಪಟ್ಟ ಧರ್ಮ ಲಿಂಗಾಯತ ಸಾಹಿತ್ಯ ಅದರಲ್ಲೂ ವಿಶೇಷವಾಗಿ ಲಭ್ಯವಿರುವ ಸೋಮನಾಥನ ಬಸವ ಪುರಾಣದ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಬ್ರಾಹ್ಮಣ ವಿದ್ವಾಂಸರ ಅಭಿಪ್ರಾಯಗಳಿಗೆ ಪೂರ್ವಗ್ರಹ ದೋಷಿತಗಳಿಗೆ ಸೊಪ್ಪು ಹಾಕದೆ ಲೇಖನಗಳನ್ನು ಬರೆದು ಮಹದುಪಕಾರ ಮಾಡಿದ್ದಾನೆ.

ನಂತರದಲ್ಲಿ 'ಆಂಧ್ರ ಪತ್ರಿಕೆ' (೧೯೧೪) ತೆಲಗು ದಿನಪತ್ರಿಕೆ ಆರಂಭಿಸಿದ ಶೈವ ಬ್ರಾಹ್ಮಣ ಶ್ರೀ ಕಾಶೀನಾಥನ ನಾಗೇಶ್ವರರಾವ್ ಅವರು ಉದಾರ ಹೃದಯದ ಬ್ರಾಹ್ಮಣ ವಿದ್ವಾಂಸರಾದ ಚೆಲ್ಲಕುರಿ ನಾರಾಯಣರಾವ್ ಮತ್ತು ವೆತುರಿ ಪ್ರಭಾಕರರಾವ್ ಅವರಿಂದ ಸೋಮನಾಥನ 'ಬಸವ ಪುರಾಣ' ವಿಮರ್ಶಾತ್ಮಕ ಮುನ್ನುಡಿಯೊಂದಿಗೆ ಪ್ರಕಟಿಸಿದರು. ವೀರಶೈವ ವಿದ್ವಾಂಸ ಭಂಡಾರು ತಮ್ಮಯ್ಯನವರು 'ಬಸವ ಪುರಾಣ' ಹಾಗು ಸೋಮನಾಥನ ಇತರ ಕೃತಿಗಳ ಅಭ್ಯಾಸಕ್ಕೆ ತಮ್ಮ ಜೀವನವನ್ನೇ ಮುಡಿಪಿಟ್ಟರು. ಮದ್ರಾಸ್ ವಿಶ್ವವಿದ್ಯಾಲಯದ ಪ್ರೊ. ನದವೇಲು ವೆಂಕಟರಾವ್ ಸಹ ವಿಶೇಷ ಆಸಕ್ತಿಯಿಂದ ಬಸವಪುರಾಣ ಹಾಗು ಎಲ್ಲ ಲಿಂಗವಂತ ಸಾಹಿತ್ಯ ಅಭ್ಯಸಿಸಿದರು. ವಾಲ್ಟೇರ ಮತ್ತು ಮದ್ರಾಸ್ ವಿಶ್ವವಿದ್ಯಾಲಯಗಳಲ್ಲಿ ವಿಶೇಷ ಅಧ್ಯಯನ ನಡೆಯಿತು. ಆದಾಗ್ಯೂ ಕೆಲ ಸಾಹಿತ್ಯ ಶಾಸ್ತ್ರದ ತೊಡಕುಗಳು ಪ್ರಕಟಣೆಯಲ್ಲಿ ಕಾಣಿಸಿಕೊಂಡವು. ಆದಾಗ್ಯೂ ಸೋಮನಾಥನ 'ಬಸವ ಪುರಾಣ' ತೆಲಗು ಸಾಹಿತ್ಯದ ಮಹತ್ವ ಕೃತಿ ಮತ್ತು 'ಮಹಾಕವಿ'ಯೆಂದು ಸಾಮಾನ್ಯ ಅಭಿಪ್ರಾಯಕ್ಕೆ ಈಗ ವಿದ್ವಾಂಸರು ತಲುಪಿದ್ದಾರೆ.

ಸೋಮನಾಥನು ಬ್ರಾಹ್ಮಣನೆಂದು ಜಾತಿ ನಿರ್ಣಯ ಮಾಡಿದ್ದಾರೆ. ಅದು ಇನ್ನೂ ನಿಖರ ಆಧಾರ ಹಾಗು ಸಂಶೋಧನೆಯ ಅವಶ್ಯಕತೆ ಇದೆ ಎಂದು ಸಾಮಾನ್ಯವಾಗಿ ಅಭಿಪ್ರಾಯ ಪಟ್ಟಿದ್ದಾರೆ. ಸೋಮನಾಥನ ಜೀವಿತ ಕಾಲ ಎ. ಡಿ. ೧೨೦೦ ಮತ್ತು ೧೩೦೦ ಎಂದು ನಿರ್ಣಯಿಸಿದ್ದಾರೆ. ಕವಿಯ ಜನ್ಮಸ್ಥಳ ಪಾಲ್ಕುರಿಕೆ ಹಳ್ಳಿಯು ಜನಗಮ ತಾಲೂಕು ನಲಗೊಂಡ ಜಿಲ್ಲೆ ಆಂಧ್ರದಲ್ಲಿ ಇದೆ ಎಂದು ಅಭಿಪ್ರಾಯ ಹೊಂದಿದ್ದಾರೆ. ಚೆಲುಕುರಿ ನಾರಾಯಣರಾವ್‌ರು ತುಮಕೂರು ತಾಲೂಕು ಕರ್ನಾಟಕದಲ್ಲಿಯು 'ಹಲಕುರ್ಕಿ' ಹಳ್ಳಿ ಆಗಿರಬಹುದೆಂದು ತರ್ಕಿಸಿದ್ದಾರೆ. ಕರ್ನಾಟಕದ 'ಕಲಿಕೆಮು' ಹಳ್ಳಿಯಲ್ಲಿ ಮರಣ ಹೊಂದಿದ್ದಾನೆ ಎಂದು ಹೇಳುತ್ತಾರೆ.

ಸೋಮನಾಥನು ಬರೆದ 'ಬಸವ ಪುರಾಣ' ಹಾಗು ಇತರ ತೆಲಗು ಕೃತಿಗಳೆಂದರೆ– ಅನುಭವ ಸಾರಮು, ಚತುರ್ವೇದ ಸಾರಮು, ಪಂಡಿತಾರಾಧ್ಯ ಚರಿತ್ರ, ವೃಸಧಿಪ ಶತಕ, ಕನ್ನಡದಲ್ಲಿ ಸದ್ಗುರುರಗಡ ಹಾಗು ಚನ್ನಬಸವರಗಡ ಕೃತಿಗಳನ್ನು ರಚಿಸಿದ್ದಾನೆ. ಸಂಸ್ಕೃತದಲ್ಲಿ ಸೋಮನಾಥ ಭಾಷ್ಯ ಹಾಗು ರುದ್ರಭಾಷ್ಯ ಬರೆದಿದ್ದಾನೆ.

ಶ್ರೀ ವೆಲಚೇರು ನಾರಾಯಣರಾವ್‌ರು ಪ್ರಮುಖವಾಗಿ ವೆಂಕಟರಾವ್ ಅವರು ಸಂಪಾದಿಸಿದ ಬಸವ ಪುರಾಣವನ್ನು ಆಧರಿಸಿ ಉಳಿದ ಎಲ್ಲ ಕೃತಿಗಳನ್ನು ಕಷ್ಟಪಟ್ಟು ಅವಲೋಕಿಸಿ ಈ ಆಂಗ್ಲ ಕೃತಿಯನ್ನು ಅನುವಾದಿಸಿದ್ದಾರೆ. ಅವರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

ಮೊದಲನೆಯ ಅಧ್ಯಾಯದಲ್ಲಿ– ಕಾವ್ಯ ಗುರುವಿನಲ್ಲಿ ಪ್ರಾರ್ಥನೆ, ಬಸವಣ್ಣನವರ ಜನ್ಮ ಜನ್ಮದ ಪೌರಾಣಿಕ ವರ್ಣನೆ ನಂದಿಕೇಶ್ವರನೇ ಬಸವೇಶ್ವರ, ಉಪನಯನ ಬಗೆಗೆ ಪ್ರತಿಭಟನೆ, ಬಸವೇಶ್ವರರ ಮದುವೆ, ಕಪ್ಪಡ ಸಂಗಮೇಶ್ವರಕ್ಕೆ ಪಯಣ ಇತ್ಯಾದಿ ವಿಷಯಗಳು ಪ್ರಸ್ತಾಪಿಸಲ್ಪಟ್ಟಿವೆ.

ಎರಡನೆಯ ಅಧ್ಯಾಯದಲ್ಲಿ– ಬಿಜ್ಜಳನ ಆಸ್ಥಾನದಲ್ಲಿ ಬಸವೇಶ್ವರರಿಗೆ ಮಂತ್ರಿಸ್ಥಾನ, ಕಲ್ಯಾಣ ದರ್ಶನ,

ಚನ್ನಬಸವಣ್ಣನವರ ದೈವೀಜ್ಞಾನ, ಅಲ್ಲಮಪ್ರಭುಗಳ ಆಗಮನ, ಬಲ್ಲೇಶು ಮಲ್ಲಯ್ಯ, ಕಟಕೋಟ ಬಸವೇಶ್ವರರಿಗೆ ಮೂರನೇ ಕಣ್ಣಿನ ಬಗ್ಗೆ ಸಂಗಮೇಶ್ವರರ ಪ್ರಶ್ನೆ, ಮೊಸರ ಗಡಿಗೆಯ ಉಳಿಕೆ ಇತ್ಯಾದಿ ಕಥೆಗಳು ಬಂದಿವೆ.

ಮೂರನೆಯ ಅಧ್ಯಾಯದಲ್ಲಿ-ತೋಳಗಳು ಕುದುರೆಗಳಾಗಿ ಬದಲಾವಣೆಯ ಪವಾಡ, ಬಸವಣ್ಣನವರು ತಮ್ಮ ಪತ್ನಿಯ ಸೀರೆಯನ್ನು ಜಂಗಮನಿಗೆ ನೀಡಿದ ಪ್ರಸಂಗ, ಬೋಳ ಸಂಗಯ್ಯ, ರುದ್ರಪಶುಪತಿ, ನಕ್ಕನಾಯನಾರು, ಬಿಜ್ಜ ಮಹಾದೇವಿ, ಗೊಡಗುಚಿ, ದೀಪದಕಲಿ, ನಾಟ್ಯ ನಿಮಿತ್ತ ನಂದಿ, ಉದಮುರಿ ಕನ್ನಪ್ಪ, ಕಲಿಯಾಂಬಾ ನಾಯನಾರು, ಸಕಲೇಶ್ವರರು ಮಾದಿರಾಜಯ್ಯರ ಕಥೆಗಳನ್ನು ವರ್ಣಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ- ಮಡಿವಾಳ ಮಾಚಯ್ಯ, ಬಾವುರಿ ಬ್ರಹ್ಮಯ್ಯ , ಸನಕರದಾಶೆ, ಜಗದೇಕಮಲ್ಲ, ನಿಮ್ಮವ್ವಾ ಶಿರಿಯಾಲ, ಹಾಲಾಯುಧ, ಮೆರುಮಿಂಡ ನಾಯನಾರು, ಬಾಣ, ಪಿತ್ತವ್ವ, ಕಲಿಕಾಮದೇವ, ಕದಮಲನಂಬಿ, ಚೇಡಿವಲ್ಲಭ, ಎಲಿಯದಂಗುಲಿ ಮಾರಯ್ಯ, ಗಣಪಾಲ, ಕುಮ್ಮಾರ ಗುಂಡಯ್ಯ, ಪುಸಾಲ ನಾಯನಾರು ಮುಂತಾದವರ ಕಥೆಗಳು ವಿಜೃಂಭಿಸಿವೆ.

ಐದನೆಯ ಅಧ್ಯಾಯದಲ್ಲಿ-ಕಿನ್ನರಿ ಬ್ರಹ್ಮಯ್ಯ, ಕಲಕೇತ ಬ್ರಹ್ಮಯ್ಯ, ಮೋಳಿಗೆ ಮಾರಯ್ಯ, ಕನ್ನಡ ಬ್ರಹ್ಮಯ್ಯ, ಮುಸಿಡಿ ಚೌಡಯ್ಯ, ಸುರಿಯ ಚೌಡರಸು, ತೆಲಗು ಬೊಮ್ಮಯ್ಯ ಮುಂತಾದವರ ಕಥೆಗಳನ್ನು ನೀಡಲಾಗಿದೆ.

ಆರನೆಯ ಅಧ್ಯಾಯದಲ್ಲಿ-ಏಕಾಂತ ರಾಮಯ್ಯ, ತಿರುನಾವಕರಿಸ, ಇರುತ್ತನಂದಿ, ಪಿಲ್ಲನಾಯನಾರು, ನಿಡುಮಾರ, ನಮಿನಂದಿ, ಸಾಂಖ್ಯಿತೊಂಡ, ಕೊವುರಿ ಬ್ರಹ್ಮಯ್ಯ, ದೇದಾರ ದಾಸಯ್ಯ, ಹಿರಿಯ ನಾಚಯ್ಯ, ಸೋಮಣ್ಣ, ವೈಜಕವ್ವಾ, ಸೊಡ್ಡಲದೇವ ಬಾಚಯ್ಯ, ಅರಿಯವ್ವಾ, ವೀರಸಂಕರ, ಶಿವಲೆಂಕ ಮಂಚಯ್ಯ, ಸಂಕರದಾಸಿಮಯ್ಯ ಇವರೆಲ್ಲರ ಕಥೆಗಳನ್ನು ನೀಡಿದ್ದಾರೆ.

ಏಳನೆಯ ಅಧ್ಯಾಯದಲ್ಲಿ-ಕಲ್ಲಿದೇವಯ್ಯ, ಬಿಬ್ಬಿಬಾಚಯ್ಯ, ಮಾದರ ದೊಡ್ಡಯ್ಯ, ಬಾಣಸ ಭೀಮಯ್ಯ, ಸ್ವಪಚಯ್ಯ, ಕಕ್ಕಯ್ಯ, ಭೋಗಯ್ಯ, ಗುಡ್ಡವ್ವ, ಕಲ್ಯಾಣದ ಭಕ್ತರು, ಬಸವನ ವಿಷಪ್ರಾಶನ, ಜಗದೇವ, ಎಲೇಶ್ವರು ಕೇತಯ್ಯ, ಸವರದ ನಾಚಯ್ಯ, ಅಲ್ಲಯ್ಯ ಮತ್ತು ಮಧುಪಯ್ಯ ಇವೆಲ್ಲರ ಕಥೆಗಳನ್ನು ವರ್ಣಿಸಲಾಗಿದೆ.

ತೆಲಗು ಸಾಹಿತ್ಯ ಲೋಕದಲ್ಲಿ ಸೋಮನಾಥನ ಬಸವಪುರಾಣ ನಿರ್ಲಕ್ಷಕ್ಕೆ ಒಳಗಾದಂತೆ, ಪ್ರೊ. ಎಂ. ಆರ್. ಸಾಖರೆಯವರು 'ಹಿಸ್ಟರಿ ಆ್ಯಂಡ್ ಫಿಲಾಸಫಿ ಆಫ್ ಲಿಂಗಾಯಿತಿಜಂ' ಕೃತಿ ನಿರ್ಲಕ್ಷ ಪಟ್ಟದ್ದನ್ನು ಕಾಣುತ್ತೇವೆ. ಸೋಮನಾಥನು ಕ್ರಾಂತಿಕಾರಿ ಎಂದು ಗುರುತಿಸುತ್ತೇವೆ. ಕನ್ನಡದಲ್ಲಿ ಹರಿಹರ, ರಾಘವಾಂಕರ ಕಾವ್ಯಲೋಕದಲ್ಲಿ ಹೊಸ ದಾರಿ ತುಳಿದಂತೆ, ವಚನ ಸಾಹಿತ್ಯ ಪ್ರಕಟಣೆ ಬಲ್ಲವರು ಅರಿತಂತೆ ಈಗ ಪೂಜ್ಯ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು, ಗದಗ ಹಾಗು ನಾಗನೂರ ಬೆಳಗಾವಿಯ ಉಭಯ ಮಠಗಳ ಸಮರ್ಥ ಸಾಹಿತಿಗಳ ಸಹಕಾರದಿಂದ 'ಶರಣ, ಲಿಂಗಾಯತ ಸಾಹಿತ್ಯ ಪ್ರಕಟಿಸುತ್ತಿರುವುದು ಜನತೆಗೆ ಸಂತೋಷವನ್ನುಂಟುಮಾಡಿದೆ.

■■

**ಬೇರಿಲ್ಲದ ಗಿಡುವಿಂಗೆ ಪರಿಮಳವಿಲ್ಲದ ಪುಷ್ಪ ಹುಟ್ಟಿ**
**ರೂಹಿಲ್ಲದ ಅನಲನು ಅವಗ್ರಹಿಸಿತ್ತು ನೋಡಾ**
**ವೃಕ್ಷವಿಲ್ಲದ ದಳದಲ್ಲಿ ಒಂದು ಪಕ್ಷಿ ಹುಟ್ಟಿತ್ತು ನೋಡಾ!**
**ಅಲ್ಲಲ್ಲಿ ಕಾಣದೆ ನೆತ್ತಿಯ ನಯನದಲ್ಲಿ ನೋಡಿತ್ತಲ್ಲಾ !**
**ನಿತ್ಯಾನಂದ ಪರಿಪೂರ್ಣದ ನಿಲವಿನ**
**ಅಮೃತ ಬಿಂದುವಿನ ರಸವ ದಣಿಯಲುಂಡು**
**ಪಶ್ಚಿಮದಲ್ಲಿ ಗುಹೇಶ್ವರ ಲಿಂಗವ ಸ್ವೀಕರಿಸಿತ್ತಲ್ಲಾ.**

**-ಅಲ್ಲಮಪ್ರಭು**

ಶಾಶ್ವತವಲ್ಲದ ದೇಹ (ಗಿಡ)ದಲ್ಲಿ ವಿಷಯರಹಿತವಾದ ಮನಸ್ಸು ಇದ್ದರೆ, ನಿರಾಕಾರದ ಜ್ಞಾನವು ಉಂಟಾಗುತ್ತದೆ. ದೇಹವೇ ನಾನೆಂಬ ಭಾವ ಮರೆಯಾದಾಗ ಆಜ್ಞಾಚಕ್ರ(ಎರಡು ದಳದ ಚಕ್ರ)ದಲ್ಲಿ ನಾನೇ ಶಿವನೆಂಬ ಭಾವದ ಪಕ್ಷಿ (ಜೀವಾತ್ಮ) ಹುಟ್ಟುತ್ತದೆ. ಅತ್ತ ಇತ್ತ ನೋಡದೆ ಊರ್ಧ್ವ (ನೆತ್ತಿ) ದೃಷ್ಟಿಯಿಂದ ನೋಡಿದಾಗ ಪಕ್ಷಿಗೆ ನಿತ್ಯಾನಂದ ಪರಿಪೂರ್ಣನಾದ ಶಿವನ ದರ್ಶನವಾಗುತ್ತದೆ. ಆಗ ಉಂಟಾಗುವ ಆನಂದವೇ ಅಮೃತ ರಸ. ಅದನ್ನು ಸವಿದ ಜೀವಾತ್ಮನು ಪಶ್ಚಿಮ ಶಿಖಾಚಕ್ರದಲ್ಲಿರುವ ಆ ಶಿವನನ್ನು ತನ್ನಲ್ಲಿಯೇ ಅನುಭವಿಸುತ್ತಾನೆ ಎಂಬ ಭಾವ.